ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 29 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 73 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಮೈಸೂರು ಮಿತ್ರ ಭಾನುವಾರ 29 ಜೂನ್ 2025

ಬೈಕ್ ರ್‍ಯಾಲಿ ಮೂಲಕ ಕೆಂಪೇಗೌಡರ ಜಯಂತಿ ಆಚರಣೆ

ಕೆಂಪೇಗೌಡರ ವೃತ್ತದಲ್ಲಿ ನಾಮಫಲಕ, ಪ್ರತಿಮೆ ಅನಾವರಣಕ್ಕೆ ಕೆ.ವಿ.ಶ್ರೀಧರ್ ಆಗ್ರಹ



ಮೈಸೂರು, ಜೂ. 28– ನಗರದ ಹೊರವರ್ತುಲ ರಸ್ತೆಯ ಬೆಂಗಳೂರು–ಮೈಸೂರು ಹೆದ್ದಾರಿಯ ಜಂಕ್ಷನ್‌ಗೆ "ಕೆಂಪೇಗೌಡರ ವೃತ್ತ' ಎಂದು ನಾಮಕರಣ ಮಾಡಿದ್ದರೂ ಕೊಲಂಬಿಯಾ ಏಷಿಯಾ, ಮಣಿಪಾಲ್ ವೃತ್ತ ಎಂದು ಬೇರೆ ಬೇರೆ ಹೆಸರಿನಿಂದ ಕರೆಯುತ್ತಿರುವುದು ಸರಿಯಲ್ಲ. ಕೆಂಪೇಗೌಡರ ಹೆಸರಿನಿಂದಲೇ ಕರೆಯುವ ಮೂಲಕ ಗೌರವ ಸಲ್ಲಿಸಬೇಕಿದೆ ಎಂದು ನಗರಪಾಲಿಕೆ ಮಾಜಿ ಸದಸ್ಯ, ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್ ಒತ್ತಾಯಿಸಿದ್ದಾರೆ.

ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಕೆ.ವಿ.ಶ್ರೀಧರ್ ಹಾಗೂ ಸ್ನೇಹಿತರು ನಗರದ ಹೆಬ್ಬಾಳು ಸೂರ್ಯ ಬೇಕರಿಯಿಂದ ಬಸವನಗುಡಿ ವೃತ್ತದ ಮೂಲಕ ಕೆಂಪೇಗೌಡರ ವೃತ್ತದವರೆಗೆ ಬೈಕ್ ರ್‍ಯಾಲಿ ಮೂಲಕ ಸಾಗಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ವೃತ್ತಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದ್ದು ಅದೇ ಹೆಸರಿನಲ್ಲಿ ಕರೆಯುವಂತೆ ಜನರಲ್ಲಿ ಜಾಗೃತಿ ಮೂಡಿಸಿದರು.

ನಂತರ ಮಾತನಾಡಿದ ಕೆ.ವಿ. ಶ್ರೀಧರ್, ಕೆಂಪೇಗೌರಂತಹ ಪ್ರಾತಸ್ಮರಣೀಯರ ನೆನಪಿನಲ್ಲಿ ಮೈಸೂರು ನಗರದಲ್ಲಿ ಕೆಲ ವೃತ್ತಗಳಿಗೆ ಅವರ ಹೆಸರು ನಾಮಕರಣ ಮಾಡಲಾಗಿದೆ. ಅದರಂತೆ ಮೈಸೂರು–ಬೆಂಗಳೂರು ಹೆದ್ದಾರಿಯ ಹೊರ ವರ್ತುಲ ರಸ್ತೆಯ ಜಂಕ್ಷನ್‌ಗೂ ಕೆಂಪೇಗೌಡ ವೃತ್ತ ಎಂದು ನಾಮಕರಣ ಮಾಡಲಾಗಿದೆ. ಆದರೆ, ಇದರ ಅರಿವಿರದವರು ಆ ವೃತ್ತವನ್ನು ಬೇರೆ ಬೇರೆ ಹೆಸರು ಗಳಿಂದ ಕರೆಯುತ್ತಿದ್ದಾರೆ. ಅವರಲ್ಲಿ ಬಹುತೇಕರಿಗೆ ವೃತ್ತಕ್ಕೆ ಹೆಸರಿಟ್ಟಿರುವ ಬಗ್ಗೆ ಅರಿವಿಲ್ಲ. ಆದ್ದರಿಂದ ಸರಕಾರ ಕೇವಲ ಹೆಸರು ನಾಮಕರಣ ಮಾಡಿ ಸುಮ್ಮನಾಗುವ ಬದಲು ವೃತ್ತದಲ್ಲಿ ಕೆಂಪೇಗೌಡರ ಪ್ರತಿಮೆ ಅನಾವರಣಗೊಳಿಸಿ ದೊಡ್ಡ ಅಕ್ಷರಗಳ ನಾಮಫಲಕ ಹಾಕುವ ಮೂಲಕ ನಾಡ ಪ್ರಭುವಿಗೆ ನೈಜ ಗೌರವ ಸಲ್ಲಿಸಬೇಕಿದೆ. ಆ ಮೂಲಕ ಸಾರ್ವಜನಿಕರಿಗೂ ವೃತ್ತದ ಹೆಸರು ತಿಳಿದು ಅದು ಬಳಕೆಗೆ ಬರಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ಉಸ್ತುವಾರಿ ಸಚಿವರ ಗೈರು ಸರಿಯಲ್ಲ: ಸರಕಾರದಿಂದ ಆಯೋಜಿಸುವ ಮಹನೀಯರ ಜಯಂತಿಗಳಲ್ಲಿ ಹಾಜರಿದ್ದು ಸರಕಾರದ ಪರವಾಗಿ ಗೌರವ ಸಲ್ಲಿಸಬೇಕಿರುವುದು ಜಿಲ್ಲಾ ಉಸ್ತುವಾರಿ ಸಚಿವರ ಕರ್ತವ್ಯ. ಆದರೆ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮಕ್ಕೆ ಗೈರಾಗಿರುವುದು ಬೇಸರದ ಸಂಗತಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2017ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಸರಕಾರದ ವತಿಯಿಂದ ಜಿಲ್ಲಾಮಟ್ಟದಲ್ಲೂ ಕೆಂಪೇಗೌಡರ ಜಯಂತಿ ಆಚರಿಸುವುದಾಗಿ ಘೋಷಿಸಿದರು. ಆದರೆ, ಅವರ ಸರಕಾರದ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರೇ ಜಯಂತಿ ಕಾರ್ಯಕ್ರಮದಿಂದ ದೂರ ಉಳಿಯುತ್ತಿರುವುದು ಶೋಭೆ ತರುವಂತದ್ದಲ್ಲ. ನಾಡಪ್ರಭು ಕೆಂಪೇಗೌಡರ ಜಯಂತಿಯಿಂದ ಸಚಿವರು ದೂರ ಉಳಿಯುವುದು ಎಷ್ಟು ಸರಿ? ದೂರ ಉಳಿಯುವಂತಹ ತುರ್ತು ಕೆಲಸವಾದರೂ ಏನಿತ್ತು ಎಂಬುದನ್ನು ಅವರೇ ತಿಳಿಸಬೇಕು. ಜಯಂತಿ ಘೋಷಿಸಿದಾಗಲೂ ಅವರೇ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಈಗಲೂ ಅವರೇ ಉಸ್ತುವಾರಿಗಳಾಗಿದ್ದಾರೆ. ಆದರೂ ಕಳೆದ ಮೂರು ವರ್ಷಗಳಿಂದ ಕಲಾಮಂದಿರದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಿಂದ ದೂರು ಉಳಿಯುತ್ತಿರುವುದೇಕೆ? ಸಚಿವರ ಈ ವರ್ತನೆ ಸರಿಯಲ್ಲ.

ಸಚಿವರ ಮುನಿಸು ಕೆಂಪೇಗೌಡರ ಮೇಲೋ, ಇಲ್ಲ ಒಕ್ಕಲಿಗ ಸಮುದಾಯದ ಮೇಲೋ ಎಂಬುದು ತಿಳಿಯುತ್ತಿಲ್ಲ. ಈ ಬಗ್ಗೆ ಅವರೇ ಸ್ಪಷ್ಟಪಡಿಸಬೇಕು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇಂದು ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಜೂ.28(ಜಿಎ)–ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಜೂ. 29ರ ಸಂಜೆ 5.30ಕ್ಕೆ ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ನಡೆಯಲಿದೆ ಎಂದು ಅಧ್ಯಕ್ಷ ಎಂ.ಆರ್. ಹೊಯ್ಸಳ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಂಜುನಾಥ್‌ಗೌಡ, ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಕೆ.ಆರ್.ಕ್ಷೇತ್ರದ ಮೂಲಭೂತ ಸಮಸ್ಯೆ ಬಗೆಹರಿಸಲು ತಾವು ಗಮನ ನೀಡಿದ್ದು, ನೂತನ ಪದಾಧಿಕಾರಿಗಳು ಮನೆ ಮನೆಗೂ ಭೇಟಿ ನೀಡಿ ಗ್ಯಾರಂಟಿ ಯೋಜನೆ ಪ್ರಯೋಜನ ಪಡೆಯಲು ನೆರವು, ಸ್ಥಳೀಯ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಿದ್ದಾರೆ ಎಂದರು. ಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ವರುಣ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಶಶಾಂಕ್‌ಗೌಡ, ಶ್ರೀಧರ್, ಮನೋಜ್‌ಕುಮಾರ್ ಮತ್ತಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.28(ಜಿಎ)–ಗಾಣಿಗ ಮಹಾಸಭಾದ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90 ರಷ್ಟು ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಗಾಣಿಗ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಾಸಭಾ ಅಧ್ಯಕ್ಷ ಡಾ.ಕೆ.ವಿಜಯಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಜು.31 ಕೊನೆಯ ದಿನವಾಗಿದ್ದು, ಸಮಾಜದ ಪ್ರತಿಭಾನ್ವಿತ ಆಸಕ್ತ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿ ಹಾಗೂ ಪಾಸ್‌ಪೋರ್ಟ್ ಸೈಜ್ ಫೋಟೋವನ್ನು ನಗರದ ತಿಲಕ್ ನಗರ ಬಡಾವಣೆಯ 17ನೇ ಕ್ರಾಸ್ 1ನೇ ಮೈನ್ ನಲ್ಲಿರುವ ಗಾಣಿಗ ಮಹಾಸಭಾ ಕಚೇರಿಗೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9900818151, 9611074086ಕ್ಕೆ ಸಂಪರ್ಕಿಸಿ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗಾಣಿಗ ಮಹಾಸಭಾದ ಖಜಾಂಚಿ ಕಮಲಾಕ್ಷಿ ಕಾರ್ಯದರ್ಶಿ ಮಹದೇವ ಗಾಣಿಗ, ಮುಖಂಡರಾದ ವೆಂಕಟಲಕ್ಷ್ಮಯ್ಯ ಶೆಟ್ಟಿ, ಗಜೇಂದ್ರ, ನಾರಾಯಣ, ನಾಗರಾಜು ಚಲನಚಿತ್ರ ನಿರ್ದೇಶಕ ಎ.ಸಿ.ಪೂರ್ಣಚಂದ್ರ ಉಪಸ್ಥಿತರಿದ್ದರು.

ನಿಧನ

ಗಿರಿಜಮ್ಮ



ಮೈಸೂರು,ಜೂ.28–ಮೈಸೂರಿನ ವಿ.ವಿ.ಮೊಹಲ್ಲಾ ನಿವಾಸಿ ದಿವಂಗತ ಮಲ್ಲು ಅವರ ಪತ್ನಿ ಶ್ರೀಮತಿ ಗಿರಿಜಮ್ಮ (63) ಶುಕ್ರವಾರ ನಿಧನರಾದರು. ಮೃತರು ಪುತ್ರ, ಸೊಸೆ, ಪುತ್ರಿ, ಅಳಿಯ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಚಯ್ಯ



ಮೈಸೂರು, ಜೂ.28– ಮೈಸೂರಿನ ಜೆ.ಪಿ.ನಗರ ನಿವಾಸಿ ಮಂಚಯ್ಯ(76) ಅನಾರೋಗ್ಯದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ ಲೋಲಾಕ್ಷಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಜೂ.29) ಮಧ್ಯಾಹ್ನ 1 ಗಂಟೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುಡುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೂರ್ಣಿಮಾ



ಭಾರತಿನಗರ, ಜೂ.28– ಮದ್ದೂರು ತಾಲೂಕು ಅಣ್ಣೂರು ಗ್ರಾಮದ ದಿವಂಗತ ಪುಟ್ಟೇಗೌಡ ತಮ್ಮೇಗೌಡರ ಪುತ್ರಿ ಪೂರ್ಣಿಮಾ (52) ಶನಿವಾರ ನಿಧನರಾಗಿದ್ದಾರೆ. ಮೃತರು ಸಹೋದರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಅಣ್ಣೂರು ಗ್ರಾಮದ ಜಮೀನಿನಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಎಂಎಲ್‌ಸಿ ಡಾ.ಯತೀಂದ್ರ ಹುಟ್ಟುಹಬ್ಬ: ಸಹಪಂಕ್ತಿ ಭೋಜನ

● ಪೌರಕಾರ್ಮಿಕರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಭಾಗಿ ● ಮುಂದಿನ ದಿನಗಳಲ್ಲಿ ಪೌರಕಾರ್ಮಿಕ ಮಹಿಳೆಯರಿಂದಲೇ ಭೋಜನ ವ್ಯವಸ್ಥೆ



ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಡಾ.ಯತೀಂದ್ರ ಜನ್ಮದಿನದ ಪ್ರಯುಕ್ತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಪೌರಕಾರ್ಮಿಕರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಸೌಹಾರ್ದ ಸಹಪಂಕ್ತಿ ಭೋಜನದಲ್ಲಿ ಸಾಹಿತಿಗಳು, ಪ್ರಗತಿಪರ ಚಿಂತಕರು, ರಾಜಕೀಯ ಮುಖಂಡರು ಪಾಲ್ಗೊಂಡಿದ್ದರು.

ಮೈಸೂರು, ಜೂ.28(ಜಿಎ)–ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಜನ್ಮದಿನದ ಪ್ರಯುಕ್ತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಪೌರಕಾರ್ಮಿಕರು, ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರ ಸೌಹಾರ್ದ ಸಹಪಂಕ್ತಿ ಭೋಜನ ನಡೆಸಲಾಯಿತು.

ಸಹಪಂಕ್ತಿ ಭೋಜನದಲ್ಲಿ ಸಾಹಿತಿಗಳು, ಪ್ರಗತಿಪರ ಚಿಂತಕರು, ರಾಜಕೀಯ ಮುಖಂಡರು ಪಾಲ್ಗೊಂಡಿದ್ದರು. ಈ ವೇಳೆ ಶಾಲಾ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ, ಪೌರಕಾರ್ಮಿಕ ಮಹಿಳೆಯರಿಗೆ ಸೀರೆ ವಿತರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್ ವಿತರಿಸಿ ಮಾತನಾಡಿ, ಸಮಾಜದಲ್ಲಿ ಅವಗಣನೆಗೆ ಒಳಗಾಗಿರುವ ಸಮುದಾಯವನ್ನು ಗುರುತಿಸುವ ಮೂಲಕ ಜನ್ಮದಿನದ ಆಚರಣೆಯು ಅರ್ಥಪೂರ್ಣವಾಗಿದೆ ಎಂದರು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಯಾವುದೋ ಹೋಟೆಲ್‌ನಿಂದ ಆಹಾರ ತರಿಸಿ ಸಹಪಂಕ್ತಿ ಭೋಜನ ಮಾಡುವುದಕ್ಕಿಂತ ಪೌರಕಾರ್ಮಿಕ ಮಹಿಳೆಯರಿಂದಲೇ ಆಹಾರ ತಯಾರಿಸಿ ಅವರೊಂದಿಗೆ ಕುಳಿತು ಭೋಜನ ಮಾಡುವುದು ನಮ್ಮ ಕಾರ್ಯಕ್ರಮವಾಗಬೇಕು. ಸಮಾಜವು ಇನ್ನೂ ಮೌಢ್ಯದಲ್ಲಿ ಮುಳುಗಿದ್ದು, ಮನುಷ್ಯನನ್ನು ಮನುಷ್ಯನಂತೆ ನೋಡುವಲ್ಲಿ ದೇಶವೇ ಹಿಂದೆ ಬಿದ್ದಿದೆ. ಯಾವಾಗ ಬಿಸಿಯೂಟ ಆರಂಭವಾಯಿತೋ ದಲಿತ ಮಹಿಳೆ ಅಡುಗೆ ಮಾಡುವುದನ್ನು ತಿರಸ್ಕರಿಸುವ ಮನೋಭಾವವೂ ಬೆಳೆದು ಬಂದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ನೂರಾರು ಶಾಲೆಗಳಲ್ಲಿ ಇಂಥ ಘಟನೆಗಳು ನಡೆದಿವೆ. ದಲಿತರು ಯಾವುದರಲ್ಲಿ ಕಡಿಮೆ ಇದ್ದಾರೆ. ಉಡುಗೆ, ತೊಡುಗೆ, ಶಿಕ್ಷಣ ಹಾಗೂ ಆರ್ಥಿಕತೆಯಲ್ಲಿ ಸಮರ್ಥರಾಗಿ ಬೆಳೆದಿದ್ದರೂ ಮೇಲ್ಜಾತಿಯವರ ಮನಸ್ಥಿತಿ ಸುಧಾರಿಸಿಲ್ಲ. ದಲಿತರು ತಯಾರಿಸಿದ ಅಡುಗೆಯನ್ನು ಎಲ್ಲರೂ ಸಾಮೂಹಿಕವಾಗಿ ಸೇವಿಸುವಂತ ಕಾರ್ಯಕ್ರಮವನ್ನು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಮ್ಮಿಕೊಳ್ಳಲಿ. ದಲಿತ ಮಹಿಳೆಯರ ಸ್ವಾಭಿಮಾನಕ್ಕೆ ಧಕ್ಕೆ ತಂದವರಿಗೆ ಕಠಿಣ ಶಿಕ್ಷೆಯಾಗಲಿ ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದಂದು ಇದೇ ಬೌದ್ಧವಿಹಾರದಲ್ಲಿ ಪೌರಕಾರ್ಮಿಕ ಮಹಿಳೆಯರಿಂದಲೇ ಅಡುಗೆ ಮಾಡಿಸಿ ಎಲ್ಲರೂ ಸಹಪಂಕ್ತಿ ಭೋಜನ ಮಾಡೋಣ. ಯಾವ ಸ್ಥಳದಲ್ಲೂ ಜಾತಿ ಕಾರಣಕ್ಕೆ ತಾರತಮ್ಯ ಮಾಡಿ ಆಹಾರ ನಿರಾಕರಿಸುವುದನ್ನು ಸಹಿಸಲಾಗದು ಎಂದು ಹೇಳಿದರು.

ಸಿದ್ದರಾಮಯ್ಯ ಅವರು ಅಹಿಂದ ಡ್ಯಾಮ್ ಅನ್ನು ನಿರ್ಮಿಸಿದ್ದು, ಅದನ್ನು ಭದ್ರವಾಗಿಸಲು ಡಾ. ಯತೀಂದ್ರ ಅಂಥ ಯುವಕರು ರಾಜಕಾರಣದಲ್ಲಿ ಉನ್ನತ ಸ್ಥಾನದಲ್ಲಿರಬೇಕು. ಇದನ್ನು ರಾಜಕೀಯ ವಾರಸುದಾರಿಕೆ ಎಂದು ಹೇಳಲಾಗದು, ಯತೀಂದ್ರ ಅವರಂಥ ಸಾಮಾಜಿಕ ಚಿಂತನೆ, ಕಳ ಕಳಿಯುಳ್ಳ ವ್ಯಕ್ತಿ ರಾಜಕೀಯ ಅಧಿಕಾರ ಪಡೆಯುವುದು ಒಳ್ಳೆಯದು. ಮುಂದಿನ 10 ವರ್ಷಗಳಲ್ಲಿ ಮುಖ್ಯಮಂತ್ರಿ ಗದ್ದುಗೆ ಏರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಗ್ರಾಮಾಂತರ ಘಟಕದ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ಎಂ.ನಾರಾಯಣ, ರಂಗಕರ್ಮಿ ಜನಾರ್ಧನ (ಜನ್ನಿ), ಪ್ರೊ.ಕಾಳೇಗೌಡ ನಾಗವಾರ, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಸಂಸ್ಕೃತಿ ಚಿಂತಕ ಕೆ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಂವಿಧಾನ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್.ಭಾಸ್ಕರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್, ಸಿಟಿಜನ್ ವಾಯ್ಸ್ ಫೋರಂ ರಾಜ್ಯಾಧ್ಯಕ್ಷ ಎಫ್.ಎಂ.ಕಲೀಂ, ಮುಖಂಡರಾದ ಅಹಿಂದ ಜವರಪ್ಪ, ಕಲೀಂ ಅಹ್ಮದ್, ಖ್ವಾಜಾ ಮುಶೀರ್ ಚಿಸ್ತಿ, ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ರವಿನಂದನ್ ಮಡಿವಾಳ, ಕುಂಬಾರರ ಸಂಘದ ಜಿಲ್ಲಾಧ್ಯಕ್ಷ ಎಚ್.ಎಸ್. ಪ್ರಕಾಶ್, ಉಪ್ಪಾರರ ಸಂಘದ ಜಿಲ್ಲಾಧ್ಯಕ್ಷ ಯೋಗೇಶ್ ಉಪ್ಪಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.06.2025 ಭಾನುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಸ್ಪತ್ರೆ** : ವಿಶ್ವ ಪರಿಸರ ದಿನಾಚರಣೆ ಮತ್ತು ವನ ಮಹೋತ್ಸವ ಪ್ರಯುಕ್ತ ವಾಕಥಾನ್, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಡಿ. ನಾರಾಯಣಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ. ಸಿ.ಪಿ. ಮಧು, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 7ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ, ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್ :** ಬ್ರಹ್ಮರ್ಷಿ ಪಿತಾಮಹ ಸುಭಾಷ್ ಛತ್ರೀಜಿಯವರ ದಿವ್ಯ ಪ್ರೇರಣೆಯಿಂದ ನಡೆಯಲಿರುವ ಉಚಿತ ಧ್ಯಾನ ಕಾರ್ಯಾಗಾರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ, ಗಣಪತಿ ಹೋಮ, ಸ್ಥಳ: ಚಾರಿಟಬಲ್ ಟ್ರಸ್ಟ್ ಆವರಣ, ವಾಣಿ ವಿಲಾಸ ಮೊಹಲ್ಲಾ.

■ **ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ :** 33ನೇ ವರ್ಷದ ಜಾತ್ರಾ ಮಹೋತ್ಸವ, ಅಮ್ಮನವರ ಜೋಡಿ ಹೂವಿನ ಕರಗ ಮಹೋತ್ಸವ, ಬೆಳಗ್ಗೆ 9 ಗಂಟೆಗೆ ಗಣಪತಿ ಹೋಮ, ದುರ್ಗಾ ಹೋಮ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ಶ್ರೀ ರೇಣುಕಾ ಎಲ್ಲಮ್ಮ ಹಾಗೂ ಶ್ರೀ ಕಮ್ಮಾಳಮ್ಮ ದೇವಸ್ಥಾನ, ಕೊತ್ವಾಲ್ ರಾಮಯ್ಯ ರಸ್ತೆ.

■ **ಕೊಡವ ಸಮಾಜ ಯುವ ಘಟಕ, ಮೈಸೂರು :** ಕೊಡವ ಹಾಕಿ ಪ್ರೀಮಿಯರ್ ಲೀಗ್, ಅಧ್ಯಕ್ಷತೆ : ಕೊಡವ ಸಮಾಜ ಯುವ ಘಟಕದ ಅಧ್ಯಕ್ಷ ಕೊಟೇರಾ ವೇದಿತ್ ಉತ್ತಯ್ಯ, ಮುಖ್ಯ ಅತಿಥಿಗಳು : ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಅಜ್ಜಿಕುಟೀರಾ ಎಸ್.ಪೊನ್ನಣ್ಣ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್.ಚೇತನ್, ಯುನೈಟೆಡ್ ಕೊಡವ ಸಂಘಟನೆ ಅಧ್ಯಕ್ಷ ಮಂಜು ಚಿನ್ನಪ್ಪ ಕೊಕ್ಕಲೆಮಾಡ, ಕು. ಸುರಭಿ, ಡಾ.ಎ. ಸೋನಿಯಾ ಮಂದಪ್ಪ, ಶ್ರೀಮತಿ ಸ್ಮಿತಾ ದೇವಯ್ಯ, ಪುಲ್ಲಂಗಡ ಸೌಮ್ಯ ರೋಹಿಣಿ ಬೋಪಣ್ಣ, ವಂಶಿ ಮೇರ್ಲಾ, ಸಿ.ಬಿ. ಪೂವಣ್ಣ, ಶ್ರೀಮತಿ ಶ್ವೇತಾ ಚಂಗಪ್ಪ, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಮಂದಗೆರೆ ಕಲೆ ಸಾಹಿತ್ಯ ಸಾಂಸ್ಕೃತಿಕ ಪ್ರತಿಷ್ಠಾನ :** ಮಾಸದಂಗಳದಲಿ ಕವಿ ಬೆಳಕು ಕಾರ್ಯಕ್ರಮ, ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಹಾಗೂ ಸಂಗೀತ ಪ್ರೇಮಿ, ಸಾಹಿತ್ಯ ಪ್ರೋತ್ಸಾಹದಾತ ಶ್ರೀ ಜಯಚಾಮರಾಜೇಂದ್ರ ಒಡೆಯರ್, ಸಂಗೀತ ವಿದ್ವಾನ್ ಶ್ರೀ ಮೈಸೂರು ವಾಸುದೇವಾಚಾರ್ಯ ಸ್ಮರಣಾರ್ಥ ಕಾರ್ಯಕ್ರಮ, ಕವಿಗೋಷ್ಠಿ, ಶಾಸ್ತ್ರೀಯ ಸಂಗೀತ, ನೃತ್ಯ, ವಿವಿಧ ಲೇಖಕರ ಕೃತಿ ಲೋಕಾರ್ಪಣೆ, ಮಂದಸ್ಮಿತ ಕಥಾ ಕವನ ಸಂಕಲನ, ವಿಶೇಷ ಸಂಚಿಕೆ ಬಿಡುಗಡೆ, ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ :** ಬೃಹತ್ ಉಚಿತ ಆರೋಗ್ಯ ತಪಾಸಣೆ ಶಿಬಿರ, ಅಧ್ಯಕ್ಷತೆ : ಹಿರಿಯ ವಕೀಲ ವಿ. ಕೃಷ್ಣಮೂರ್ತಿ, ಮುಖ್ಯ ಅತಿಥಿಗಳು : ಡಾ. ಎ.ಎಸ್. ಚಂದ್ರಶೇಖರ್, ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಮಹೇಶ್ ಕಾಮತ್, ಸ್ಥಳ:ದೇವಸ್ಥಾನದ ಆವರಣ, ಕುವೆಂಪುನಗರ, ಬೆಳಗ್ಗೆ 10 ರಿಂದ.

■ **ಸೂತ್ರ ಆಯುರ್ಧಾಮ :** ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶೀಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30 ರಿಂದ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಕಾಳಿಹುಂಡಿ ಶಿವಕುಮಾರ್ ಸಂಗ್ರಹಿಸಿರುವ ಯೋಗ ಮತ್ತು ಪತ್ರಿಕೆ, ಯೋಗದ ಬಗ್ಗೆ ಚಿತ್ರ ಲೇಖನಗಳ ಪ್ರದರ್ಶನ, ದೀಪ್ತಿ ಯೋಗ ಸಾಧಕರು ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉದ್ಘಾಟನೆ : ವೀರಶೈವ ಮುಖಂಡ ವೀರಶೈವ ಮೂರ್ತಿ, ಅತಿಥಿಗಳು : ಯೋಗ ಪ್ರಕಾಶ್, ಮಲೆಯೂರು ಪ್ರಭುಸ್ವಾಮಿ, ಮುತ್ತುಸ್ವಾಮಿ, ಕಾಳಿಹುಂಡಿ ಶಿವಕುಮಾರ್, ಸ್ಥಳ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ, ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮಕ್ಕಳಿಗೆ ಪ್ರತಿಭಾ ಪುರಸ್ಕಾರ : ಶಾಸಕ ದರ್ಶನ್ ಧ್ರುವನಾರಾಯಣ್, ಪ್ರಶಸ್ತಿ ಪ್ರದಾನ : ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪ್ರಶಸ್ತಿ ಪುರಸ್ಕೃತರ ಕುರಿತು : ನಿವೃತ್ತ ಡಿಜಿಪಿ ಶಂಕರ ಬಿದರಿ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಜೆಎಸ್‌ಎಸ್ ಸಮೂಹ ಸಂಸ್ಥೆಯ ಶ್ರೀಹರಿ ದ್ವಾರಕನಾಥ್, ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತರು : ಮೈಸೂರು ಮಿತ್ರ ಹಿರಿಯ ಉಪ ಸಂಪಾದಕ ಎ.ಸಿ. ಪ್ರಭಾಕರ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10.30ಕ್ಕೆ.

■ **ಪ್ರೊ. ಕೆ. ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ಹನ್ಯಾಳು ಪ್ರಕಾಶನ :** ವಿಶ್ರಾಂತ ಅಡಿಷನಲ್ ಕಮೀಷನರ್, ವಾಣಿಜ್ಯ ತೆರಿಗೆ ಇಲಾಖೆಯ ಆಲಕೆರೆ ರಾಮಲಿಂಗೇಗೌಡ ಇವರ ವಿಮಲ ಕೀರ್ತಿ ನಿರ್ದೇಶ (ಇಂಗ್ಲೀಷ್‌ನಿಂದ) ಮತ್ತು ಆಸ್ ವಿಟ್ನೆಸ್ ಆಫ್ ಟೈಮ್ (ತೆಲುಗಿನಿಂದ) ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಸ್. ಶಿವಾಜಿ ಜೋಯಿಸ್ ಮತ್ತು ಸಹ ಪ್ರಾಧ್ಯಾಪಕರಾದ ಡಾ. ಬಿ.ಎಸ್. ದಿವ್ಯಾ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಮುಖ್ಯಸ್ಥ ಡಾ. ಎಸ್.ಪಿ. ಯೋಗಣ್ಣ, ಸ್ಥಳ: ರೋಟರಿ ವೆಸ್ಟ್, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ಕಾಮಾಕ್ಷಿ ಆಸ್ಪತ್ರೆ :** ಸಂಸ್ಥಾಪಕರ ದಿನಾಚರಣೆ, ಆಸ್ಪತ್ರೆ ಸಿಬ್ಬಂದಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ, 25 ವರ್ಷ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಸನ್ಮಾನ, ಸ್ಥಳ: ಕುವೆಂಪುನಗರ ಆಸ್ಪತ್ರೆ ಮತ್ತು ಜೆ.ಪಿ.ನಗರ ಆಸ್ಪತ್ರೆ ಆವರಣ, ಮಧ್ಯಾಹ್ನ 12.15 ಮತ್ತು ಮಧ್ಯಾಹ್ನ 1.45ಕ್ಕೆ.

■ **ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ :** ಜಗನ್ನಾಥ, ಬಾಲಭದ್ರ, ದೇವಿ ಸುಭದ್ರ, ಸುದರ್ಶನ ಮತ್ತು ಚಕ್ರರಾಜ ರಥಯಾತ್ರೆ, ಶ್ರೀ ಗುಂಡಿಚಾ ಜಾತ್ರಾ, ಸ್ಥಳ: ವಿದ್ಯಾರಣ್ಯಪುರಂ ಸೆಂಟ್ರಲ್ ಲೈಬ್ರರಿ ಪಾರ್ಕ್, ಮಧ್ಯಾಹ್ನ 2 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಶ್ರೀ ನಟರಾಜ ಸ್ವಾಮೀಜಿ, ಉದ್ಘಾಟನೆ ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ಕೆ.ಎನ್. ಲೋಲಾಕ್ಷಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕದ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಕಾಯಕಶ್ರೀ ಪ್ರಶಸ್ತಿ ಪುರಸ್ಕೃತರು : ಕಾಯಕ ಜೀವಿಗಳಾದ ಎಸ್.ಐ. ಮಂಜುನಾಥ್, ಎನ್. ರಾಮಚಂದ್ರರಾವ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

■ **ಕೃಷ್ಣರಾಜ ವಿಧಾನಸಭಾ ಯುವ ಕಾಂಗ್ರೆಸ್ ಸಮಿತಿ :** ಸಮಿತಿಯ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಂಜುನಾಥ್‌ಗೌಡ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಸಂಜೆ 5.30ಕ್ಕೆ

■ **ರಾಗಾ ವೈಭವ :** ವಿದ್ವಾನ್ ಪಿ. ಉನ್ನಿಕೃಷ್ಣನ್ ಅವರಿಂದ ಶಾಸ್ತ್ರೀಯ ಸಂಗೀತ ಗಾಯನ, ವಿದ್ವಾನ್ ನಿಶಾಂತ್ ಚಂದ್ರನ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಪ್ರೊ. ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರಂಗಾಯಣ :** ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ–2025, ಉದ್ಘಾಟನೆ : ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್, ಮುಖ್ಯ ಅತಿಥಿಗಳು : ರಂಗ ಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮೈಸೂರಿನ ನೇಪಥ್ಯ ರಂಗ ತಂಡದಿಂದ ಸ್ಮಶಾನ ಕುರುಕ್ಷೇತ್ರ ನಾಟಕ ಪ್ರದರ್ಶನ, ರಚನೆ : ಕುವೆಂಪು, ನಿರ್ದೇಶನ : ಮಂಜುನಾಥ್ ಭ್ಯಾಟೆ, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ನಮ್ದೆ ನಟನೆ ಸಾಂಸ್ಕೃತಿಕ ವೇದಿಕೆ :** ನಮ್ದೆ ನಟನೆ ಸಾಂಸ್ಕೃತಿಕ ವೇದಿಕೆ ಕಲಾವಿದರಿಂದ ನಾಯಿ ಕಳೆದಿದೆ ನಾಟಕ ಪ್ರದರ್ಶನ, ನಿರ್ದೇಶನ : ರಾಜೇಂದ್ರ ಕಾಮತ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30 ರಿಂದ.

■ **ಕಲ್ಪವೃಕ್ಷ ಟ್ರಸ್ಟ್ :** ಅಂತರಂಗ ಬಹಿರಂಗ ತಂಡದಿಂದ ಪೋಲಿಯರ್ ವಿರಚಿತ ಹಾಸ್ಯ ನಾಟಕ ಅನುಮಾನದ ಅವಾಂತರ, ನಿರ್ದೇಶನ : ಎಸ್. ವಿಕಾಸ್, ಅನುವಾದ : ಎಂ. ರಾಮರಾವ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ ವಿ ಭಟ್, ಹಾಗೂ ಅಂಬಯ್ಯನುಲಿ, ವ್ಯಾಖ್ಯಾನ –ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ರೋಗಿಗಳು ಮತ್ತು ವೈದ್ಯರ ಬಾಂಧವ್ಯ ಕುರಿತು ಹಿರಿಯ ಹೃದ್ರೋಗ ತಜ್ಞರು ಹಾಗೂ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಹೃದ್ರೋಗ ವಿಜ್ಞಾನಗಳ ವಿಭಾಗದ ನಿರ್ದೇಶಕರಾದ ಡಾ. ಕೇಶವಮೂರ್ತಿ ವಿ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಮಕ್ಕಳ ಮಂಟಪ ಮಕ್ಕಳ ಸಾಹಿತ್ಯ ರಂಗ, ಮಕ್ಕಳ ಪತ್ರಗಳನ್ನು ಬರಹ ಆಧಾರಿಸಿದ ಕಾರ್ಯಕ್ರಮ, 10.30 KRISH TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 11.00 ಮನ್ ಕೀ ಬಾತ್ – ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಬಸವರಾಜಯ್ಯ ಮತ್ತು ಸಂಗಡಿಗರಿಂದ ಸಿದ್ಧಪ್ಪಾಜಿ ಕಥೆ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ರೇಣುಕಾ ನಾಕೋಡ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ ಚಂದ್ರಮುಖಿ–ಪ್ರಾಣಸಖಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ, ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಮನ್ ಕೀ ಬಾತ್ – ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರದ ಜನತೆಯೊಡನೆ ಹಂಚಿಕೊಂಡ ಮನದ ಮಾತು ಕಾರ್ಯಕ್ರಮದ ಕನ್ನಡ ಅವತರಣಿಕೆಯ ಮರುಪ್ರಸಾರ, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು –ರಾಜಪ್ಪ, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾರದ ಅಖಿಲಭಾರತ ಸಂಗೀತ ಸಭಾ, ಅಲಿಶ್ ಮೋಹನ್ ಹಾಡುಗಾರಿಕೆ – ಖಯಾಲ್

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 29 ಭಾನುವಾರ 2025

ಸಂಪುಟ: 46 | ಸಂಚಿಕೆ: 73 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸರ್ಕಾರ ಎಷ್ಟು ಹಣವನ್ನಾದರೂ ನೀಡುತ್ತೆ

ಅದ್ದೂರಿ ದಸರಾ ಆಚರಿಸಿ



■ ಈ ಬಾರಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ಉತ್ಸವ ■ ಮೈಸೂರು ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ■ ದಸರಾ ಉನ್ನತ ಸಮಿತಿ ಸಭೆ; ವಿಜೃಂಭಣೆ ಭರಾಟೆಯಲ್ಲಿ ದಸರಾ ಚಾರಿತ್ರಿಕ ಮಹತ್ವ ಮರೆಯಾಗಬಾರದು ■ ಬೆಂಗಳೂರು ಕಾಲ್ತುಳಿತ ಪರೋಕ್ಷ ಪ್ರಸ್ತಾಪ; ಜನರು, ಪ್ರವಾಸಿಗರ ಸುರಕ್ಷತೆ, ಅನುಕೂಲತೆಗೆ ಪ್ರಥಮ ಆದ್ಯತೆ ನೀಡಿ ■ ದಸರಾ ವೇಳೆ ಮೈಸೂರು ಸೌಂದರ್ಯ ಇಮ್ಮಡಿಗೆ ದೀಪಾಲಂಕಾರ ವಿಜೃಂಭಿಸಲಿ ■ ಅ.2 ಗಾಂಧಿ ಜಯಂತಿಯಾದ್ದರಿಂದ ಅವರ ವಿಚಾರಧಾರೆಗೂ ಅವಕಾಶ ಕಲ್ಪಿಸಿ ■ ಅರಮನೆ ಆವರಣದಲ್ಲಿ ಆಸನ ವ್ಯವಸ್ಥೆ ಮಿತಗೊಳಿಸಿ ■ ಗೋಲ್ಡ್‌ಕಾರ್ಡ್ ಗೊಂದಲಕ್ಕೆ ಆಸ್ಪದ ಮಾಡಿಕೊಡಬೇಡಿ

ಬೆಂಗಳೂರು, ಜೂ.28(ಕೆಎಂಶಿ)–ರಾಜ್ಯದಲ್ಲಿ ಉತ್ತಮ ಮಳೆಯಾಗಿ ರೈತರು ಮತ್ತು ಜನರು ಸಂತೃಪ್ತರಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ವಿಶ್ವವಿಖ್ಯಾತ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸಿ ಎಂದು ಮೈಸೂರು ಜಿಲ್ಲಾಡಳಿತಕ್ಕೆ ಸೂಚಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದಕ್ಕಾಗಿ ಸರ್ಕಾರ ಎಷ್ಟು ಹಣವನ್ನಾದರೂ ನೀಡಲಿದೆ ಎಂದಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಾಡಹಬ್ಬ ಮೈಸೂರು ದಸರಾ–2025 ಆಚರಣೆ ಕುರಿತು ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಈ ಸೂಚನೆ ನೀಡಿದ ಮುಖ್ಯಮಂತ್ರಿಗಳು, ದಸರಾಕ್ಕೆ ತನ್ನದೇ ಆದ ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿದೆ. ಇದಕ್ಕೆ ಪೂರಕವಾಗಿ ದಸರಾ ಆಚರಿಸಿ. ವಿಜೃಂಭಣೆ ರಭಸದಲ್ಲಿ ದಸರಾದ ಚಾರಿತ್ರಿಕ ಮಹತ್ವ ಮರೆಯಾಗಬಾರದು. ಅನಗತ್ಯವಾಗಿ ಹಣ ಖರ್ಚು ಮಾಡುವುದು ವೈಭವ ಅಲ್ಲ. ಜನರ, ಪ್ರವಾಸಿಗರ ಸುರಕ್ಷತೆ ಮತ್ತು ಅನುಕೂಲಕ್ಕೆ ಪ್ರಥಮ ಆದ್ಯತೆ ನೀಡಿ ಎಂದು ಸಲಹೆ ನೀಡಿದರು.

ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಕ್ರೀಡಾಂಗಣದ ಸಮೀಪ ಸಂಭವಿಸಿದ ಕಾಲ್ತುಳಿತ ದುರಂತ ಗಮನದಲ್ಲಿಟ್ಟುಕೊಂಡು ಈ ಬಾರಿಯ ದಸರಾ ಉತ್ಸವಕ್ಕೆ ಹೆಚ್ಚಿನ ಜನ ಸೇರುವ ಸಾಧ್ಯತೆ ಇದ್ದು, ಪೊಲೀಸರು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅಲ್ಲದೆ, ಜನಸ್ನೇಹಿಯಾಗಿ ಪ್ರವಾಸಿಗರೊಂದಿಗೆ ವರ್ತಿಸುವಂತೆ ಸಭೆಯಲ್ಲಿದ್ದ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು. ದಸರಾ ಸಂದರ್ಭದಲ್ಲಿ ಜನದಟ್ಟಣೆ ನಿಯಂತ್ರಣಕ್ಕೆ ಹೆಚ್ಚಿನ ಒತ್ತು ನೀಡಬೇಕು. 10 ಲಕ್ಷಕ್ಕೂ ಹೆಚ್ಚು ಮಂದಿ ಸೇರುವ ಸಾಧ್ಯತೆ ಇದೆ. ವಿದೇಶಿ ಪ್ರವಾಸಿಗರೂ ಹೆಚ್ಚಿನ ಪ್ರಮಾಣದಲ್ಲಿ ಆಗಮಿಸುತ್ತಾರೆ. ಯಾವುದೇ ಕಾರಣಕ್ಕೂ ಅನಾಹುತ ಸಂಭವಿಸದಂತೆ ಎಲ್ಲಾ ಕಡೆ ಮುನ್ನೆಚ್ಚರಿಕೆ ವಹಿಸಬೇಕು. ಅರಮನೆ ಮುಂಭಾಗದಲ್ಲಿ ಆಸನಗಳ ವ್ಯವಸ್ಥೆ ಕಳೆದ ಬಾರಿಗಿಂತ ಕಡಿಮೆ ಮಾಡಿ, ಜನದಟ್ಟಣೆ ನಿಯಂತ್ರಿಸಲು ಕ್ರಮ ಕೈಗೊಳ್ಳಿ. ಕಳೆದ ವರ್ಷ ದಸರಾ ಆಚರಣೆಗೆ 40 ಕೋಟಿ ರೂ. ಅನುದಾನ ಒದಗಿಸಲಾಗಿತ್ತು, ಈ ಬಾರಿ ಇನ್ನೂ ಅದ್ದೂರಿಯಾಗಿರಲಿ. ಮೈಸೂರು ನಗರದ ಸೌಂದರ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಿ, ದೀಪಾಲಂಕಾರ ವಿಜೃಂಭಣೆಯಿಂದಿರಲಿ. ಸರ್ಕಾರದ ಸಾಧನೆ ಮತ್ತು ಇಲಾಖಾ ಕಾರ್ಯಕ್ರಮಗಳನ್ನು ಸಮರ್ಥವಾಗಿ ಬಿಂಬಿಸುವ ವಸ್ತುಪ್ರದರ್ಶನ, ಸ್ತಬ್ಧಚಿತ್ರ ಪ್ರದರ್ಶನ ಆಯೋಜಿಸಬೇಕು. ಅ.2ರಂದು ವಿಜಯದಶಮಿ ಇರುವ ಕಾರಣ ಸ್ತಬ್ಧಚಿತ್ರಗಳಲ್ಲಿ ಗಾಂಧೀಜಿ ವಿಚಾರಧಾರೆಗಳಿಗೂ ಅವಕಾಶ ಕಲ್ಪಿಸಬೇಕು. ಕಲ್ಯಾಣ ಕಾರ್ಯಕ್ರಮಗಳು, ಗ್ಯಾರಂಟಿ ಯೋಜನೆಗಳ ಮಾಹಿತಿ ಒದಗಿಸುವ ವ್ಯವಸ್ಥೆ ಮಾಡಬೇಕು, ಪ್ರತಿ ಇಲಾಖೆಯಲ್ಲಿ ▶ 6ನೇ ಪುಟಕ್ಕೆ



ನಾಡಹಬ್ಬ ಮೈಸೂರು ದಸರಾ–2025 ಆಚರಣೆ ಕುರಿತು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಶನಿವಾರ ಉನ್ನತ ಮಟ್ಟದ ಸಮಿತಿ ಸಭೆ ನಡೆಯಿತು. ಈ ವೇಳೆ ಸಂಪುಟದ ಸಚಿವರು, ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಬಾರಿಯ ದಸರಾವನ್ನ ಹೊಸ ಸಿಎಂ ಉದ್ಘಾಟಿಸ್ತಾರೆ!

ಮೈಸೂರು, ಜೂ.28(ಎಂಟಿವೈ)–ಸೆಪ್ಟೆಂಬರ್ ಕ್ರಾಂತಿಯಲ್ಲಿ ಮುಖ್ಯಮಂತ್ರಿ ಬದಲಾಗುವುದು ಖಚಿತವಾಗಿದ್ದು, ಈ ಬಾರಿಯ ದಸರಾ ಮಹೋತ್ಸವವನ್ನು ಹೊಸ ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಭವಿಷ್ಯ ನುಡಿದಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸೆಪ್ಟೆಂಬರ್‌ನಲ್ಲಿ ರಾಜ್ಯ ರಾಜಕೀಯದಲ್ಲಿ ಆಗುವ ಕ್ರಾಂತಿಯಲ್ಲಿ ಮುಖ್ಯಮಂತ್ರಿ ಬದಲಾಗುವುದು ಖಚಿತ. ಆದರೆ, ವಿರೋಧ ಪಕ್ಷದ ನಾಯಕ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಆಗುವುದಿಲ್ಲ. ▶ 6ನೇ ಪುಟಕ್ಕೆ

ಮೈಸೂರು ದಸರಾ ಮಹತ್ವದ ದೃಷ್ಟಿಯಿಂದ ಚಾಮರಾಜನಗರ ದಸರಾ ಉತ್ಸವ ನಡೆಯಲ್ಲ

● ಸಿದ್ದರಾಮಯ್ಯ ಸ್ಪಷ್ಟೋಕ್ತಿ ● ಸಚಿವ ಮಹದೇವಪ್ಪ, ಇನ್ನಿತರೆ ಜನಪ್ರತಿನಿಧಿಗಳ ಒತ್ತಾಯಕ್ಕೂ ಖಡಕ್ ಉತ್ತರ ● ಶ್ರೀರಂಗಪಟ್ಟಣ ಹಿಂದೆ ರಾಜಧಾನಿ ಆಗಿದ್ದರಿಂದ ಅಲ್ಲಿನ ದಸರಾ ಮುಂದುವರಿಕೆ

ಬೆಂಗಳೂರು,ಜೂ.28(ಕೆಎಂಶಿ)–ಚಾಮರಾಜನಗರದಲ್ಲಿ ಈ ಬಾರಿ ದಸರಾ ಉತ್ಸವ ನಡೆಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ದಸರಾ ಉನ್ನತ ಮಟ್ಟದ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡುವ ಸಂದರ್ಭದಲ್ಲೇ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸೇರಿದಂತೆ ಹಲವರು, ಹಿಂದಿನ ಆಚರಣೆ ಮುಂದುವರೆಸುವಂತೆ ಮಾಡಿದ ಮನವಿಯನ್ನು ಖಡಾಖಂಡಿತವಾಗಿ ತಳ್ಳಿಹಾಕಿದರು. ಚಾಮರಾಜನಗರದಲ್ಲಿ ದಸರಾ ನಡೆಸುವುದರಿಂದ ಮೈಸೂರು ದಸರಾ ಮೇಲಿನ ಮಹತ್ವ ಕಡಿಮೆ ಆಗುತ್ತದೆ. ಅಲ್ಲಿ ಯಾವ ಕಾರಣಕ್ಕಾಗಿ ನಡೆಸಬೇಕು ಎಂದರು. ಶ್ರೀರಂಗಪಟ್ಟಣ ಮೊದಲು ರಾಜಧಾನಿಯಾಗಿತ್ತು. ▶ 6ನೇ ಪುಟಕ್ಕೆ

ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಇಲ್ಲವೇ ದೀಪಾ ಭಾಸ್ತಿಯವರಿಂದ ಈ ಬಾರಿ ದಸರಾ ಉದ್ಘಾಟನೆ?



ಬಾನು ಮುಷ್ತಾಕ್



ದೀಪಾ ಭಾಸ್ತಿ

ಬೆಂಗಳೂರು: ಈ ಬಾರಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ಒಟ್ಟು 11 ದಿನಗಳ ಕಾಲ ದಸರಾ ಆಚರಣೆ ನಡೆಯಲಿದ್ದು, ಬೂಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಇಲ್ಲವೇ ದೀಪಾ ಭಾಸ್ತಿ (ಬರಹಗಾರ್ತಿ ಮತ್ತು ಅನುವಾದಕಿ) ಅವರನ್ನು ಉದ್ಘಾಟಕರಾಗಿ ಪರಿಗಣಿಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಚರ್ಚೆ ನಡೆದಿದೆ. ಈ ಬಾರಿ ಮಹಿಳೆಯರ ಹೆಸರೇ ಅಂತಿಮ ಗೊಳಿಸಲು ಸಿಎಂ ನಿರ್ಧರಿಸಿದರೆ, ಅವರಿಬ್ಬರಲ್ಲಿ ಒಬ್ಬರು ದಸರಾ ಉದ್ಘಾಟಕರಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಡಾ.ಪರಮೇಶ್ವರ್ ಮಧ್ಯರಾತ್ರಿ ಭೇಟಿ ಮಾಡಿದ್ದು ನಿಜ; ಆದರೆ ಪವರ್ ಶೇರಿಂಗ್ ಚರ್ಚೆ ಆಗಿಲ್ಲ

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟನೆ ● ಒಟ್ಟಾಗಿ ಕೆಲಸ ಮಾಡುವ ವಿಚಾರವಷ್ಟೇ ಚರ್ಚೆ ಆಗಿದೆ ● ಸಣ್ಣ ಕೈಗಾರಿಕೆಗೆ ಪ್ರತ್ಯೇಕ ಸಚಿವಾಲಯ



ಡಿ.ಕೆ.ಶಿವಕುಮಾರ್

ಬೆಂಗಳೂರು, ಜೂ.28 (ಕೆಎಂಶಿ)–ಗೃಹಸಚಿವ ಡಾ.ಜಿ. ಪರಮೇಶ್ವರ್ ಮಧ್ಯರಾತ್ರಿ ನನ್ನನ್ನು ಭೇಟಿ ಮಾಡಿದ್ದು ನಿಜ. ಆದರೆ, ಪವರ್ ಶೇರಿಂಗ್ ವಿಚಾರ ಚರ್ಚೆ ಆಗಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಪರಮೇಶ್ವರ್ ಅವರೊಂದಿಗೆ ಬೇರೆ ವಿಚಾರ ಕುರಿತು ಚರ್ಚೆ ನಡೆಯಿತು. ಪವರ್ ಶೇರಿಂಗ್ ವಿಚಾರ ಅಲ್ಲ. ನಾವೆಲ್ಲರೂ ಸೇರಿ ಒಟ್ಟಾಗಿ ಶಿಸ್ತಿನಿಂದ ಕೆಲಸ ಮಾಡಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಇದರ ಹೊರತಾಗಿ ಬೇರೆ ಯಾವುದೇ ವಿಚಾರವಿಲ್ಲ ಎಂದರು.

ಪ್ರತ್ಯೇಕ ಸಚಿವಾಲಯ: ಇದಕ್ಕೂ ಮುನ್ನ, ಕಾಸಿಯಾ ಶ್ರೇಷ್ಠತಾ ಮತ್ತು ನಾವೀನ್ಯತಾ ಕೇಂದ್ರ ಮತ್ತು ವಸ್ತುಪ್ರದರ್ಶನ ಕೇಂದ್ರ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಣ್ಣ ಕೈಗಾರಿಕೆಗಳಿಗಾಗಿ ಪ್ರತ್ಯೇಕ ಸಚಿವಾಲಯ ರಚಿಸಲು ಮುಖ್ಯಮಂತ್ರಿ ಸೂಚಿಸಿದ್ದು, ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಕೆಐಎಡಿಬಿಯಿಂದ ಶೇ.20ರಷ್ಟು ಅನುದಾನ ಸಣ್ಣ ಕೈಗಾರಿಕೆಗಳಿಗೆ ನೀಡಬೇಕು ಎಂಬ ಕಾನೂನಿದೆ, ಸಚಿವ ಎಂ.ಬಿ.ಪಾಟೀಲ್ ಹಾಗೂ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಸಣ್ಣ ಕೈಗಾರಿಕೆಗಳಿಗೆ ಒತ್ತು ನೀಡಬೇಕು, ಕಾರ್ಮಿಕರ ವಿಚಾರವನ್ನೂ ಚರ್ಚಿಸುತ್ತೇವೆ, ಜೊತೆಗೂಡುವುದು ಆರಂಭ, ಜೊತೆಗೂಡಿ ಚರ್ಚಿಸುವುದು ಪ್ರಗತಿ, ಜೊತೆಗೂಡಿ ಕೆಲಸ ಮಾಡುವುದು ಯಶಸ್ಸು, ಕಾಸಿಯಾ ಸಂಸ್ಥೆ ಮುಂದಿನ ಪೀಳಿಗೆಗಾಗಿ ಕೌಶಲಾಭಿವೃದ್ಧಿ ಕೆಲಸ ಮಾಡುತ್ತಿದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರ ಮಾಡದ ಕೆಲಸವನ್ನು ಕಾಸಿಯಾ ಮಾಡುತ್ತಿದ್ದು, ಅಭಿನಂದನೆ ಸಲ್ಲಿಸುವೆ. ▶ 6ನೇ ಪುಟಕ್ಕೆ

ವಿಷಪ್ರಾಶನದಿಂದ ಐದು ಹುಲಿಗಳ ಸಾವು ಪ್ರಕರಣ

ಮೂವರು ಆರೋಪಿಗಳ ಬಂಧನ

ಚಾಮರಾಜನಗರ, ಜೂ.28– ವಿಷಪ್ರಾಶನದಿಂದ ಐದು ಹುಲಿಗಳ ಹತ್ಯೆಗೈದ ಆರೋಪದಡಿ ಮೂವರನ್ನು ಬಂಧಿಸಲಾಗಿದೆ. ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವಲಯದ ಮೀಣ್ಯಂ ಅರಣ್ಯ ಪ್ರದೇಶದಲ್ಲಿ ತಾಯಿ ಹುಲಿ ಹಾಗೂ ನಾಲ್ಕು ಮರಿ ಹುಲಿಗಳ ಅಸ್ವಾಭಾವಿಕ ಸಾವು ಪ್ರಕರಣವನ್ನು ಅರಣ್ಯ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆಯಲ್ಲಿ ಭೇದಿಸಿ, ಈ ಸಂಬಂಧ ಕೊಪ್ಪ ಗ್ರಾಮದ ಕೋನಪ್ಪ, ಮಾದರಾಜು ಹಾಗೂ ನಾಗರಾಜನನ್ನು ಶನಿವಾರ ಬಂಧಿಸಿದ್ದಾರೆ. ಇವರನ್ನು ಬಿಗಿ ಭದ್ರತೆಯಲ್ಲಿ ಕೊಳ್ಳೇಗಾಲದ ಸರ್ಕಾರಿ ಉಪ ವಿಭಾಗದ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ, ಪ್ರಧಾನ ಸಿವಿಲ್ ನ್ಯಾಯಾಧೀಶರ ನಿವಾಸಕ್ಕೆ ಕರೆತಂದು ಹಾಜರುಪಡಿಸಿದರು.

ಹೂಗ್ಯಂ ವನ್ಯಜೀವಿ ವಲಯದ ಗಾಜನೂರು ಗಸ್ತು ಅರಣ್ಯ ಪ್ರದೇಶದಲ್ಲಿ ಜೂ.26ರಂದು ಐದು ಹುಲಿಗಳ ಕಳೇಬರಗಳು ಪತ್ತೆಯಾಗಿದ್ದವು. ಏಕಕಾಲದಲ್ಲಿ ಐದು ಹುಲಿ ಸಾವನ್ನಪ್ಪಿರುವುದು ಸಾಕಷ್ಟು ಅನುಮಾನಗಳನ್ನು ಹುಟ್ಟುಹಾಕಿತ್ತು. ಅಸ್ವಾಭಾವಿಕವಾಗಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ್ದರು. ಪಶುವೈದ್ಯಾಧಿಕಾರಿಗಳ ಪ್ರಾಥಮಿಕ ವೈದ್ಯಕೀಯ ಪರೀಕ್ಷೆಯಲ್ಲಿ ಆ ಐದು ಹುಲಿಗಳು ವಿಷಪ್ರಾಶನದಿಂದ ಸಾವನ್ನಪ್ಪಿರುವುದಾಗಿ ಕಂಡುಬಂದಿತ್ತು. ಆದ್ದರಿಂದ ಈ ಪ್ರಕರಣವನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಅನ್ವಯ ಗಂಭೀರವಾದ ▶ 6ನೇ ಪುಟಕ್ಕೆ



ಕೊಪ್ಪ ಗ್ರಾಮದ ಕೋನಪ್ಪ, ಮಾದರಾಜು ಹಾಗೂ ನಾಗರಾಜನನ್ನು ಪೊಲೀಸರು ಬಂಧಿಸಿರುವುದು.

ತನಿಖಾ ತಂಡದಲ್ಲಿ ಕೊಂಚ ಬದಲಾವಣೆ

5 ಹುಲಿಗಳು ಮೃತಪಟ್ಟ ಘಟನೆ ಸಂಬಂಧ ಸರ್ಕಾರದಿಂದ ಮೊದಲು ರಚಿಸಲಾಗಿದ್ದ ಉನ್ನತ ಮಟ್ಟದ ತನಿಖಾ ತಂಡದಲ್ಲಿ ಕೆಲವೊಂದು ಬದಲಾವಣೆ ಮಾಡಲಾಗಿದೆ. ಎಪಿಸಿಸಿಎಫ್ ಕುಮಾರ್ ಪುಷ್ಕರ್ ಅಧ್ಯಕ್ಷತೆಯಲ್ಲಿ ತಂಡ ರಚಿಸಿ, ಮೈಸೂರು ಹುಲಿ ಯೋಜನೆ ಸಿಎಫ್ ಪಿ.ರಮೇಶ್ ಕುಮಾರ್ ಅವರನ್ನು ತಂಡದಿಂದ ಕೈಬಿಡಲಾಗಿದೆ. ಎಪಿಸಿಸಿಎಫ್ ಶ್ರೀನಿವಾಸುಲು, ಚಾಮರಾಜನಗರ ವೃತ್ತದ ಸಿಸಿಎಫ್ ಟಿ.ಹೀರಾಲಾಲ್, ಎಸ್‌ಟಿಸಿಎ ಪ್ರತಿನಿಧಿ, ಮೈಸೂರು ಮೃಗಾಲಯದ ಪಶುಪಾಲನಾ ಅಧಿಕಾರಿ, ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ತನಿಖಾ ತಂಡದಲ್ಲಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... complete ಗೂ, finishಗೂ ವ್ಯತ್ಯಾಸವೇನು?

ಗಂಡ : ಏನಿಲ್ಲ ಕಣೇ... ನೀನು ನನಗೆ ಸಿಕ್ಕಿದೆ, ನಿನ್ನ ಜೀವನ complete ಆಯ್ತು. ನಾನು ನಿನಗೆ ಸಿಕ್ಕಿದೆ, ನನ್ನ ಜೀವನ finish ಆಯ್ತು.

ಮೈಸೂರು ಮಿತ್ರ

ಭಾನುವಾರ, 29 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕೋಪ ಇದ್ದವನಿಗೆ ಬೇರೆ ಶತ್ರುವೇ ಬೇಡ,
ಜ್ಞಾನವುಳ್ಳವನಿಗೆ ಬೇರೆ ಸಂಪತ್ತು ಬೇಡ.
ಕರುಣೆ ಉಳ್ಳವನಿಗೆ ಮತ್ಯಾವ ರಕ್ಷಣೆಯೂ ಬೇಡ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೋದರೆ ಒಂದು ಕಲ್ಲು, ಬಂದರೆ ಒಂದು ಹಣ್ಣು

ನಿಮ್ಮ ಪತ್ರಗಳು

■ ವನ್ಯಜೀವಿ ಸಂರಕ್ಷಣೆ ಕ್ಷೇತ್ರದಲ್ಲಿ ದೊಡ್ಡ ದುರಂತ

ಮಾನ್ಯರೆ,

ಚಾಮರಾಜನಗರ ಜಿಲ್ಲೆ ಮಲೆ ಮಹದೇಶ್ವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ ಒಂದು ಹುಲಿ ಮತ್ತು ನಾಲ್ಕು ಮರಿಗಳು ಅಸಹಜ ರೀತಿಯಲ್ಲಿ ಸಾವಿಗೀಡಾಗಿರುವುದು ಅತ್ಯಂತ ನೋವಿನ ಸಂಗತಿಯಾಗಿದ್ದು, ಅಳಿವಿನಂಚಿನಲ್ಲಿರುವ ಪ್ರಾಣಿಗಳ ಸಂರಕ್ಷಣೆಗೆ ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರು ಹುಲಿ ಯೋಜನೆ (ಪ್ರಾಜೆಕ್ಟ್ ಟೈಗರ್) ಆರಂಭಿಸಿದ ತರುವಾಯ ರಾಜ್ಯದಲ್ಲಿಯೂ ಹುಲಿಗಳ ಸಂರಕ್ಷಣೆಗೆ ಕ್ರಮ ವಹಿಸಲಾಗಿದ್ದು, 563 ಹುಲಿಗಳೊಂದಿಗೆ ಕರ್ನಾಟಕ ದೇಶದಲ್ಲೇ 2ನೇ ಸ್ಥಾನದಲ್ಲಿದೆ.

ಹುಲಿ ಸಂರಕ್ಷಣೆಗೆ ಹೆಸರಾಗಿರುವ ರಾಜ್ಯದಲ್ಲಿ ಒಂದೇ ದಿನ 5 ಹುಲಿಗಳು ಅಸಹಜ ರೀತಿಯಲ್ಲಿ ಸಾವಿಗೀಡಾಗಿರುವುದು ಅತ್ಯಂತ ನೋವು ತಂದಿದೆ. ದುಷ್ಕರ್ಮಿಗಳ ವಿಷ ಪ್ರಾಶನಕ್ಕೆ 5 ಹುಲಿಗಳು ಮೃತಪಟ್ಟಿವೆ ಎಂದು ಹೇಳಲಾಗುತ್ತಿದೆ. ಇದು ರಾಜ್ಯದ ವನ್ಯಜೀವಿ ಸಂರಕ್ಷಣಾ ಕ್ಷೇತ್ರದಲ್ಲಿ ನಡೆದಿರುವ ಅತಿ ದೊಡ್ಡ ದುರಂತ. ಸ್ಥಳೀಯ ಅಧಿಕಾರಿಗಳ ಬೇಜವಾಬ್ದಾರಿ, ಕಾಡಂಚಿನ ಗ್ರಾಮಗಳ ಜನರ ದ್ವೇಷಕ್ಕೆ ಅತಿ ಅಪರೂಪದ ಹುಲಿ ಕುಟುಂಬವೇ ಸರ್ವನಾಶವಾಗಿದೆ. ಮಲೈ ಮಹದೇಶ್ವರ ಕಾಡು ಹುಲಿ ಸಂತತಿ ಹೆಚ್ಚಳಕ್ಕೆ ಬೇಕಾದ ಎಲ್ಲಾ ಅಗತ್ಯ ವಾತಾವರಣವನ್ನು ಹೊಂದಿದೆ. ಇಲ್ಲಿ ತಾಯಿ ಮತ್ತು 4 ಹುಲಿಗಳು ಮೃತಪಟ್ಟಿರುವುದು ಇಡೀ ವನ್ಯಜೀವಿ ಸಂರಕ್ಷಣಾ ಯೋಜನೆಗೆ ದೊಡ್ಡ ಹೊಡೆತ ಕೊಟ್ಟಂತಾಗಿದೆ. ಸರ್ಕಾರ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು. ಸಾವಿಗೆ ಕಾರಣ ಮತ್ತು ಕಾರಣರಾದವರನ್ನು ಕಂಡುಹಿಡಿಯಬೇಕೆಂದು ಮನವಿ

– ಮಹಾಂತೇಶ್, ಬಳ್ಳೂರುಹುಂಡಿ, ನಂಜನಗೂಡು ತಾ.

■ ಎಂಡಿಎಗೆ ಸೇರಿದ 8.28 ಎಕರೆ ಜಾಗ ವಶ, ಶ್ಲಾಘನೀಯ

ಮಾನ್ಯರೆ,

ಮೈಸೂರಿನ ವಿಜಯನಗರ ನಾಲ್ಕನೇ ಹಂತದ ಬಸವನಹಳ್ಳಿ ಗ್ರಾಮ ವ್ಯಾಪ್ತಿಗೆ ಸೇರಿದ ಸುಮಾರು 8 ಎಕರೆ 28 ಗುಂಟೆ ಎಂಡಿಎಗೆ ಸೇರಿದ ಜಾಗದಲ್ಲಿ (ಹಿಂದಿನ ಮುಡಾ) ಅಕ್ರಮವಾಗಿ ಹಲವಾರು ವರ್ಷಗಳಿಂದ ವಾಸವಿದ್ದ ಜಾಗವನ್ನು ಇತ್ತೀಚೆಗೆ ಎಂಡಿಎ, ಪೊಲೀಸರ ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿ ತನ್ನ ವಶಕ್ಕೆ ಪಡೆದಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ. ಇದರ ಒಟ್ಟು ಮೌಲ್ಯ ಸುಮಾರು 170 ಕೋಟಿ ರೂಪಾಯಿಗಳು ಎಂದು ಅಂದಾಜಿಸಲಾಗಿದೆ.

ಎಂಡಿಎ ಹಾಗೂ ಪೊಲೀಸ್ ಇಲಾಖೆಯಲ್ಲಿ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳು ಇದ್ದಾಗ ಮಾತ್ರ ಇಂತಹ ಕಾರ್ಯಾಚರಣೆ ನಡೆಸಲು ಸಾಧ್ಯ. ಈಗ ಎಂಡಿಎ ವಶಪಡಿಸಿಕೊಂಡಿರುವ ಜಾಗವನ್ನು ನಿವೇಶನವಾಗಿ ಪರಿವರ್ತಿಸಿ ಹರಾಜಿನಲ್ಲಿ ಮಾರಾಟ ಮಾಡಿದರೆ ಸುಮಾರು 300 ರಿಂದ 400 ಕೋಟಿ ರೂಪಾಯಿಗಳಷ್ಟು ಎಂಡಿಎಗೆ ಆದಾಯ ಬರುವುದಾಗಿ ಎಂಡಿಎ ಆಯುಕ್ತರು ತಿಳಿಸಿದ್ದಾರೆ.

ಈ ಕಾರಣಕ್ಕಾಗಿ, ಎಂಡಿಎ ಆಯುಕ್ತರು ಹಾಗೂ ಪೊಲೀಸ್ ಅಧಿಕಾರಿಗಳು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇದು ಮೈಸೂರಿನ ವಿಜಯನಗರದ ಒಂದು ಬಡಾವಣೆಯಲ್ಲಿ ನಡೆದರೆ ಸಾಲದು. ಹಿಂದಿನ ಮುಡಾ ನಿರ್ಮಾಣ ಮಾಡಿರುವ ಹಲವಾರು ನೂತನ ಬಡಾವಣೆಗಳಲ್ಲಿ ನ್ಯಾಯಾಲಯದ ಆದೇಶ ಇದ್ದರೂ ಅಕ್ರಮವಾಗಿ ಜನ ವಾಸ ಮಾಡುತ್ತಿದ್ದಾರೆ. ಈ ಬಡಾವಣೆಗಳ ಜನರನ್ನು ಸಹ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು. ಎಂಡಿಎಗೆ ಸೇರಿದ ಭೂಮಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಮೂಲಕ ಎಂಡಿಎ ತಮ್ಮ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ತೋರಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

■ ಕಳಪೆ ಬಿತ್ತನೆ ಬೀಜ ವಿತರಣೆ, ನಷ್ಟಕ್ಕೆ ಪರಿಹಾರ ನೀಡಿ

ಮಾನ್ಯರೆ,

ಪ್ರತಿ ವರ್ಷದಂತೆ ಈ ವರ್ಷವೂ ಕೃಷಿ ಇಲಾಖೆಯ ಅಧಿಕಾರಿಗಳು ಬಿತ್ತನೆ ಬೀಜ ನೀಡುವ ಕಂಪನಿಗಳೊಂದಿಗೆ ಒಳ ಒಪ್ಪಂದ ಮಾಡಿಕೊಂಡು, ಕಳಪೆ ಬಿತ್ತನೆ ಬೀಜ ವಿತರಣೆ ಮಾಡಲು ನೆರವಾಗಿ ರೈತರು ನಷ್ಟ ಅನುಭವಿಸಲು ಕಾರಣರಾದ್ದರಿಂದ ಅವರುಗಳಿಂದಲೇ ಪರಿಹಾರ ವಸೂಲಿ ಮಾಡಿ, ನಷ್ಟ ಅನುಭವಿಸಿದ ರೈತರಿಗೆ ನೀಡಬೇಕು ಎಂದು ತಿ.ನರಸೀಪುರ ರಾಜ್ಯ ರೈತ ಸಂಘದ ತಾಲೂಕು ಘಟಕ ಆಗ್ರಹಪಡಿಸಿರುವುದು ಸ್ವಾಗತಾರ್ಹ.

ಕೃಷಿ ಇಲಾಖೆಯು ವಿತರಿಸುವ ಬಿತ್ತನೆ ಬೀಜದ ಪ್ಯಾಕೆಟ್ ಒಂದರಲ್ಲಿ 4 kg ಬಿತ್ತನೆ ಬೀಜ ಇದ್ದು 600 ರೂ. ಪಡೆಯುತ್ತಾರೆ. ಒಂದು ಕ್ವಿಂಟಾಲ್ ಬಿತ್ತನೆ ಬೀಜಕ್ಕೆ 15 ಸಾವಿರ ಪಡೆಯುವ ಕೃಷಿ ಇಲಾಖೆ ರೈತರಿಂದ ಒಂದು ಕ್ವಿಂಟಾಲ್ ಮುಸುಕಿನ ಜೋಳವನ್ನು ಕೇವಲ 2 ರಿಂದ 2500 ರೂ.ನೀಡಿ ಖರೀದಿಸುತ್ತಾರೆ. ಇದು ಯಾವ ನ್ಯಾಯ ಎಂದು ರೈತರು ಕೇಳುತ್ತಿರುವುದು ಗಮನಾರ್ಹ. ಈ ಹಿಂದೆ ರೈತರು ಬೆಳೆದ ಫಸಲಿನಲ್ಲಿ ಎಷ್ಟು ಬೇಕೋ ಅಷ್ಟೇ ಮಾರಾಟ ಮಾಡಿ, ಉಳಿದದ್ದನ್ನು ತಾವೇ ಬಿತ್ತನೆ ಮಾಡಲು ಉಪಯೋಗಿಸಿಕೊಳ್ಳುತ್ತಿದ್ದರು. ಈಗ ಅದೇ ಪದ್ಧತಿಯನ್ನು ಅನುಸರಿಸಿದರೆ ಮಾತ್ರ ರೈತ ಬದುಕಲು ಮಾತ್ರ ಸಾಧ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ವೋಲಾ, ಊಬರ್, ರ್‍ಯಾಪಿಡೋ ಆಟೋದಿಂದ ದುಬಾರಿ ಬಾಡಿಗೆ !

ಮಾನ್ಯರೆ,

ಮೈಸೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ವೋಲಾ, ಊಬರ್ ಹಾಗೂ ರ್‍ಯಾಪಿಡೋ ಆಟೋ ಚಾಲಕರು ಗ್ರಾಹಕರಿಂದ ದುಪ್ಪಟ್ಟು ಬಾಡಿಗೆ ಪಡೆಯುತ್ತಿದ್ದಾರೆ. ಉದಾಹರಣೆಗೆ ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ಬಂದು ಹೆಬ್ಬಾಳಿಗೆ ಈ ಆಟೋದವರಿಗೆ ಆನ್‌ಲೈನ್ ಮೂಲಕ ಬುಕ್ ಮಾಡಿದರೆ ಫೋನ್ ಮಾಡಿ 300 ರೂ. ಕೊಟ್ಟರೆ ಮಾತ್ರ ಬರುತ್ತೇವೆ ಎಂದು ದರ್ಪ ತೋರಿಸುತ್ತಿದ್ದಾರೆ. ಇದರಿಂದ ಓಡಾಡುವ ಓರ್ವ ಪ್ರಯಾಣಿಕನಿಗೆ ತುಂಬಾ ಹೊರೆಯಾಗುತ್ತಿದೆ. ಇವರಿಗೆ ಹೇಳುವವರು, ಕೇಳುವವರು ಯಾರೂ ಇಲ್ಲವೇ? ಮನಸೋಇಚ್ಛೆ ಹೀಗೆ ಹಣ ಕಿತ್ತರೆ ಪಾಪ ಗ್ರಾಹಕ ಎಲ್ಲಿಗೆ ಹೋಗಬೇಕು? ಮೀಟರ್ ಹಾಕುವುದು ಬಿಟ್ಟು ಸುಮಾರು ವರ್ಷಗಳೇ ಕಳೆದಿವೆ. ಇದೆಲ್ಲವನ್ನು ಹೋಲಿಸಿದರೆ ಪ್ರೀಪೇಡ್ ಆಟೋ ಸ್ವಲ್ಪ ಪರವಾಗಿಲ್ಲ. ರಾತ್ರಿ 9 ಗಂಟೆ ನಂತರ ಒಂದಕ್ಕೆ ಒಂದೂವರೆಯಂತೆ ಬಾಡಿಗೆ ಪಡೆಯುತ್ತಿದ್ದಾರೆ. ಇನ್ನು ಹೈಕೋರ್ಟ್ ಆದೇಶದಂತೆ ಇತ್ತೀಚೆಗೆ ರ್‍ಯಾಪಿಡೋ ಬೈಕ್‌ಗಳನ್ನು ವಜಾ ಮಾಡಲಾಗಿದೆ. ಇದರಿಂದಲೂ ಗ್ರಾಹಕರಿಗೆ ಸಾಕಷ್ಟು ತೊಂದರೆಯಾಗಿದೆ. ಏಕೆಂದರೆ ರ್‍ಯಾಪಿಡೋ ಬೈಕ್ ತುಂಬಾ ಕೈಗೆಟಕುವ ದರದಿಂದ ಕೂಡಿದ್ದು, ತುಂಬಾ ಅನುಕೂಲವಾಗಿತ್ತು. ಇದಕ್ಕೆ ಸಂಬಂಧಪಟ್ಟವರು ಈ ವೋಲಾ, ಊಬರ್ ಹಾಗೂ ರ್‍ಯಾಪಿಡೋ ಆಟೋದ ಚಾಲಕರ ವಿರುದ್ಧ ಕ್ರಮಕ್ಕೆ ಮನವಿ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು




ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಮಧುರ ಚೆನ್ನರ ಮಧುರ ನೆನಪು

ಕನ್ನಡ ಸಾಹಿತ್ಯದಲ್ಲಿ, ಅದರಲ್ಲೂ ಕಾವ್ಯ ಪರಂಪರೆಯನ್ನು ಅಭ್ಯಸಿಸುವಾಗ, ನವೋದಯ ಎಂಬ ಘಟ್ಟವನ್ನು ಗುರುತಿಸಲಾಗುತ್ತದೆ. ನಡುಗನ್ನಡ ಮತ್ತು ನವ್ಯ ಸಾಹಿತ್ಯದ ನಡುವಿನ ಹರಿಕಾರರಾಗಿ ಈ ಘಟ್ಟದ ಕವಿಗಳು ಕಾಣಿಸುತ್ತಾರೆ. ಪ್ರಕೃತಿ, ಪ್ರೇಮ, ಸಮಾಜದ ಬಗೆಗೆ ಹೊಸ ಚೈತನ್ಯವನ್ನು ತುಂಬಿದಂಥ ಇವರಲ್ಲಿ ಬೇಂದ್ರೆ, ಕುವೆಂಪು, ಪು.ತಿ.ನ, ಅಡಿಗರು, ಕಾರಂತರು ಮುಂತಾದ ಅನೇಕ ಸಾಹಿತಿಗಳನ್ನು ಹೆಸರಿಸಬಹುದು. ಅಂತಹ ನವೋದಯ ಘಟ್ಟಕ್ಕೆ ಸೇರುವ ಮತ್ತೊಬ್ಬ ಕವಿ, ಅಷ್ಟಾಗಿ ಪ್ರಚಾರಕ್ಕೆ ಬಾರದವರೆಂದರೆ ಮಧುರ ಚೆನ್ನರು. ಇವರ ಸಾಹಿತ್ಯ ಅಥವಾ ಬದುಕು ಎಂದರೆ, ಅದೊಂದು ಆಧ್ಯಾತ್ಮದ, ಸಾಧಕನ ಪಯಣ ಎಂದೇ ಗುರುತಿಸಬಹುದು. ಆ ಕಾಲದ ಹಲವು ಕವಿಗಳಲ್ಲಿ ಆಧ್ಯಾತ್ಮದ ಹೊಳಹು ಮಿಂಚಿರುವುದನ್ನು ಗುರುತಿಸಬಹುದು. ಆದರೆ ಮಧುರ ಚೆನ್ನರಲ್ಲಿ ಅದು ಅವರ ಜೀವಿತದ ಉದ್ದೇಶವೇ ಆಗಿರುವಂತೆ ತೋರುತ್ತದೆ. ಅವರ ಬದುಕು ಮತ್ತು ಬರಹಗಳನ್ನು ಅಧ್ಯಯನ ಮಾಡಿದಾಗ 1920–50ರವರೆಗಿನ ಒಬ್ಬ ಸಾಧಕ, ದೇವರಿಗಾಗಿ, ಅವನ ಸಾಕ್ಷಾತ್ಕಾರಕ್ಕಾಗಿ ತಪಿಸುವ ಪರಿಯನ್ನು ಗಮನಿಸಿದಾಗ ಥಟ್ಟನೆ ನೆನಪಾಗುವುದು ವಚನಕಾರರ ಕಾಲದ ಅಲ್ಲಮ ಪ್ರಭು ಮತ್ತು ಅಕ್ಕ ಮಹಾದೇವಿ. ಈ ಆಧುನಿಕ ಕಾಲದಲ್ಲಿ ಇಂಥವರೂ ಇರಲು ಸಾಧ್ಯವೇ ಎಂದು ಅನಿಸದೇ ಇರದು. ಎಲ್ಲವನ್ನೂ ಅನುಮಾನದಿಂದಲೇ ನೋಡುವ, ಎಲ್ಲದಕ್ಕೂ ಪುರಾವೆಯನ್ನು ಕೇಳುವ ಇಂದಿನ ಸಂದೇಹಾಸ್ಪದ ಮನಸುಗಳಿಗೆ ಮಧುರ ಚೆನ್ನರು ಅರ್ಥವಾಗದೇ ಹೋಗುವುದರಲ್ಲಿ ಅನುಮಾನವೇ ಇಲ್ಲ. ಭಗವಂತನ ಇರುವಿಕೆಯಲ್ಲಿ ಸಂಪೂರ್ಣ ನಂಬಿಕೆ ಇರುವ, ಅವನ ಲೀಲೆಗಳನ್ನು ವಿಸ್ಮಯಭರಿತ ನೋಟದಿಂದ ಆನಂದಿಸುವ, ಅವನಿಗೆ ಸಂಪೂರ್ಣವಾಗಿ ಒಲಿದ ಮನಸುಗಳಿಗೆ ಒಬ್ಬ ಸಾಧಕನ ಮನದ ತೊಳಲಾಟಗಳು ಅರ್ಥವಾಗಲು ಸಾಧ್ಯ.

1903 ಜುಲೈ 31 ಶಿರಿಯಾಳ ಷಷ್ಠಿಯಂದು ಹುಟ್ಟಿದರು ಮಧುರಚೆನ್ನರು. ತಾಯಿ ಅಂಬವ್ವ, ತಂದೆ ಸಿದ್ಧಲಿಂಗಪ್ಪ ಗಲಗಲಿಯವರು, ತಮ್ಮ ಇಪ್ಪತ್ತಾರನೆಯ ವಯಸ್ಸಿಗೇ ಹೆಂಡತಿ, ಮಗನನ್ನು ಬಿಟ್ಟು ಕೈಲಾಸವಾಸಿಗಳಾದವರು. ಮಧುರಚೆನ್ನರ ಮೂಲ ಹೆಸರು ಚೆನ್ನಮಲ್ಲಪ್ಪ ಗಲಗಲಿ. ತಾಯಿಯ ಕಣ್ಗಾವಲಿನಲ್ಲೇ ಬೆಳೆದ ಮಗನು ತಮ್ಮ ಹತ್ತಿರದಲ್ಲೇ ಇರಬೇಕೆಂಬ ಬಯಕೆಯಿಂದ ಅವನನ್ನು ಏಳನೆಯ ತರಗತಿಯ ನಂತರ ಮುಂದೆ ಓದಲೂ ಕಳುಹಿಸಲಿಲ್ಲ ಆ ತಾಯಿ.



ಮಧುರ ಚೆನ್ನರು

ಮುಲ್ಕಿ ಪರೀಕ್ಷೆಯಲ್ಲಿ ಅಂದಿನ ಮುಂಬಯಿ ಪ್ರಾಂತ್ಯಕ್ಕೇ ಪ್ರಥಮ ಸ್ಥಾನ ಪಡೆದಿದ್ದ ಅವರಿಗೆ ಬ್ರಿಟಿಷ್ ಸರಕಾರವು ನೌಕರಿ ನೀಡುತ್ತೇವೆ ಬನ್ನಿ ಎಂದಾಗ ಅದರಲ್ಲಿ ಆಸಕ್ತಿ ಇಲ್ಲದ ಅಂಬವ್ವ ಅವರು ಕಳುಹಿಸಿರಲಿಲ್ಲ. ಅವರು ಇದ್ದ ಊರು ಹಲಸಂಗಿ. ಬ್ರಿಟಿಷರ ಕಾಲದ ಒಂದು ಕುಗ್ರಾಮ. ಅಗಾಧವಾಗಿ ನವಿಲುಗಳು ಇದ್ದುದರಿಂದ ನವಿಲೂರು ಎಂದೂ ಹೆಸರು ಪಡೆದಿತ್ತು. ಚೆನ್ನಮಲ್ಲಪ್ಪನವರಿಗೆ ಬಾಲ್ಯದಿಂದಲೂ ದೇವರ ಮೇಲೆ ಗೀಳು. ಅವನ ಸೇವೆಯಲ್ಲಿಯೇ ಆಸಕ್ತಿ. ಅವನನ್ನು ನೋಡಬೇಕೆಂಬ, ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಹಂಬಲ ದಿನದಿನಕ್ಕೆ ಹೆಚ್ಚಾಗುತ್ತಾ ಹೋಯಿತು. ಬಾಲ್ಯವಿವಾಹ ಆಗಿದ್ದ ಅವರ ಮಡದಿ ಬಸಮ್ಮ. ಬದುಕಿನುದ್ದಕ್ಕೂ ಪತಿಯ ಆಧ್ಯಾತ್ಮ ಸಾಧನೆಗೆ ಇಂಬಾಗಿ ನಿಂತ ಹೆಣ್ಣುಮಗಳು.

ಬಾಲ್ಯದಿಂದಲೇ ಭಗವಂತನ ಹುಡುಕಾಟಕ್ಕಾಗಿ ಸದಾ ಕಾಡು–ಮೇಡುಗಳನ್ನು ಅಲೆಯುತ್ತಿದ್ದ ಮಧುರ ಚೆನ್ನರಿಗೆ ತಮ್ಮ ದೇಹದ, ಆರೋಗ್ಯದ ಕಡೆ ಗಮನವೇ ಇಲ್ಲ. ಅದಕ್ಕಾಗಿ ಅವರು ಓದದ ಸಾಹಿತ್ಯವಿಲ್ಲ. ಕೆಲವು ತಿಂಗಳು ವಿಜಾಪುರದ ಕೊಣ್ಣೂರ ಮಾಸ್ತರರ ಬಳಿ ಇಂಗ್ಲಿಷ್ ಕಲಿತದ್ದು ಅಷ್ಟೇ, ಅಲ್ಲಿಯೇ ಅವರಿಗೆ ಬೇಂದ್ರೆಯವರ ಪರಿಚಯ ಆದದ್ದು. ಮುಂದೆ ಸ್ವಪರಿಶ್ರಮದಿಂದ ಜಗತ್ತಿನ ಅನೇಕ ಭಾಷೆಗಳ ಸಾಹಿತ್ಯದಲ್ಲಿಯೂ ಹುಡುಕಾಟ ನಡೆಸಿದ್ದ ಅವರು ಫ್ರೆಂಚ್, ಜರ್ಮನ್, ಇಂಗ್ಲಿಷ್, ಚೀನಿ, ಮರಾಠಿ, ಹಿಂದಿ, ಗುಜರಾತಿ ಮುಂತಾದ ಅನೇಕ ಭಾಷೆಗಳಲ್ಲಿ ಆಧ್ಯಾತ್ಮಿಕ ಸಾಹಿತ್ಯವನ್ನು ಅಭ್ಯಸಿಸಿದ್ದಾರೆ. ಉಪನಿಷತ್ತು, ಶರಣರ ಚರಿತ್ರೆ ಮುಂತಾದವುಗಳೆಲ್ಲದರ ಅಧ್ಯಯನ ಮಾಡಿದ ಅವರ ಮೇಲೆ ಶ್ರೀ ಅರವಿಂದರ ಪ್ರಭಾವ ದಟ್ಟವಾಗಿ ಆಯಿತು. ಹಲಸಂಗಿಯಲ್ಲಿ ಅವರ ಆತ್ಮೀಯರಾದ ಗೆಳೆಯರ ಬಳಗ ಒಂದಿತ್ತು. ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಸರಸಂಬಿ ಸಹೋದರರು, ಗುರುಬಸಪ್ಪ ಗಲಗಲಿ, ಮಾದಣ್ಣ ಓಲೆಕಾರ, ಬಸಪ್ಪ ಡಿ.ಅಕ್ಕಿ ಹೀಗೆ ಹಲವಾರು ಸಮಾನ ಮನಸ್ಕರ ಗುಂಪು ಅದಾಗಿತ್ತು. ಅಂತೆಯೇ ಧಾರವಾಡದ ಪ್ರಖ್ಯಾತ ಗೆಳೆಯರ ಬಳಗಕ್ಕೂ ಇವರು ಸೇರಿದ್ದರು. ದ.ರಾ.ಬೇಂದ್ರೆ, ರಂ.ಶ್ರೀ ಮುಗಳಿ, ವಿ.ಕೃ.ಗೋಕಾಕ, ಪ್ರಹ್ಲಾದ ನರೇಗಲ್, ಫಾಣೇಕರ್ ಮುಂತಾದವರ ಸಾಹಿತ್ಯದ ಒಡನಾಟ ಬಹಳ ಪ್ರಸಿದ್ಧ. ಬೇಂದ್ರೆಯವರಿಗಂತೂ ಇವರು ಪ್ರೀತಿಯ ತಮ್ಮನೇ ಆಗಿದ್ದರು. ಮಧುರ ಚೆನ್ನರು ತಮ್ಮ ಊರಿನಲ್ಲಿ ಪ್ರಾರಂಭಿಸಿದ್ದ ನಾಡಹಬ್ಬ, ಗಣೇಶ ಉತ್ಸವಗಳಲ್ಲಿ ಹಲವಾರು ಸಾಹಿತಿಗಳನ್ನು ಕರೆಸಿ, ಅವರಿಂದ ಉಪನ್ಯಾಸಗಳನ್ನು ಏರ್ಪಡಿಸುವುದರ ಮೂಲಕ ಹಲಸಂಗಿಯಲ್ಲಿನ ಜನಕ್ಕೂ ಸಾಹಿತ್ಯದ ಅರಿವು ಹುಟ್ಟುವಂತೆ ಮಾಡಿದರು. ಅಲ್ಲಿ ಒಂದು ವಾಚನಾಲಯವನ್ನು ಆರಂಭಿಸಿದುದೂ ಅವರೇ. ಮೊಗ್ಗು ಎಂಬ ಕೈಬರಹದ ಪತ್ರಿಕೆಯನ್ನು ಹೊರಡಿಸಿ ಯುವಕರಲ್ಲಿ ಬರೆಯುವ ಆಸಕ್ತಿ ಚಿಗುರುವಂತೆ ಮಾಡಿದುದೂ ಅವರ ಹೆಗ್ಗಳಿಕೆ. 1936ರಲ್ಲಿ ಕರ್ನಾಟಕದಲ್ಲಿ ಮೊದಲ ಬಾರಿಗೆ ಶ್ರೀ ರಾಮಕೃಷ್ಣ ಪರಮಹಂಸರ ಶತಸಾಂವತ್ಸರಿಕೋತ್ಸವ ನಡೆದುದು ಬಹಳ ಮುಖ್ಯ. ಅದರಲ್ಲಿ ಭಾಗವಹಿಸಲು ದ.ರಾ.ಬೇಂದ್ರೆ, ರಂ.ಶ್ರೀ.ಮುಗಳಿ, ಶಿವರಾಮ ಕಾರಂತ ಮುಂತಾದವರೆಲ್ಲರೂ ಆಗಮಿಸಿದ್ದರು. ಕಾಪಸೆ ರೇವಪ್ಪನವರು ರಚಿಸಿದ್ದ ಪರಮಹಂಸರ ಭವ್ಯ ತೈಲಚಿತ್ರದ ಸಮಕ್ಷಮದಲ್ಲಿ ವಿದ್ವತ್ಪೂರ್ಣ ಭಾಷಣಗಳು, ಪರಮಹಂಸರನ್ನು ಕುರಿತ ನಾಟಕಗಳಲ್ಲದೆ ಮಧುರ ಚೆನ್ನರ ಸಂಪಾದಕತ್ವದಲ್ಲಿ ಶ್ರೀ ಅರವಿಂದರ ಗ್ರಂಥಮಾಲೆಯ ಆರಂಭೋತ್ಸವವೂ ನಡೆದಿತ್ತು.

> “ ಎಲ್ಲವನ್ನೂ ಅನುಮಾನದಿಂದಲೇ ನೋಡುವ, ಎಲ್ಲದಕ್ಕೂ ಪುರಾವೆ ಕೇಳುವ ಇಂದಿನ ಸಂದೇಹಾಸ್ಪದ ಮನಸುಗಳಿಗೆ ಮಧುರ ಚೆನ್ನರು ಅರ್ಥವಾಗದೇ ಹೋಗುವುದರಲ್ಲಿ ಅನುಮಾನವೇ ಇಲ್ಲ. ಭಗವಂತನ ಇರುವಿಕೆಯಲ್ಲಿ ಸಂಪೂರ್ಣ ನಂಬಿಕೆ ಇರುವ, ಅವನ ಲೀಲೆಗಳನ್ನು ವಿಸ್ಮಯ ಭರಿತ ನೋಟದಿಂದ ಆನಂದಿಸುವ, ಅವನಿಗೆ ಸಂಪೂರ್ಣವಾಗಿ ಒಲಿದ ಮನಸುಗಳಿಗೆ ಒಬ್ಬ ಸಾಧಕನ ಮನದ ತೊಳಲಾಟಗಳು ಅರ್ಥವಾಗಲು ಸಾಧ್ಯ.

ದೇವನ ಅರಿವಿನ ತಮ್ಮ ಹುಡುಕಾಟವನ್ನು ಅಕ್ಷರಗಳಲ್ಲಿ ದಾಖಲಿಸಿದುದರಿಂದಲೇ ಮಧುರಚೆನ್ನರ ಸಾಹಿತ್ಯ ಕೃಷಿ ತನ್ನ ವಿಶಿಷ್ಟತೆಯನ್ನು ಪಡೆಯಿತು. ಅದು ಅವರ ಓದುಗರ ಭಾಗ್ಯವೂ ಹೌದು. ಅವರ ಬಿಡಿಗವನಗಳು ಬೇರೆ ಬೇರೆ ಪತ್ರಿಕೆಗಳಲ್ಲಿ ಆಗಾಗ್ಗೆ ಪ್ರಕಟವಾಗಿದ್ದರೂ, 1933ರಲ್ಲಿ ಅವರ ಪ್ರಥಮ ಕಾವ್ಯ ಸಂಗ್ರಹ ನನ್ನ ನಲ್ಲವು ಹೊರಬಂದಿತು. ಭಗವಂತನ ಹುಡುಕಾಟದ ಅನುಭವ–ಅನುಭಾವವೇ ಅವರ ಎಲ್ಲ ಬರಹದ ತಿರುಳು ಎಂದರೆ ತಪ್ಪಾಗಲಿಕ್ಕಿಲ್ಲ. ತಮ್ಮ ಈ ಪಯಣದ ಅನುಭವವನ್ನು ಗದ್ಯದಲ್ಲಿಯೂ ಹಂಚಿಕೊಂಡಿದ್ದಾರೆ ಅವರು. ಪೂರ್ವರಂಗ, ಕಾಳರಾತ್ರಿ, ಬೆಳಗು ಮತ್ತು ಆತ್ಮ ಸಂಶೋಧನೆಗಳು ಅವರ ಪಾರಮಾರ್ಥಿಕ ಸಾಧನೆಯನ್ನು ಸಂಪೂರ್ಣವಾಗಿ ಚಿತ್ರಿಸುತ್ತವೆ. ಶ್ರೀ ಅರವಿಂದರು ಮತ್ತು ಶ್ರೀ ಮಾತೆಯವರ ಅನನ್ಯ ಭಕ್ತರಾಗಿದ್ದ ಮಧುರಚೆನ್ನರು ಅದನ್ನು ತಮ್ಮ ಬರಹಗಳಲ್ಲಿಯೂ ಕಾಣಿಸಿದ್ದಾರೆ. ಕೇವಲ 50 ವರುಷಗಳು ಮಾತ್ರವೇ ಬದುಕಿದ್ದ ಅವರು ತಮ್ಮ ಇಬ್ಬರು ಗುರುಗಳಾಗಿದ್ದ ಶ್ರೀ ಅರವಿಂದರ ದರ್ಶನ ದಿನವೂ, ಶ್ರೀ ರಾಮಕೃಷ್ಣ ಪರಮಹಂಸರು ನಿರ್ವಾಣವಾಗಿದ್ದ ದಿನವೇ ಅಂದರೆ ಆಗಸ್ಟ್ 15ರಂದೇ ಶಿವೈಕ್ಯರಾದುದು ಯೋಗಾಯೋಗವೇ ಸರಿ. ತಮ್ಮ ಕಾಳರಾತ್ರಿಯ ಮುನ್ನುಡಿಯಲ್ಲಿ ಮಧುರಚೆನ್ನರು ಹೀಗೆ ಹೇಳಿದ್ದಾರೆ ನಾನು ಎಲ್ಲಕ್ಕಿಂತ ಮೊದಲಿಗೆ ತಮಗೆ ಅರಿಕೆ ಪಡಿಸುವುದೇನೆಂದರೆ, ಅನುಭಾವಿ ಎಂದು ಅನಿಸಿಕೊಳ್ಳುವ ಸಲುವಾಗಿ ನಾನು ನನ್ನ ಆತ್ಮಕಥೆಯನ್ನು ಬರೆದಿಲ್ಲ. ಅನುಭಾವರಾಜ್ಯದ ಅಸ್ತಿತ್ವದ ಸತ್ಯಾಸತ್ಯತೆಯನ್ನರಿಯಲೆಣಿಸಿ ನನ್ನಂತೆ ಬಳಲಿ ಬೆಂದು ಬೆಂಡಾಗುತ್ತಿರುವ ತರುಣ ಜಿಜ್ಞಾಸುಗಳಿಗೆ ತಿಲಮಾತ್ರವಾದರೂ ಉಪಯೋಗವಾಗಬೇಕೆಂಬ ಹೃದಯದ ಒಂದು ಊರ್ಮಿಯ ಹೊರತು ಇದಕ್ಕೆ ಅನ್ಯ ಅಹಂಕಾರದ ಸೋಂಕು ಲೇಶಮಾತ್ರವೂ ಇಲ್ಲವೆಂದು ನಾನು ಸತ್ಯಸತ್ಯವಾಗಿ ಹೇಳುತ್ತೇನೆ.

ಜಾನಪದ, ಪ್ರಾಚೀನ ಇತಿಹಾಸ, ಶಾಸನಗಳನ್ನು ಕುರಿತೂ ಅವರ ಹಲವು ಲೇಖನಗಳು ಇವೆ. ಲಿಪಿ ಶಾಸ್ತ್ರದ ಮಹತ್ವ ವಿಷಯಗಳನ್ನು ತಿಳಿಸುವ ಕನ್ನಡ ಪ್ರಾಚೀನ ಲಿಪಿಬೋಧಿನಿ ಎಂಬ ಪುಸ್ತಕವು 1924 ರಲ್ಲಿಯೇ ಪ್ರಕಟಗೊಂಡಿತ್ತು. ಅವರೊಬ್ಬ ವಸ್ತುನಿಷ್ಠ ಸಂಶೋಧಕರೂ ಆಗಿದ್ದರು. ಜನಪದ ಹಾಡುಗಳನ್ನು ಸಂಗ್ರಹಿಸಿಕೊಟ್ಟಿದ್ದೂ ಉಲ್ಲೇಖನೀಯ.

ಹಾಸನ ಜಿಲ್ಲೆಯಲ್ಲಿ ಒಂದೂವರೆ ತಿಂಗಳಿಂದ 18 ಮಂದಿ ಹೃದಯಾಘಾತ ಆತಂಕ

ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ತಪಾಸಣೆಗೆ ಮುಗಿಬೀಳುತ್ತಿರುವ ಜನ!



ಮೈಸೂರು, ಜೂ.28(ಎಸ್‌ಬಿಡಿ)– ಹಾಸನ ಜಿಲ್ಲೆಯಲ್ಲಿ ಕಳೆದ ಒಂದೂವರೆ ತಿಂಗಳಲ್ಲಿ 18 ಮಂದಿ ಹೃದಯಾಘಾತದಿಂದ ಸಾವನ್ನಪ್ಪಿರುವ ವರದಿ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಹೊರರೋಗಿಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳವಾಗಿದೆ.

ಇತ್ತೀಚೆಗೆ ಹೃದಯಾಘಾತಕ್ಕೆ ತುತ್ತಾಗುವವರ ಸಂಖ್ಯೆ ಹೆಚ್ಚಿದೆ. ಅದರಲ್ಲೂ ಕಳೆದ ಮೇ ತಿಂಗಳಿಂದ ಈವರೆಗೆ ಹಾಸನ ಜಿಲ್ಲೆಯಲ್ಲಿ ನಿರಂತರವಾಗಿ ಹೃದಯಾಘಾತ ಪ್ರಕರಣಗಳು ವರದಿಯಾಗುತ್ತಿವೆ. ಅದರಲ್ಲೂ 20ರಿಂದ 40 ವರ್ಷದೊಳಗಿನ ಯುವಜನರೇ ಹೆಚ್ಚಾಗಿ ಹೃದಯಾಘಾತದಿಂದ ಸಾವನ್ನಪ್ಪುತ್ತಿದ್ದಾರೆ. ಇದರಿಂದ ಆತಂಕಗೊಂಡಿರುವ ಜನ, ಜಯದೇವ ಹೃದ್ರೋಗ ಆಸ್ಪತ್ರೆಗೆ ಧಾವಿಸುತ್ತಿದ್ದಾರೆ.

ನಗರದ ಕೆಆರ್‌ಎಸ್ ರಸ್ತೆಯಲ್ಲಿ ಜಯದೇವ ಆಸ್ಪತ್ರೆ ನಿರ್ಮಾಣವಾದಾಗಿನಿಂದಲೂ ರೋಗಿಗಳ ದಟ್ಟಣೆ ಇದ್ದೇ ಇದೆ. ಆದರೆ ಇತ್ತೀಚೆಗೆ ತಪಾಸಣೆಗೆಂದು ಬರುವ ಹೊರರೋಗಿಗಳ ಸಂಖ್ಯೆ ಎರಡೂರು ಪಟ್ಟು ಹೆಚ್ಚಾಗಿದೆ. ನಿತ್ಯ ಸಾವಿರಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ. ಬೆಳಗ್ಗೆ 7 ಗಂಟೆಗೇ ನೂರಾರು ಮಂದಿ ಸರದಿಯಲ್ಲಿ ನಿಂತಿರುತ್ತಾರೆ. ಗಂಟೆ ಕಳೆಯುವಷ್ಟರಲ್ಲಿ ಆ ಸಂಖ್ಯೆ ಐದಾರು ಪಟ್ಟು ಹೆಚ್ಚಾಗಿರುತ್ತದೆ.

ಮೊದಲು ನೋಂದಣಿ ಮಾಡಿಸಿ ನಂತರ ವೈದ್ಯರನ್ನು ಭೇಟಿಯಾಗಿ, ಅವರ ಸಲಹೆಯಂತೆ ಇಸಿಜಿ, ಎಕೋ ಹಾಗೂ ರಕ್ತ ಪರೀಕ್ಷೆ ಮಾಡಿಸಿಕೊಂಡು, ಇವುಗಳ ವರದಿಯೊಂದಿಗೆ ಮತ್ತೆ ವೈದ್ಯರನ್ನು ಕಾಣಬೇಕಿರುವುದರಿಂದ ಆಸ್ಪತ್ರೆಯಲ್ಲಿ ಕಾಲಿಡಲಾಗದಷ್ಟು ಜನದಟ್ಟಣೆ ನಿರ್ಮಾಣವಾಗುತ್ತದೆ. ವೈದ್ಯರು, ಸಿಬ್ಬಂದಿ ಓಡಾಟಕ್ಕೂ ಪ್ರಾಯಾಸಪಡುವಂತಾಗಿದೆ.

ಸದ್ಯ ಯಾವ ರೋಗ ಲಕ್ಷಣಗಳನ್ನೂ ನಿರ್ಲಕ್ಷಿಸದ ಸಂದರ್ಭವಾದ್ದರಿಂದ ಬಹುತೇಕ ಮಂದಿಗೆ ಇಸಿಜಿ, ಎಕೋ ಹಾಗೂ ರಕ್ತ ಪರೀಕ್ಷೆ ಮಾಡಿಸುವುದರಿಂದ ಆಸ್ಪತ್ರೆ ತಂತ್ರಜ್ಞರಿಗೂ ಕಾರ್ಯದೊತ್ತಡ ಹೆಚ್ಚಾಗಿದೆ. ಇನ್ನು ವೈದ್ಯರಂತೂ ನಿತ್ಯ ತಲಾ 80ರಿಂದ 100 ಮಂದಿ ರೋಗಿಗಳನ್ನು ಸಂದರ್ಶನ ಮಾಡುತ್ತಿದ್ದಾರೆ. ಇದಲ್ಲದೆ ಸ್ಪೆಷಲ್ ಕ್ಲಿನಿಕ್‌ನಲ್ಲೂ ನೂರಾರು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ. ನರ್ಸ್‌ಗಳು, ನೋಂದಣಿ ವಿಭಾಗದ ಸಿಬ್ಬಂದಿ, ಔಷಧಾಲಯದ ಸಿಬ್ಬಂದಿ, ಹೀಗೆ ಎಲ್ಲಾ ಹಂತದ ಸಿಬ್ಬಂದಿಯೂ ಹೈರಾಣಾಗಿದ್ದಾರೆ.

ಒತ್ತಡದಿಂದ ಆಘಾತ

ಕೃಷಿಯಲ್ಲಿ ಹೆಚ್ಚು ರಾಸಾಯನಿಕ ಬಳಕೆಯಿಂದ ವಿಷಕಾರಿ ಆಹಾರ ಮನುಷ್ಯನ ದೇಹ ಸೇರುತ್ತಿದೆ. ಜೊತೆಗೆ ಜಂಕ್‌ಫುಡ್ ಸೇವನೆಯೂ ಹೆಚ್ಚಾಗಿದೆ. ಸದಾ ಒತ್ತಡಮಯ ಬದುಕು. ಅವಸರ, ಧಾವಂತದಿಂದ ಯಂತ್ರಗಳಂತೆ ಕೆಲಸ ಮಾಡಲಾಗುತ್ತಿದೆ. ಸಂತೃಪ್ತಿ ಭಾವ, ಖುಷಿ–ಸಂತೋಷ ಮಾಯವಾಗಿದೆ. ಒತ್ತಡ ದಿಂದಲೇ ಹೆಚ್ಚು ಜನ ಹೃದಯಾ ಘಾತ ಹಾಗೂ ಬ್ರೈನ್ ಸ್ಟ್ರೋಕ್‌ಗೆ ತುತ್ತಾಗುತ್ತಿದ್ದಾರೆ. ಅನಾರೋಗ್ಯಕ್ಕೆ ಕಾರಣ ಹುಡುಕುವುದರ ಜೊತೆಗೆ ಮುಂಜಾಗ್ರತೆಯಿಂದ ನಮ್ಮ ಆಹಾರ ಕ್ರಮ ಹಾಗೂ ಜೀವನಶೈಲಿಯನ್ನು ಉತ್ತಮಪಡಿಸಿಕೊಳ್ಳುವುದು ಅತ್ಯವಶ್ಯವಾಗಿದೆ ಎಂದು ಜಯದೇವ ಹೃದ್ರೋಗ ಸಂಸ್ಥೆಯ ಮಾಜಿ ನಿರ್ದೇಶಕರೂ ಆದ ಹೃದ್ರೋಗ ತಜ್ಞ ಹಾಗೂ ಸಂಸದ ಡಾ.ಸಿ.ಎನ್.ಮಂಜುನಾಥ್ ಅವರು ಪದೇ ಪದೇ ಹೇಳುತ್ತಿದ್ದಾರೆ.

ಸಂದಿಗ್ಧ ಪರಿಸ್ಥಿತಿ: ಗ್ಯಾಸ್ಟ್ರಿಕ್ ಇನ್ನಿತರ ಸಮಸ್ಯೆಗಳಿಂದಲೂ ಎದೆನೋವು ಕಾಣಿಸಿಕೊಳ್ಳಬಹುದು. ಹೀಗೆ ಬೇರೆ ಬೇರೆ ಕಾರಣಗಳಿಂದ ಹೃದ್ರೋಗ ಸಾಮ್ಯತೆಯ ಲಕ್ಷಣಗಳು ಕಾಣಿಸಿಕೊಂಡವರೂ ಜಯದೇವ ಆಸ್ಪತ್ರೆಗೆ ದೌಡಾಯಿಸುತ್ತಿದ್ದಾರೆ. ಹಾಗಾಗಿ ರೋಗಿಗಳ ದಟ್ಟಣೆ ಹೆಚ್ಚಾಗುತ್ತಿದೆ. ಹಾಗಂತ ಹೃದ್ರೋಗ ಸಾಮ್ಯತೆಯ ಲಕ್ಷಣಗಳು ಕಾಣಿಸಿಕೊಂಡಾಗ ಗ್ಯಾಸ್ಟ್ರಿಕ್ ಎಂದು ನಿರ್ಲಕ್ಷಿಸಬಾರದು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ಬರುವ ಎಲ್ಲಾ ರೋಗಿಗಳನ್ನೂ ತಪಾಸಣೆ ಹಾಗೂ ವಿವಿಧ ಪರೀಕ್ಷೆಗಳಿಗೆ ಒಳಪಡಿಸುವ ಅನಿವಾರ್ಯತೆ ನಿರ್ಮಾಣವಾಗಿದೆ.

ಹೃದಯಾಘಾತಕ್ಕೇನು ಕಾರಣ?: ಮಕ್ಕಳಾದಿಯಾಗಿ ಎಲ್ಲಾ ವಯೋಮಾನದವರೂ ಹೃದಯಾಘಾತಕ್ಕೆ ತುತ್ತಾಗಲು ನಿಖರ ಕಾರಣಗಳೇ ತಿಳಿಯುತ್ತಿಲ್ಲ. ಆದರೆ ನಮ್ಮ ಆಹಾರ ಕ್ರಮ ಹಾಗೂ ಜೀವಶೈಲಿಯೇ ಹೃದ್ರೋಗ ಸೇರಿದಂತೆ ಬಹುತೇಕ ಎಲ್ಲಾ ಆರೋಗ್ಯ ಸಮಸ್ಯೆಗಳಿಗೂ ಪ್ರಮುಖ ಕಾರಣ ಎಂಬ ಸಾರ್ವತ್ರಿಕ ಅಭಿಪ್ರಾಯವಿದೆ. ಹೃದಯಾಘಾತದಿಂದ ನಿಧನರಾದವರಲ್ಲಿ ಶೇ.25ಕ್ಕಿಂತ ಹೆಚ್ಚು ಜನ 40 ವರ್ಷಕ್ಕಿಂತ ಒಳಪಟ್ಟವರಾಗಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿರುವುದು ನಿಜಕ್ಕೂ ಆತಂಕಕಾರಿ ಸಂಗತಿಯಾಗಿದೆ. ಈ ಬಗ್ಗೆ ಅಧ್ಯಯನ ನಡೆಸಿ, ಸೂಕ್ತ ಪರಿಹಾರೋಪಾಯ ಕಂಡುಕೊಳ್ಳದಿದ್ದರೆ ಯುವಜನ ಸಂಪತ್ತು ನಷ್ಟವಾಗಲಿದೆ.

ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದ್ದಕ್ಕೆ ಕಾಂಗ್ರೆಸ್ ಜನರ ಕ್ಷಮೆ ಯಾಚಿಸಬೇಕು

ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಆಗ್ರಹ



ಮೈಸೂರಿನ ವಿಜಯನಗರದ ಕಲ್ಯಾಣ ಮಂಟಪವೊಂದರಲ್ಲಿ ನಡೆದ ತುರ್ತು ಪರಿಸ್ಥಿತಿಯ 50 ವರ್ಷದ ಕರಾಳ ನೆನಪು ಕಾರ್ಯಕ್ರಮದಲ್ಲಿ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿ, ಸೆರೆವಾಸ ಅನುಭವಿಸಿದ್ದ ಹಲವರನ್ನು ವಿಪಕ್ಷ ನಾಯಕ ಆರ್.ಅಶೋಕ್ ಸನ್ಮಾನಿಸಿದರು.

ಮೈಸೂರು,ಜೂ.28(ಎಂಟಿವೈ)– ದಿವಂಗತ ಪ್ರಧಾನಿ ಇಂದಿರಾಗಾಂಧಿ ಅವರು ಅನಗತ್ಯವಾಗಿ ದೇಶದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸುವ ಮೂಲಕ ಅಮಾಯಕರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.

ಮೈಸೂರಿನ ವಿಜಯನಗರದ ಕಲ್ಯಾಣ ಮಂಟಪವೊಂದರಲ್ಲಿ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ 50 ವರ್ಷ ಕಾರ್ಯಕ್ರಮದಲ್ಲಿ ತುರ್ತು ಪರಿಸ್ಥಿತಿ ವಿರೋಧಿಸಿ ಹೋರಾಟ ಮಾಡಿದ್ದವರಿಗೆ ಸನ್ಮಾನ ಮಾಡಿ ಮಾತನಾಡಿದ ಅವರು, ಮಾಜಿ ಪ್ರಧಾನಿ ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷ ಸಮರ್ಥನೆ ಮಾಡುತ್ತದೆಯೇ ಅಥವಾ ವಿರೋಧ ಮಾಡುತ್ತದೆಯೇ ಎಂದು ಸ್ಪಷ್ಟನೆ ನೀಡಬೇಕು. ಕಾಂಗ್ರೆಸ್ ನಾಯಕರಿಗೆ ಸಂವಿಧಾನದ ಬಗ್ಗೆ ಗೌರವ ಇದ್ದರೆ, ಜನರ ಮುಂದೆ ಕ್ಷಮೆ ಕೇಳಬೇಕು. ತುರ್ತು ಪರಿಸ್ಥಿತಿಯಲ್ಲಿ ಲಕ್ಷಾಂತರ ಜನರನ್ನು ಜೈಲಿಗಟ್ಟಿದ್ದರು. ಅನೇಕ ಹೋರಾಟಗಾರರು ಅಲ್ಲಿಯೂ ಸತ್ತಿದ್ದರು. ಇದಕ್ಕೆ ಕಾಂಗ್ರೆಸ್ ಇದೂವರೆಗೆ ಕ್ಷಮೆ ಕೇಳಿಲ್ಲ. ತುರ್ತು ಪರಿಸ್ಥಿತಿಯನ್ನು ಬೆಂಬಲಿಸುತ್ತಾರೆಯೇ ಎಂದಾದರೂ ಸ್ಪಷ್ಟನೆ ನೀಡಲಿ. ಏನೂ ಹೇಳದೆ ಕಳ್ಳಾಟ ಆಡುವುದು ಸರಿಯಲ್ಲ. ಐವತ್ತು ವರ್ಷದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ತಪ್ಪು ಎಂದು ಯಾವುದೇ ಕಾಂಗ್ರೆಸ್ ನಾಯಕರು ಹೇಳಿಲ್ಲ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನವರಿಗೆ ಸಂವಿಧಾನದ ಬಗ್ಗೆ ಗೌರವ ಇದ್ದರೆ, ತುರ್ತು ಪರಿಸ್ಥಿತಿ ಹೇರಿದ್ದಕ್ಕೆ ಅವರು ದೇಶದ ಜನರ ಕ್ಷಮೆ ಕೇಳಬೇಕು. ಆ ಸಂದರ್ಭದಲ್ಲಿ ಅಮಾಯಕ ಜನರನ್ನು ಜೈಲಿಗಟ್ಟಿ ಗೋಲಿಬಾರ್, ಲಾಠಿ ಚಾರ್ಜ್ ಮಾಡಿದ್ದಾರೆ.

ಇಂದಿರಾಗಾಂಧಿ ಚುನಾವಣೆಯಲ್ಲಿ ಮೋಸ ಮಾಡಿದ್ದಾರೆ ಎಂದು ನ್ಯಾಯಾಲಯದ ತೀರ್ಪು ಬಂದು ಸದಸ್ಯತ್ವ ರದ್ದಾಗಿತ್ತು. ಅದಾದ ನಂತರ ಅವರು ಪ್ರಧಾನಿ ಸ್ಥಾನ ಉಳಿಸಿಕೊಳ್ಳಲು ತುರ್ತು ಪರಿಸ್ಥಿತಿ ಹೇರಿದರು. ನಮ್ಮಲ್ಲಿ ಸಂವಿಧಾನಕ್ಕಿಂತ ಬೇರ್‍ಯಾವುದೂ ದೊಡ್ಡದಲ್ಲ ಎಂದು ಗೊತ್ತಿದ್ದು ಇಂದಿರಾಗಾಂಧಿ ಇಂತಹ ಕೆಲಸ ಮಾಡಿದರು. ಅದಕ್ಕಾಗಿ ಸಂವಿಧಾನ ತಿದ್ದುಪಡಿ ಮಾಡಿದರು. ಇದರಿಂದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ಹಿರಿಯ ಮುಖಂಡ ಎಲ್.ಕೆ.ಅಡ್ವಾಣಿ ಸೇರಿದಂತೆ ಅನೇಕ ನಾಯಕರನ್ನು ಜೈಲಿಗೆ ಕಳುಹಿಸಿದರು. ನಾನು ಬೆಂಗಳೂರಿನ ಜೈಲಿನಲ್ಲಿ ಒಂದು ತಿಂಗಳು ಇದ್ದೆ. ನನ್ನ ತಮ್ಮ ಹಾಗೂ ಶಾಸಕ ಸುರೇಶ್‌ಕುಮಾರ್ ಅವರನ್ನು ಪೊಲೀಸರು ಬಂಧಿಸಿ, ಶಿಕ್ಷಿಸಿದ್ದರು. ನಾನು ಆಗ ಕಾಲೇಜು ವಿದ್ಯಾರ್ಥಿಯಾಗಿದ್ದೆ ಎಂದು ಸ್ಮರಿಸಿದರು.

ದೇಶಪ್ರೇಮಿ ಎಂದು ಹೇಳಿಕೊಳ್ಳುವ ಸಿಎಂ ಸಿದ್ದರಾಮಯ್ಯ ಈ ಬಗ್ಗೆ ಮಾತನಾಡಬೇಕು. ಆಗ ಪ್ರಗತಿಪರರು ಏನು ಮಾಡುತ್ತಿದ್ದರು ಎಂದು ಉತ್ತರಿಸಬೇಕು. ಆಗಿನ ಕಾಂಗ್ರೆಸ್ಸೇ ಬೇರೆ, ಈಗಿನ ಕಾಂಗ್ರೆಸ್ಸೇ ಬೇರೆ. ಈಗಿನದ್ದು ನಕಲಿ ಕಾಂಗ್ರೆಸ್. ಇವರೆಲ್ಲರೂ ಒಂದು ಕುಟುಂಬಕ್ಕೆ ನಿಷ್ಠರಾಗಿದ್ದಾರೆ ಎಂದರು.

ಬಿಜೆಪಿ ಅಧಿಕಾರದಲ್ಲಿದ್ದರೆ ಸಂವಿಧಾನ ಬದಲಾಗುತ್ತದೆ ಎಂದು ಟೀಕಿಸುತ್ತಾರೆ. ಆದರೆ ತುರ್ತು ಪರಿಸ್ಥಿತಿಗಾಗಿ ಕಾಂಗ್ರೆಸ್‌ನವರೇ ಸಂವಿಧಾನ ತಿದ್ದುಪಡಿ ಮಾಡಿದ್ದರು. ಡಾ.ಬಿ.ಆರ್.ಅಂಬೇಡ್ಕರ್ ಕಾಂಗ್ರೆಸ್‌ನವರ ಮನೆ ಆಸ್ತಿ ಎಂದುಕೊಂಡಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದಾಗ ಅಂಬೇಡ್ಕರ್‌ಗೆ ಭಾರತರತ್ನ ನೀಡಲಾಯಿತು ಎಂದು ತಿಳಿಸಿದರು.

ಇದೆ ವೇಳೆ ವಿಧಾನಪರಿಷತ್ ಮಾಜಿ ಸದಸ್ಯರಾದ ತೋಂಟದಾರ್ಯ, ಗೋ.ಮಧುಸೂದನ್ ಸೇರಿದಂತೆ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ಮಾಡಿದ ಅನೇಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ವಹಿಸಿದ್ದರು. ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮಾಜಿ ಉಪಮೇಯರ್ ವಿ.ಶೈಲೇಂದ್ರ, ಮುಖಂಡರಾದ ಹೆಚ್.ಜಿ.ಗಿರಿಧರ್, ಸೋಮಸುಂದರ್, ಗೋಕುಲ್ ಗೋವರ್ಧನ್, ಬಿ.ಎಂ.ರಘು, ಡಾ.ಅನಿಲ್ ಥಾಮಸ್, ಹೇಮಾ ನಂದೀಶ್, ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಉಪಸಮಿತಿ ಪದಾಧಿಕಾರಿಗಳ ಮೇಲಾಟ ತಪ್ಪಿಸಿ ಜಂಬೂಸವಾರಿ ಜನರಿಗೆ ಕಾಣುವಂತೆ ಮಾಡಿ

ದಸರಾ ಉನ್ನತ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಮೈಸೂರು ಭಾಗದ ಜನಪ್ರತಿನಿಧಿಗಳ ಸಲಹೆ

ಮೈಸೂರು, ಜೂ. 28(ಆರ್‌ಕೆ)– ಪ್ರತಿ ವರ್ಷದಂತೆ ಈ ಬಾರಿಯ ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಉಪ ಸಮಿತಿ ಪದಾಧಿಕಾರಿಗಳು ಸುತ್ತುವರಿಯುವುದು, ಕಿರಿಕಿರಿ ತಪ್ಪಿಸಬೇಕೆಂದು ಮೈಸೂರು ಭಾಗದ ಜನಪ್ರತಿನಿಧಿಗಳು ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದಾರೆ.

ಬೆಂಗಳೂರಿನ ವಿಧಾನಸೌಧದಲ್ಲಿ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ 2025ರ ದಸರಾ ಮಹೋತ್ಸವದ ಉನ್ನತ ಮಟ್ಟದ ಸಭೆಯಲ್ಲಿ ಮಾತನಾಡಿದ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು, ಪ್ರತೀ ವರ್ಷ ವಿಜಯದಶಮಿ ಮೆರವಣಿಗೆಯಲ್ಲಿ ಮೆರವಣಿಗೆ ಉಪಸಮಿತಿ ಸದಸ್ಯರು ಹಾಗೂ ಆಯಾ ಜಾನಪದ ಕಲಾತಂಡಗಳ ವ್ಯವಸ್ಥಾಪಕರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಸಾಗುವುದರಿಂದ ಜನರಿಗೆ ಜಂಬೂಸವಾರಿ ಮೆರವಣಿಗೆ ಕಾಣಿಸುವುದಿಲ್ಲ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ನಾವೂ ಇದನ್ನು ಗಮನಿಸಿದ್ದೇವೆ. ಕೆಲ ಮಾಧ್ಯಮಗಳಲ್ಲೂ ವರದಿಯಾಗಿರುವುದರಿಂದ ಮೆರವಣಿಗೆ ಉಪಸಮಿತಿ ಪದಾಧಿಕಾರಿಗಳು ಅನಗತ್ಯವಾಗಿ ಮೆರವಣಿಗೆಯಲ್ಲಿ ಸುಳಿಯದಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ಸಲಹೆ ನೀಡಿದ್ದಾರೆ.

ಪಾಸ್ ಬೇಗ ಮುದ್ರಿಸಿ ಹಂಚಿ: ಕಳೆದ ಬಾರಿ ಆದ ಪ್ರಮಾದಗಳು ಮೆರವಣಿಗೆ ಉಪಸಮಿತಿಯಿಂದ ಈ ಬಾರಿ ಆಗಬಾರದು. ಶಿಸ್ತುಬದ್ಧವಾಗಿ ವಿಜಯದಶಮಿ ಮೆರವಣಿಗೆ ನಡೆಯಲು ಅವಕಾಶ ಕಲ್ಪಿಸಬೇಕು. ಕಂಡ–ಕಂಡವರು ಎಲ್ಲೆಂದರಲ್ಲಿ ಓಡಾಡುವುದನ್ನು ತಪ್ಪಿಸಬೇಕು. ದಸರಾ ಪಾಸ್‌ಗಳನ್ನು ಒಂದು ವಾರದ ಮುಂಚೆಯೇ ಮುದ್ರಿಸಿ ಹಂಚುವಂತಾಗಬೇಕು. ಕಡೇ ಗಳಿಗೆಯಲ್ಲಿ ಜನರು ಪಾಸ್‌ಗಾಗಿ ಪರದಾಡುವಂತಾಗಬಾರದು. ಕಳೆದ ವರ್ಷ ಒಂದೇ ದಿನ ನಡೆದ ಡ್ರೋಣ್ ಪ್ರದರ್ಶನ ಚೆನ್ನಾಗಿತ್ತು. ಈ ಬಾರಿ ಎರಡು ದಿನ ಆಯೋಜಿಸಿದರೆ ಮತ್ತಷ್ಟು ಮಂದಿ ವೀಕ್ಷಿಸಲಿದ್ದಾರೆ ಎಂಬ ಸಲಹೆಗಳೂ ಸಭೆಯಲ್ಲಿ ಕೇಳಿಬಂದವು.

ದೀಪಾಲಂಕಾರ ಚೆನ್ನಾಗಿ ಮಾಡಿ: ಅತ್ಯಂತ ಜನಪ್ರಿಯ ಕಾರ್ಯಕ್ರಮ ಯುವ ದಸರಾಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವುದರಿಂದ ಈ ಬಾರಿಯೂ ಮೈಸೂರು ಹೊರಭಾಗದ ವಿಶಾಲ ಪ್ರದೇಶದಲ್ಲೇ ಆಯೋಜಿಸುವುದು ಸೂಕ್ತ. ಈ ವರ್ಷ ದಸರಾ ದೀಪಾಲಂಕಾರವನ್ನು ಮತ್ತಷ್ಟು ಚೆನ್ನಾಗಿ ಮಾಡಿ, ಕೊಲ್ಕತ್ತಾದ ದುರ್ಗಾ ಪೂಜೆ ವೇಳೆ ಮಾಡುವ ವಿದ್ಯುತ್ ದೀಪಾಲಂಕಾರ ಮಾದರಿಯಲ್ಲಿ 2025ರ ದಸರಾ ಮಹೋತ್ಸವಕ್ಕೆ ದೀಪಾಲಂಕಾರ ಮಾಡುವುದು ಸೂಕ್ತ ಎಂದು ಶಾಸಕರು ಅಭಿಪ್ರಾಯಪಟ್ಟರು.

ದೇಶದಾದ್ಯಂತ ಎಲ್ಲಾ ಮೆಟ್ರೋಪಾಲಿಟನ್ ಸಿಟಿಗಳು, ಪ್ರಮುಖ ವಿಮಾನ ನಿಲ್ದಾಣಗಳು, ಪ್ರವಾಸಿ ಕೇಂದ್ರಗಳಲ್ಲಿ ಮುಂಚಿತವಾಗಿ ಫ್ಲೆಕ್ಸ್‌ಗಳನ್ನು ಅಳವಡಿಸಿ ಆನ್‌ಲೈನ್‌ನಲ್ಲಿ ದಸರಾ ಮಹೋತ್ಸವದ ಮಾಹಿತಿ ಬಿತ್ತರಿಸಿ, ವಿಶ್ವದಾದ್ಯಂತ ನಾಡಹಬ್ಬಕ್ಕೆ ಪ್ರವಾಸಿಗರನ್ನು ಆಕರ್ಷಿಸುವಂತಾಗಬೇಕು ಎಂದು ಅವರು ಉನ್ನತ ಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಇಂಧನ ಸಚಿವ ಕೆ.ಜೆ. ಜಾರ್ಜ್, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಮೈಸೂರಿನ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ. ಯತೀಂದ್ರ, ಮಧು ಜಿ. ಮಾದೇಗೌಡ, ಡಾ. ಡಿ. ತಿಮ್ಮಯ್ಯ, ಚಾಮರಾಜನಗರ ಶಾಸಕ ಸಿ. ಪುಟ್ಟರಂಗಶೆಟ್ಟಿ, ಶ್ರೀರಂಗಪಟ್ಟಣ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮೈಸೂರು ಮಹಾನಗರ ಪಾಲಿಕೆ ಆಡಳಿತಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪಂಚಾಯ್ತಿ ಸಿಇಓ ಎಸ್. ಯುಕೇಶ್‌ಕುಮಾರ್, ದಕ್ಷಿಣ ವಲಯ ಡಿಐಜಿಪಿ ಡಾ. ಎಂ.ಬಿ. ಬೋರಲಿಂಗಯ್ಯ, ಎಸ್ಪಿ ಎನ್.ವಿಷ್ಣುವರ್ಧನ ಹಾಗೂ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಮೈಸೂರು ದಸರಾ ಉನ್ನತ ಮಟ್ಟದ ಸಭೆ ಶನಿವಾರ ನಡೆಯಿತು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರಾದ ಶ್ರೀ ಎಸ್. ಆರ್. ಮನೋಹರ್ ಬಿನ್ ಶ್ರೀ ಎಸ್. ಎಂ. ರಾಜಶೇಖರ್ ರವರು ಮೈಸೂರು, ಕುವೆಂಪುನಗರ, ಗಗನಚುಂಬಿ ಜೋಡಿ ರಸ್ತೆ, ಜಿ ಮತ್ತು ಹೆಚ್ ಬ್ಲಾಕ್, ನಂ.1112, ರಲ್ಲಿರುವ ಎಸ್ ಅಂಡ್ ಎಸ್ ಇನ್ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿ., ಅಮೃತಸಾಗರ ಬಡಾವಣೆಯ ಮಾಲೀಕರಿಂದ ಖರೀದಿಸಲು ಉದ್ದೇಶಿಸಿದ್ದು, ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರು ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು 14 (ಹದಿನಾಲ್ಕು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು, ತಪ್ಪಿದಲ್ಲಿ ಯಾರಿಂದಲೂ ಯಾವುದೇ ತಕರಾರು/ ಹಕ್ಕುಗಳು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರು / ಹಕ್ಕುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

: ಷೆಡ್ಯೂಲ್ ಸ್ವತ್ತು :

ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂಬರ್ 17/1A, 17/1B, 17/3, 17/4, 17/5, 17/6, 15/1, 15/2, 14/3, 14/4, 14/5, 14/6, 90/1, 90/2, 90/3, 80/2, 54/2 ಮತ್ತು 7/3 ರಲ್ಲಿ ಒಟ್ಟು ವಿಸ್ತೀರ್ಣ 20 ಎಕರೆ 33.50 ಗುಂಟೆ ಜಮೀನಿನಲ್ಲಿ ರಚಿಸಿರುವ ಅಮೃತಸಾಗರ ವಸತಿ ಬಡಾವಣೆಯ ನಿವೇಶನ ಸಂಖ್ಯೆ 118 ಇದರ ಅಳತೆ ಪೂರ್ವ–ಪಶ್ಚಿಮ: (22.90+22.30)/2 ಮತ್ತು ಉತ್ತರ–ದಕ್ಷಿಣ:9.00 ಒಟ್ಟು 203.40 ಚದರ ಮೀಟರ್‌ಗಳ ನಿವೇಶನಕ್ಕೆ ಚಕ್ಕುಬಂದಿ :– ಪೂರ್ವ : 9.0 ಮೀಟರ್ ರಸ್ತೆ, ಪಶ್ಚಿಮ : ಖಾಸಗಿ ಸ್ವತ್ತು, ಉತ್ತರ : ನಿವೇಶನ ಸಂಖ್ಯೆ 117, ದಕ್ಷಿಣ : ನಿವೇಶನ ಸಂಖ್ಯೆ 119.

ಸಹಿ/–, ಶ್ಯಾಮ್ ಲಾಲ್ ಶರ್ಮ. ವಿ,
ಬಿ.ಕಾಂ. ಎಲ್.ಎಲ್.ಬಿ. ವಕೀಲರು,
ನಂ.40, 2ನೇ ಮಹಡಿ, ಬಾಲಾಜಿ ಟವರ್ಸ್, ಜೆ.ಟಿ.ಕೆ ಲೇಔಟ್,
3ನೇ ಹಂತ, ಆದಿಚುಂಚನಗಿರಿ ಮುಖ್ಯ ರಸ್ತೆ, ಕುವೆಂಪುನಗರ,
ಮೈಸೂರು–570023
ಮೊಬೈಲ್ ನಂ.7760981205 & 9880395526

ದಿನಾಂಕ : 29.06.2025
ಸ್ಥಳ : ಮೈಸೂರು

7ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 7 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಕ್ಕಳು, ಮನೋಜ್, ಮೌಲ್ಯ, ಅಕ್ಕ ಭಾವ ತಮ್ಮ ರಾಮಕೃಷ್ಣ, ಸುನೀತ, ಸ್ವರೂಪ್, ಶ್ವೇತ ಕುಟುಂಬದವರು

ಶ್ರೀಮತಿ ಯಶೋಧ

13ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನು ಅಗಲಿ 13 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ದುಃಖತಪ್ತರು
ಪತ್ನಿ ಚಂದ್ರಕಲಾ, ಮಗ ಆನಂದ. ಎಸ್, ಸೊಸೆ ಜ್ಯೋತಿ, ಮೊಮ್ಮಕ್ಕಳು : ದೈವಿಕ್ ಗೌಡ, ಹನ್ವಿಕ ಗೌಡ, ಜನತಾ ನಗರ, ಮೈಸೂರು

ಶ್ರೀ ಸಿದ್ದೇಗೌಡ (ಅಣ್ಣಾಜಿ)
ನಿಧನ:-29.06.2012

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ

ಶ್ರೀಮತಿ ಎನ್ ಶಿವಮ್ಮ
(ನಿವೃತ್ತ ಸರ್ಕಾರಿ ಆರೋಗ್ಯ ಇಲಾಖೆ ನೌಕರರು)
(ಶ್ರೀ ಎಂ ಲಿಂಗರಾಜು ಅವರ ಧರ್ಮಪತ್ನಿ)

ಇವರು ದಿನಾಂಕ 19.06.2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 29.06.2025ನೇ ಭಾನುವಾರ ಬೆಳಗ್ಗೆ 12 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯವನ್ನು ನಮ್ಮ ಸ್ವಗೃಹ #23, ಶಿವಲಿಂಗ ನಿಲಯ, ಯಜಮಾನ ಫಾರ್ಮ್ ಹೌಸ್ ಹಿಂಭಾಗ, ಗಣಗರಹುಂಡಿ ಗದ್ದಿಗೆ ರಸ್ತೆ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಶ್ರೀ ರೂಪ ಮಲ್ಲೇಶ್, ಶ್ರೀಮತಿ ಎಲ್ ದೀಪರಾಜ್ ಶ್ರೀ ಡಾ. ಮಾಲತೇಶ್ ಹಾವನೂರ್, ಶ್ರೀಮತಿ ಪಾರ್ವತಿ ಬಸವರಾಜ್, ಶ್ರೀಮತಿ ರತ್ನ ಬಸವರಾಜು, ಕುಟುಂಬವರ್ಗದವರು ಮತ್ತು ಆಪ್ತಮಿತ್ರರು

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ರಂಗಪ್ಪನವರ ಮಗ, ಶ್ರೀ ಬಿ.ಆರ್. ಯೋಗೀಶ್, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿ ರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, 3ನೇ ಹಂತ, ಡೋರ್ ನಂ. 3281, ಪಿ.ಐ.ಡಿ. ನಂ. 44150 & ವಾರ್ಡ್ ನಂ. 46 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 25 ಮೀಟರ್ ಮತ್ತು ಉತ್ತರ–ದಕ್ಷಿಣ: 15 ಮೀಟರ್, ಒಟ್ಟು ವಿಸ್ತೀರ್ಣ: 360 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿನ ಚಕ್ಕು ಬಂದಿ ಪೂರ್ವಕ್ಕೆ – ಸ್ವತ್ತಿನ ನಂ. 3290 ಮತ್ತು 3289, ಪಶ್ಚಿಮಕ್ಕೆ – ರಸ್ತೆ, ಉತ್ತರಕ್ಕೆ – ಸ್ವತ್ತಿನ ನಂ. 3280 ಮತ್ತು ದಕ್ಷಿಣಕ್ಕೆ ಸ್ವತ್ತಿನ ನಂ. 3282.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1416,
ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com

12ನೇ ವರ್ಷದ ಸವಿನೆನಪು

ವಿಜಯಕುಮಾರಿ

ಸದಾ ನಿನ್ನ ನೆನಪಲ್ಲೇ ಇರುವ
ಪತಿ ಮಹಾದೇವಸ್ವಾಮಿ (ARSI), ಮಕ್ಕಳಾದ ದರ್ಶನ್, ಶಶಾಂಕ್, ಸೊಸೆ ಮಧುಶ್ರೀ ಮತ್ತು ಮೊಮ್ಮಕ್ಕಳು ಹನ್ವಿಕ್, ಹನ್ವಿತ್

ಚಿನಕುರಳಿಗೆ ಮಂಜೂರಾಗಿದ್ದ ಪೊಲೀಸ್ ಠಾಣೆ ಕ್ಯಾತನಹಳ್ಳಿಗೆ ಸ್ಥಳಾಂತರ

ಚಿನಕುರಳಿ ಗ್ರಾಮದಲ್ಲಿ ಸ್ವಯಂಘೋಷಿತ ಬಂದ್

ಗಂಟೆಗಳ ಕಾಲ ರಸ್ತೆ ತಡೆ, ಸಂಚಾರ ಅಸ್ತವ್ಯಸ್ತ, ಸಚಿವರ ವಿರುದ್ಧ ಘೋಷಣೆ



ಚಿನಕುರಳಿ ಗ್ರಾಮದಲ್ಲಿ ಅಂಗಡಿ ಮುಂಗಟ್ಟುಗಳು ಮುಚ್ಚಿರುವುದು.

ಚಿನಕುರಳಿ: ಹೋಬಳಿ ಕೇಂದ್ರವಾದ ಚಿನಕುರಳಿ ಗ್ರಾಮಕ್ಕೆ ಮಂಜೂರಾಗಿದ್ದ ಪೊಲೀಸ್ ಠಾಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶಾಸಕರ ಸ್ವಗ್ರಾಮವಾದ ಕ್ಯಾತನಹಳ್ಳಿಗೆ ಸ್ಥಳಾಂತರ ಮಾಡಿರುವುದನ್ನು ಖಂಡಿಸಿ ಚಿನಕುರಳಿ ಗ್ರಾಮದಲ್ಲಿ ಸ್ವಯಂ ಬಂದ್ ಘೋಷಿಸಿ ರಸ್ತೆ ತಡೆದು ಸಾರ್ವಜನಿಕರು ಬೃಹತ್ ಪ್ರತಿಭಟನೆ ನಡೆಸಿದರು.

ಚಿನಕುರಳಿ ಹಿತರಕ್ಷಣಾ ಸಮಿತಿ ಸದಸ್ಯರು, ಚಿನಕುರಳಿ ಹೋಬಳಿಯ ವಿವಿಧ ಗ್ರಾಪಂಗಳಿಂದ ಆಗಮಿಸಿದ ನೂರಾರು ಸಾರ್ವಜನಿಕರು ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಶ್ರೀರಂಗಪಟ್ಟಣ–ಶಿವಮೊಗ್ಗ ರಾಜ್ಯ ಹೆದ್ದಾರಿಯನ್ನು ತಡೆದು ಮಾನವ ಸರಪಳಿ ನಿರ್ಮಿಸಿ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಬೃಹತ್ ಪ್ರತಿಭಟನೆ ನಡೆಸಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾ ಸ್ಥಳಕ್ಕೆ ಡಿವೈಎಸ್‌ಪಿ ಶಾಂತಮಲ್ಲಪ್ಪ, ತಹಶೀಲ್ದಾರ್ ಸಂತೋಷ್ ಕುಮಾರ್ ಅವರು ಆಗಮಿಸಿ ಮನವಿ ಸ್ವೀಕರಿಸಿ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ವಾಪಸ್ಸು ಪಡೆದರು.

ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಮಾತನಾಡಿ, ಚಿನಕುರಳಿ ಗ್ರಾಮ ಹೋಬಳಿ ಕೇಂದ್ರವಾಗಿದೆ, ಗ್ರಾಮದಲ್ಲಿ ಬ್ರಿಟಿಷರ ಕಾಲದಿಂದಲೂ ಹೊರ ಪೊಲೀಸ್ ಠಾಣೆ ಇದೆ, ಗ್ರಾಮದ ಮಾರ್ಗವಾಗಿ ಶ್ರೀರಂಗಪಟ್ಟಣ–ಶಿವಮೊಗ್ಗ ರಾಜ್ಯ ಹೆದ್ದಾರಿ ಹೋಗುವುದರಿಂದ ಸಾಕಷ್ಟು ಕ್ರೈಂಗಳು ನಡೆಯುತ್ತಿರುತ್ತವೆ. ಆ ಹಿನ್ನೆಲೆಯಲ್ಲಿ ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರು ಪೊಲೀಸ್ ಇಲಾಖೆ ಮೇಲಾಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸಿ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿಸಿದ್ದಾರೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ರಾಜಕೀಯ ದುರುದ್ದೇಶದಿಂದ ಪೊಲೀಸ್ ಇಲಾಖೆಗೆ ಪತ್ರವ್ಯವಹಾರ ನಡೆಸಿ ಚಿನಕುರಳಿಗೆ ಮಂಜೂರಾಗಿದ್ದ ಪೊಲೀಸ್ ಠಾಣೆಯನ್ನು ಶಾಸಕರ ಸ್ವಗ್ರಾಮ ಕ್ಯಾತನಹಳ್ಳಿ ಗ್ರಾಮಕ್ಕೆ ಮಂಜೂರು ಮಾಡಿಸಿದ್ದಾರೆ. ಉಸ್ತುವಾರಿ ಸಚಿವರು ಹಾಗೂ ಶಾಸಕರು ಸರಕಾರದೊಂದಿಗೆ ಚರ್ಚಿಸಿ ಕ್ಯಾತನಹಳ್ಳಿಗೂ ಹೊಸ ಪೊಲೀಸ್ ಠಾಣೆಯನ್ನು ಮಂಜೂರು ಮಾಡಿಕೊಳ್ಳಲಿ, ಅಲ್ಲದೆ ಪ್ರತಿ ಜಿಪಂ ಕ್ಷೇತ್ರಕ್ಕೂ ಹೊಸ ಠಾಣೆಯನ್ನು ಮಂಜೂರು ಮಾಡಿಸಲಿ. ನಮಗೆ ಅಭ್ಯಂತರವಿಲ್ಲ. ಆದರೆ, ರಾಜಕೀಯ ದ್ವೇಷದಿಂದ ಚಿನಕುರಳಿ ಮಂಜೂರಾಗಿರುವ ಪೊಲೀಸ್ ಠಾಣೆಯನ್ನು ಸ್ಥಳಾಂತರಮಾಡಿಸಿರುವುದು ಎಷ್ಟು ಸರಿ ಎಂದು ಕಿಡಿಕಾರಿದರು.

ಹಿಂದಿನ ಶಾಸಕರಾದ ಸಿ.ಎಸ್.ಪುಟ್ಟರಾಜು ಅವರು ಅಭಿವೃದ್ಧಿ ವಿಚಾರದಲ್ಲಿ ಎಂದಿಗೂ ರಾಜಕೀಯ ದ್ವೇಷ ಮಾಡಿಲ್ಲ. ಪ್ರತಿ ಹೋಬಳಿ ಕೇಂದ್ರಕ್ಕೂ ವಿದ್ಯುತ್ ಸಬ್ ಸ್ಟೇಷನ್, ಡಿಗ್ರಿ ಕಾಲೇಜುಗಳನ್ನು ಮಂಜೂರು ಮಾಡಿಸಿದ್ದಾರೆ. ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ರಾಜಕೀಯ ದ್ವೇಷಸಾಧಿಸಲು ಮುಂದಾಗಿದ್ದಾರೆ. ಚಿನಕುರಳಿ ಗ್ರಾಮಕ್ಕೆ ಹತ್ತಿರದಲ್ಲಿ ಪೊಲೀಸ್ ಠಾಣೆಗಳು ಯಾವುದು ಇಲ್ಲ. ಯಾವುದೇ ದೂರು ನೀಡಬೇಕಾದರು 10 ರಿಂದ 15 ಕಿಮೀವರೆಗೆ ಹೋಗಬೇಕಾಗಿದೆ. ಇದನ್ನು ಗಮನಿಸಿಯೇ ಪೊಲೀಸ್ ಇಲಾಖೆಯ ಅಧಿಕಾರಿಗಳು ಚಿನಕುರಳಿಯಲ್ಲಿದ್ದ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸಿದ್ದಾರೆ. ಆದರೆ, ಕ್ಯಾತನಹಳ್ಳಿ ಗ್ರಾಮಕ್ಕೆ ಪಾಂಡವಪುರ, ಶ್ರೀರಂಗಪಟ್ಟಣ ಹಾಗೂ ಕೆಆರ್‌ಎಸ್ ಪೊಲೀಸ್ ಠಾಣೆಗಳು ಹತ್ತಿರವಾಗಿವೆ, ಹೀಗಿ ರುವಾಗ ಮಂಜೂರಾಗಿರುವ ಠಾಣೆಯನ್ನು ಬೇರೆಡೆಗೆ ಸ್ಥಳಾಂತರಿಸಿದ್ದಾರೆ. ಇದು ರಾಜಕೀಯ ದುರುದ್ದೇಶ ಅಲ್ಲವೇ? ಜಿಲ್ಲಾಮಂತ್ರಿಗಳು ಕೂಡಲೇ ರದ್ದುಪಡಿಸಿ ಚಿನಕುರಳಿ ಗ್ರಾಮಕ್ಕೆ ಮಂಜೂರಾಗಿರುವ ಠಾಣೆಯನ್ನು ಇಲ್ಲಿಯೇ ಉಳಿಸಿ, ಕ್ಯಾತನಹಳ್ಳಿಗೆ ಹೊಸ ಠಾಣೆ ಯನ್ನು ಮಂಜೂರು ಮಾಡಿಸಿ. ಇಲ್ಲವಾದರೆ ಇಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದ್ದೇವೆ, ಮುಂದೆ ಉಗ್ರ ಸ್ವರೂಪದ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಗುಂಡಿರಸ್ತೆ: ಚಿನಕುರಳಿ ಮಾರ್ಗವಾಗಿ ಹಾದುಹೋಗುವ ಶ್ರೀರಂಗಪಟ್ಟಣ–ಶಿವಮೊಗ್ಗ ರಾಜ್ಯ ಹೆದ್ದಾರಿ ರೈಲ್ವೆ ಸ್ಟೇಷನ್‌ನಿಂದ ತಾಲೂಕಿನ ಗಡಿ ಗ್ರಾಮ ಅಶೋಕನಗರದವರೆಗೂ ಗುಂಡಿಬಿದ್ದು ಸಂಪೂರ್ಣವಾಗಿ ಅಧ್ವಾನಗೊಂಡಿದೆ. ವಾಹನ ಸವಾರರು ಓಡಾಡಲು ಸಾಧ್ಯವಾಗುತ್ತಿಲ್ಲ, ನಿತ್ಯ ಹಲವಾರು ಮಂದಿ ಬೈಕ್ ಸವಾರರು ಬಿದ್ದು ಸಾವು–ನೋವು ಅನುಭವಿಸುತ್ತಿದ್ದಾರೆ. ಹಾಗಾಗಿ ಸಂಬಂಧಪಟ್ಟ ಅಧಿಕಾರಿಗಳು ರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚಿಸುವ ಕೆಲಸ ಮಾಡಬೇಕು. ಮಾಜಿ ಪ್ರಧಾನಮಂತ್ರಿಗಳು ಪತ್ರವ್ಯವಹಾರ ನಡೆಸಿದ ಮೇರೆಗೆ ಈ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು ಮುಂದಾಗಿದ್ದಾರೆ ಅಲ್ಲಿಯವರೆಗಾದರು ಗುಂಡಿಮುಚ್ಚಿಸಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು.

ಸ್ವಯಂ ಘೋಷಿಸಿತ ಬಂದ್: ಪೊಲೀಸ್ ಠಾಣೆಯನ್ನು ಸ್ಥಳಾಂತರ ಮಾಡಿರುವುದನ್ನು ಖಂಡಿಸಿ ಚಿನಕುರಳಿ ಗ್ರಾಮದಲ್ಲಿ ವರ್ತಕರು ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸ್ವಯಂ ಘೋಷಿತ ಬಂದ್ ಮಾಡಿದರು. ಇದರಿಂದಾಗಿ ಆಸ್ಪತ್ರೆ ಮೆಡಿಕಲ್ ಹೊರತುಪಡಿಸಿ ಉಳಿದಂತೆ ಅಂಗಡಿಮುಂಗಟ್ಟು ಹೋಟೆಲ್‌ಗಳು ಸೇರಿದಂತೆ ಎಲ್ಲವು ಬಂದ್ ಆಗಿದ್ದವು.

ಪ್ರತಿಭಟನೆಯಲ್ಲಿ ಜೆಡಿಎಸ್ ಮುಖಂಡರಾದ ಕೋಡಾಲ ರಾಧಾಕೃಷ್ಣ, ಚಿನಕುರಳಿ ಗ್ರಾಪಂ ಅಧ್ಯಕ್ಷೆ ಧನಲಕ್ಷ್ಮಿ, ನಾರಾಣಪುರ ಗ್ರಾಪಂ ಅಧ್ಯಕ್ಷ ಕೆ.ಕೆ.ಪ್ರಕಾಶ್, ಡಿಂಕಾ ಗ್ರಾಪಂ ಅಧ್ಯಕ್ಷ ನಂಜೇಗೌಡ ಸೇರಿದಂತೆ ಚಿನಕುರಳಿ ಹೋಬಳಿಯ ಕಾರ್ಯಕರ್ತರು, ಮುಖಂಡರು ಭಾಗವಹಿಸಿದ್ದರು.



ಚಿನಕುರಳಿಯಲ್ಲಿ ಸಾರ್ವಜನಿಕರು ಬೃಹತ್ ಪ್ರತಿಭಟನೆ ನಡೆಸಿ ಡಿವೈಎಸ್‌ಪಿ, ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಅಭಿವೃದ್ಧಿ ವಿಚಾರದಲ್ಲಿ ನಾನು ರಾಜಕೀಯ ಮಾಡಿಲ್ಲ

ರಾಜಕೀಯ ಮಾಡುವವರಿಗೆ ಮತದಾರರಿಂದಲೇ ತಕ್ಕ ಪಾಠ: ಸಿ.ಎಸ್.ಪುಟ್ಟರಾಜು



ಚಿನಕುರಳಿ: ನಾನು ಶಾಸಕನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಅಭಿವೃದ್ಧಿ ವಿಚಾರದಲ್ಲಿ ಎಂದಿಗೂ ರಾಜಕೀಯ ಮಾಡಿಲ್ಲ. ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡುತ್ತಿರುವ ಸಚಿವ ಎನ್.ಚಲುವರಾಯಸ್ವಾಮಿಗೆ ಜನತೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಾಗ್ದಾಳಿ ನಡೆಸಿದರು.

ಜಿಲ್ಲೆಯ ಜನತೆ ಐವತ್ತು ಸಾವಿರ ಮತಗಳಿಂದ ಸೋಲಿಸಿದ್ದಾರೆ, ಗೆಲ್ಲಿಸಿದ್ದಾರೆ. ಚುನಾವಣೆಯಲ್ಲಿ ನಾನು ಗೆದ್ದಿದ್ದೇನೆ, ಸೋತಿದ್ದೇನೆ. ರಾಜಕೀಯದಲ್ಲಿ ಅಧಿಕಾರ ಶಾಶ್ವತವಲ್ಲ, ಕಾಲಚಕ್ರದಲ್ಲಿ ಇಂದು ಮೇಲಿರುವವರು ಕೆಳಗಡೆ ಬರಲೇಬೇಕು. ಸಚಿವ ಎನ್.ಚಲುವರಾಯಸ್ವಾಮಿ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬಿಟ್ಟರೆ ನಾನೇ ಒಕ್ಕಲಿಗ ಸಮುದಾಯದ ಪರಮೋಚ್ಚ ನಾಯಕ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

ಶಾಸಕರಾಗಿ, ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಎಲ್ಲರನ್ನು ಸಮಾನತೆಯಿಂದ ಕಾಣುವುದಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ನಡೆದುಕೊಳ್ಳುವುದಾಗಿ ಅಧಿಕಾರ ಸ್ವೀಕರಿಸುತ್ತಾರೆ. ಆನಂತರದಲ್ಲಿ ದ್ವೇಷದ ರಾಜಕಾರಣ ಮಾಡುತ್ತಾರೆ. ರಾಜಕೀಯ ಮಾಡೋದು ಬೇರೆ ವಿಚಾರ. ಅಭಿವೃದ್ಧಿ ವಿಚಾರದಲ್ಲಿ ಸಮಾನತೆ ಇರಬೇಕು. ಚಿನಕುರಳಿಗೆ ಮಂಜೂರಾಗಿದ್ದ ಪೊಲೀಸ್ ಠಾಣೆಯನ್ನು ಕ್ಯಾತನಹಳ್ಳಿಗೆ ಸ್ಥಳಾಂತರಿಸಿರುವುದು ದುರುದ್ದೇಶದ ರಾಜಕಾರಣ. ಇದರಲ್ಲಿ ಚಲುವರಾಯಸ್ವಾಮಿ ಅವರ ಸೇಡಿನ ರಾಜಕಾರಣ ಅಡಗಿದೆ ಎಂದು ಆಕ್ರೋಶ ಹೊರಹಾಕಿದರು.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಮನವಿ ಮೇರೆಗೆ ಪಾಂಡವಪುರ ರೈಲ್ವೇ ನಿಲ್ದಾಣದಿಂದ ಶಿವಮೊಗ್ಗ ಸೇರಿದಂತೆ ಇನ್ನಿತರೆ ನಗರಗಳನ್ನು ಸಂಪರ್ಕಿಸುವ ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಾಡುಗೊಳ್ಳುತ್ತಿದೆ. ಆದರೆ ಈ ರಸ್ತೆ ಅಭಿವೃದ್ಧಿ ಕಾಣದೆ ಗುಂಡಿ ಬಿದ್ದಿರುವ ಕಾರಣ ಜನ ಅಪಘಾತಕ್ಕೊಳಗಾಗಿ ಕೈ–ಕಾಲು ಕಳೆದುಕೊಳ್ಳುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಇದನ್ನು ಕಣ್ತೆರೆದು ನೋಡಬೇಕು. ಪಂಚಾಯಿತಿಗೆ ಎರಡೆರಡು ಸಿಎಲ್–7 ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಅನುಮತಿ ನೀಡುವ ಮೂಲಕ ಯುವ ಸಮುದಾಯವನ್ನು ಕುಡಿತದ ಚಟಕ್ಕೆ ತಳ್ಳಲಾಗುತ್ತಿದೆ. ಯುವಕರು ಕಲಬೆರಕೆ ಮದ್ಯ ಕುಡಿದು ಸಾಯುವುದಕ್ಕಿಂತ ಇದು ಪರವಾಗಿಲ್ಲ ಎಂದು ನಾವು ಎಲ್ಲವನ್ನು ಸಹಿಸಿಕೊಂಡಿದ್ದೇವೆ. ಮುಂದೆ ಕಾಲ ಬರುತ್ತದೆ ಇವರು ಕೆಲಸ ಮಾಡಲಿ ಬಿಡಲಿ ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ರಾಜಕೀಯ ಕ್ರಾಂತಿ ಆಗಬಹುದು: ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆಯಂತೆ ಮುಂದಿನ ದಿನಗಳಲ್ಲಿ ರಾಜ್ಯ ರಾಜಕಾರಣದಲ್ಲಿ ಕ್ರಾಂತಿ ಆಗಬಹುದು. ರಾಜಣ್ಣ ಯಾವ ಆಧಾರದ ಮೇಲೆ ಕ್ರಾಂತಿ ವಿಚಾರ ಪ್ರಸ್ತಾಪಿಸಿದ್ದಾರೆ ಗೊತ್ತಿಲ್ಲ. ಮುಂದಿನ ಬೆಳವಣಿಗೆ ಬಗ್ಗೆ ಅವರನ್ನೇ ಕೇಳಿ ತಿಳಿದುಕೊಳ್ಳಬೇಕು. ಅಮೇರಿಕಾದಲ್ಲಿ ನಡೆಯುವ ವಿಶ್ವ ಒಕ್ಕಲಿಗರ ಸಮ್ಮೇಳನಕ್ಕೆ ನಾನು ಹೋಗುತ್ತಿದ್ದೇನೆ. ಅಲ್ಲಿಗೆ ಬರುವ ಕಾಂಗ್ರೆಸ್ ನಾಯಕರನ್ನು ಕೇಳಿ ಈ ಪ್ರಶ್ನೆಗಳಿಗೆ ಉತ್ತರಿಸುವುದಾಗಿ ತಿಳಿಸಿದರು.

ಚಾಮುಂಡೇಶ್ವರಿ ದರ್ಶನದಿಂದ ಉತ್ತಮ ಮಳೆ: ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಭೀಕರ ಬರಗಾಲ ಎದುರಾಗುತ್ತಿತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ಚಾಮುಂಡೇಶ್ವರಿ ದರ್ಶನಕ್ಕೆ ಹೋಗುತ್ತಿರಲಿಲ್ಲ. ಈಗ ಚಾಮುಂಡಿ ಮೇಲೆ ಭಕ್ತಿ ಹೆಚ್ಚಾಗಿ ದರ್ಶನಕ್ಕೆ ಹೋಗುತ್ತಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ತುಂಬುತ್ತಿವೆ. ರಾಜ್ಯದ ಜನತೆಗೆ ಒಳ್ಳೆಯದಾಗಲಿ ಎಂದರು.

ನಾಳೆ ಮುಖ್ಯಮಂತ್ರಿಗಳಿಂದ ಕಾವೇರಿಗೆ ಬಾಗಿನ ಸಮರ್ಪಣೆ

ಕೆಆರ್‌ಎಸ್‌ನಲ್ಲಿ ಅಧಿಕಾರಿಗಳಿಂದ ಸಿದ್ಧತೆ ಪರಿಶೀಲನೆ

ಶ್ರೀರಂಗಪಟ್ಟಣ, ಜೂ.28– ಕೃಷ್ಣರಾಜಸಾಗರ ಅಣೆಕಟ್ಟೆ ನಿರ್ಮಾಣವಾದಾಗಿನಿಂದ ಇಲ್ಲಿವರೆಗೆ ಜೂನ್‌ನಲ್ಲಿ ಅಣೆಕಟ್ಟೆ ಭರ್ತಿ ಆಗಿರಲಿಲ್ಲ. ಇದೊಂದು ಐತಿಹಾಸಿಕ ಸಂದರ್ಭವಾಗಿದೆ. ಇಂಥ ಸಂದರ್ಭದಲ್ಲಿ ಸೋಮವಾರ (ಜೂ.30)ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳು ಕಾವೇರಿ ಮಾತೆಗೆ ಬಾಗಿನ ಅರ್ಪಿಸಲಿದ್ದಾರೆ ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ತಿಳಿಸಿದರು.

ಶನಿವಾರ ಅಧಿಕಾರಿಗಳ ಜೊತೆ ಅಣೆಕಟ್ಟೆ ಬಳಿ ನಡೆಯುತ್ತಿರುವ ಪೂರ್ವಭಾವಿ ಸಿದ್ಧತೆಗಳನ್ನು ವೀಕ್ಷಿಸಿ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ನಿಗದಿಪಡಿಸಿರುವ ಎಲ್ಲಾ ಗಣ್ಯರಿಗೆ ಆಮಂತ್ರಣ ನೀಡಲಾಗಿದೆ. ಪೆಂಡಾಲ್ ಸೇರಿದಂತೆ ಸುಣ್ಣ ಬಣ್ಣ ಹೊಡೆಯುವ ಕೆಲಸಗಳೆಲ್ಲಾ ತ್ವರಿತಗತಿಯಲ್ಲಿ ಸಾಗಿದೆ ಉಳಿದಿರುವ ಬಾಕಿ ಕೆಲಸಗಳನ್ನು ನಿಗದಿತ ಸಮಯದಲ್ಲಿ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಕೃಷ್ಣರಾಜಸಾಗರ ಅಣೆಕಟ್ಟೆ ಸಂಪೂರ್ಣ ಭರ್ತಿಯಾಗಿ ಗರಿಷ್ಠ ಮಟ್ಟ 124.80 ಅಡಿಗೆ ತಲುಪಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೂ.30ರಂದು ಬೆಳಗ್ಗೆ 10.30 ಘಂಟೆಗೆ ಬರಲಿದ್ದು, ಸಿದ್ಧತೆ ಬರದಿಂದ ಸಾಗಿದೆ ಈ ಬಾರಿ ಸುಮಾರು 5 ಸಾವಿರ ಜನರು ಭಾಗವಹಿಸುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಕಾರ್ಯಕ್ರಮದ ಬೃಹತ್ ವೇದಿಕೆ ಕೆ.ಆರ್.ಸಾಗರದ ಬೃಂದಾವನದಲ್ಲಿರುವ ಕಾವೇರಿ ಪ್ರತಿಮೆ ಮುಂಭಾಗದಲ್ಲಿ ಸಜ್ಜಾಗುತ್ತಿದೆ ಎಂದರು.

ಪ್ರತಿ ವರ್ಷ ಮುಖ್ಯಮಂತ್ರಿಗಳು ಕಾವೇರಿ ಮಾತೆಗೆ ಬಾಗಿನ ಅರ್ಪಿಸಿ, ಪೂಜೆ ಸಲ್ಲಿಸಿ ಬರುತ್ತಿದ್ದಂತೆ ಕಾವೇರಿ ಪ್ರತಿಮೆ ಮುಂಭಾಗದ ಎಡಭಾಗದಲ್ಲಿ ವೇದಿಕೆ ಇರುತ್ತಿತ್ತು, ಈ ಬಾರಿ ನಿರ್ಮಿಸುತ್ತಿರುವ ಟೆಂಟ್ ವೇದಿಕೆ ಹಲವು ಮಾರ್ಪಾಡುಗಳಿಂದ ಕೂಡಿದೆ, ವೇದಿಕೆಯನ್ನು ಕಾವೇರಿ ಮಾತೆಗೆ ಮುಖವಾಗಿ ನಿರ್ಮಿಸಲಾಗುತ್ತಿದ್ದು, ಸುಮಾರು 100 ಅಡಿ ಉದ್ದ ಹಾಗೂ 40 ಅಡಿ ಅಗಲದಿಂದ ಕೂಡಿದೆ. ಮಳೆಯಾದರು ಸಾರ್ವಜನಿಕರಿಗೆ ತೊಂದರೆಯಾಗದಿರಲಿ ಎಂದು ಆಧುನಿಕ ರೀತಿಯಲ್ಲಿನ ವೇದಿಕೆ ಸಿದ್ಧವಾಗುತ್ತಿದೆ ಎಂದು ಅವರು ವಿವರಿಸಿದರು.

ಮೂರನೇ ಪುಟದಿಂದ

ಅದ್ಧೂರಿ ದಸರಾ ಆಚರಿಸಿ

ಜಾರಿ ಮಾಡಿರುವ ಜನಪರ ಕಾರ್ಯಕ್ರಮಗಳು ಜನರಿಗೆ ಮನದಟ್ಟಾಗುವಂತೆ ಯೋಜನೆ ರೂಪಿಸಬೇಕು. ಸೆಪ್ಟೆಂಬರ್ 22ರಂದು ದಸರಾ ಹಬ್ಬಕ್ಕೆ ಚಾಲನೆ ದೊರೆಯಲಿದೆ. ಅಕ್ಟೋಬರ್ 2ರಂದು ವಿಜಯದಶಮಿ, ಜಂಬೂಸವಾರಿ ನಡೆಯಲಿದೆ. ಈ ಬಾರಿ ದಸರಾ 10 ದಿನಗಳ ಬದಲು 11 ದಿನಗಳ ಆಚರಣೆಯಾಗಲಿದೆ.

ಪ್ರಮುಖ ರಸ್ತೆ ದುರಸ್ತಿಗೆ ಸೂಚನೆ : ವಿಶ್ವವಿಖ್ಯಾತ ದಸರಾ ಪರಂಪರೆ ಮುಂದುವರೆಸುವಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ, ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆ, ಕೆಆರ್‌ಎಸ್ ರಸ್ತೆ ಸೇರಿದಂತೆ ಎಲ್ಲಾ ಪ್ರಮುಖ ರಸ್ತೆಗಳ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಿ ಎಂದು ಆದೇಶಿಸಿದರು.

ವಸ್ತುಪ್ರದರ್ಶನದ ಮಳಿಗೆ ಖಾಲಿ ಇರಬಾರದು: ವಸ್ತುಪ್ರದರ್ಶನದ ಮಳಿಗೆಗಳು ಉದ್ಘಾಟನೆ ಸಂದರ್ಭದಲ್ಲೇ ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಂಡಿರಬೇಕು. ಈ ಬಾರಿಯೂ ದೊಡ್ಡ ಪ್ರಮಾಣದಲ್ಲಿ ಡ್ರೋಣ್ ಶೋ ಆಯೋಜಿಸಿ.

ಗೋಲ್ಡ್ ಕಾರ್ಡ್ ಗೊಂದಲ ಬೇಡ: ಯಾವುದೇ ಗೊಂದಲಕ್ಕೆ ಆಸ್ಪದವಾಗದಂತೆ ಗೋಲ್ಡ್ ಕಾರ್ಡ್ ವಿತರಿಸಬೇಕು, ದಸರಾ ವೀಕ್ಷಿಸಲು ಆಗಮಿಸುವವರಿಗೆ ಹೆಚ್ಚಿನ ಪ್ರಮಾಣದಲ್ಲಿ ಶೌಚಾಲಯ, ವಾಹನ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಲಭ್ಯ ಕಲ್ಪಿಸಬೇಕು. ದಸರಾ ವೇಳೆ ಅಧಿಕಾರಿಗಳು ಜನ ಸಾಮಾನ್ಯರಿಗೆ ದೊರೆಯುವುದಿಲ್ಲ ಎಂಬ ದೂರುಗಳಿದ್ದು, ಈ ಬಾರಿ ಇಂತಹ ದೂರುಗಳಿಗೆ ಆಸ್ಪದ ನೀಡಬಾರದು, ಜನಸಾಮಾನ್ಯರ ಕೆಲಸ ಕಾರ್ಯಗಳು, ಅಭಿವೃದ್ಧಿ ಕಾರ್ಯಗಳು ಯಾವುದೇ ಕಾರಣಕ್ಕೂ ಕುಂಠಿತವಾಗಬಾರದು. ಈ ಬಾರಿ ದಸರಾ ಉದ್ಘಾಟನೆಗೆ ಯಾರನ್ನು ಆಹ್ವಾನಿಸಬೇಕು ಎಂಬುದನ್ನು ಮುಖ್ಯ ಮಂತ್ರಿ ಅವರ ವಿವೇಚನೆಗೆ ಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

> ಕಳೆದ ಬಾರಿ ಅರಮನೆ ಮುಂದೆ ಆಸನ ವ್ಯವಸ್ಥೆಯನ್ನು 54ಸಾವಿರಕ್ಕೆ ಹೆಚ್ಚಿಸಲಾಗಿತ್ತು ಇದರಿಂದಾಗಿ ಜಂಬೂಸವಾರಿ ಸಂದರ್ಭದಲ್ಲಿ ಜನದಟ್ಟಣೆ ಉಂಟಾಗಿತ್ತು, ಈ ಬಾರಿ ಜನದಟ್ಟಣೆ ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕಾಗಿದೆ. ಕಾರ್ಯಕ್ರಮ ಸ್ಥಳಗಳಲ್ಲಿಯೂ ಜನದಟ್ಟಣೆ ಆಗದಂತೆ ಎಚ್ಚರಿಕೆ ವಹಿಸಬೇಕು. **– ಡಾ.ಎಚ್.ಸಿ.ಮಹದೇವಪ್ಪ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ**

> ಮೈಸೂರು ದಸರಾ ಪ್ರಾಧಿಕಾರ ಸ್ಥಾಪಿಸಿ, ಅದರ ಮೂಲಕ ದಸರಾ ವ್ಯವಸ್ಥಿತ ಆಚರಿಸಬೇಕು. ಕುಳಿತುಕೊಳ್ಳುವ ಸ್ಥಳಾವಕಾಶ ಹೆಚ್ಚಿಸಬೇಕು. ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿರಬೇಕು. **–ತನ್ವೀರ್ ಸೇಠ್, ಶಾಸಕರು**

> ಈ ಬಾರಿ ಉತ್ತಮ ಮಳೆಯಾಗಿದ್ದು, ರೈತರು ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದಾರೆ. ನದಿಗಳು ತುಂಬಿ ಹರಿಯುತ್ತಿವೆ. ಕೆಆರ್‌ಎಸ್ ಈ ಬಾರಿ ಬೇಗನೇ ಭರ್ತಿಯಾಗಿದೆ. ಜಂಬೂಸವಾರಿ ಸಂದರ್ಭದಲ್ಲಿ ಕಲಾ ತಂಡಗಳನ್ನು ಹೊರತುಪಡಿಸಿ ಬೇರೆ ಯಾರೂ ಓಡಾಡಲು ಅವಕಾಶ ನೀಡಬಾರದು. ಕಲಾ ತಂಡಗಳಲ್ಲಿ ವೈವಿಧ್ಯತೆ ಇರಬೇಕು. **–ಜಿ.ಟಿ.ದೇವೇಗೌಡರು, ಶಾಸಕರು.**

ಚಾ.ನಗರ ದಸರಾ ಉತ್ಸವ ನಡೆಯಲ್ಲ

ಆದ್ದರಿಂದ ಅಲ್ಲಿ ಮುಂದುವರಿಸೋಣ ಎಂದಾಗ, ನೀವೇ ಚಾಮರಾಜನಗರದಲ್ಲಿ ದಸರಾ ಆರಂಭಿಸಿದ್ದೀರಿ ಎಂದು ಸದಸ್ಯರು ಗಮನಕ್ಕೆ ತಂದಾಗ, ನಾನೆಂದೂ ಇದಕ್ಕೆ ಪ್ರೋತ್ಸಾಹ ನೀಡಿಲ್ಲ, ಆಚರಣೆ ಮಾಡುವಂತೆಯೂ ಹೇಳಿಲ್ಲ ಎಂದರು. ಚಾಮರಾಜನಗರಕ್ಕೆ ಅವಕಾಶ ನೀಡಿದರೆ, ಕೊಡಗಿನವರು, ಮಂಗಳೂರಿನವರು ದಸರಾ ಆಚರಣೆ ಬೇಡಿಕೆ ಇಡುತ್ತಾರೆ. ಎಲ್ಲೆಡೆ ಮಾಡುತ್ತಾ ಹೋದರೆ ವಿಶ್ವವಿಖ್ಯಾತ ಮೈಸೂರು ದಸರಾ ಕಳೆಗುಂದುತ್ತದೆ ಎಂದರು.

ಚರ್ಚೆ ಆಗಿಲ್ಲ

ಸಣ್ಣ ಕೈಗಾರಿಕಾ ವಲಯದ ಪರಿಸ್ಥಿತಿಯ ಅರಿವಿದೆ. ವಲಯ ಎಷ್ಟು ಉದ್ಯೋಗ ಸೃಷ್ಟಿಸುತ್ತದೆ, ಎಷ್ಟು ಶ್ರಮಿಸುತ್ತದೆ ಎಂಬುದನ್ನು ನೋಡಿದ್ದೇನೆ. ಕೇಂದ್ರ ಸರ್ಕಾರ ದೊಡ್ಡ ಯೋಜನೆ ಘೋಷಣೆ ಮಾಡುತ್ತದೆ. ಗ್ಯಾರಂಟಿ ಇಲ್ಲದೆ ಸಾಲ ಸೌಲಭ್ಯ ನೀಡಬೇಕು ಎಂಬುದಾಗಿ ಹೇಳುತ್ತದೆ. ಬ್ಯಾಂಕ್‌ನವರು ಅಗತ್ಯ ಸಹಕಾರ ನೀಡುತ್ತಿಲ್ಲ, ಹಳೇ ಉದ್ಯಮಿಗಳಿಗೆ ಸಹಕಾರ ನೀಡುವಂತೆ ಹೊಸಬರಿಗೆ ಸಹಕಾರ ನೀಡುವುದಿಲ್ಲ. ಕಾರ್ಮಿಕರ ಸಮಸ್ಯೆ ಕುರಿತು ಸಿಎಂ ಜೊತೆ ಚರ್ಚಿಸಿ ಕಾರ್ಮಿಕ ಸಚಿವರಿಗೆ ಅಗತ್ಯ ಸೂಚನೆ ನೀಡಿದ್ದೇನೆ, ನಿಯೋಗದೊಂದಿಗೆ ಸಚಿವರ ಭೇಟಿ ಮಾಡಿ ಪರಿಸ್ಥಿತಿ ವಿವರಿಸಿ, ಬೇರೆ ರಾಜ್ಯಗಳಿಗೆ ಸ್ಥಳಾಂತರಗೊಳ್ಳುವ ಅವಕಾಶವನ್ನು ನಾಯಕರಿಗೆ ತಿಳಿಹೇಳಲಾಗುವುದು ಎಂದರು.

ದಸರಾವನ್ನ ಹೊಸ ಸಿಎಂ ಉದ್ಘಾಟಿಸ್ತಾರೆ!

ಸೆಪ್ಟೆಂಬರ್ ನಂತರ ರಾಜ್ಯದಲ್ಲಿ ಸಿಎಂ ಬದಲಾವಣೆ ಖಚಿತ, ನಿಶ್ಚಿತ ಎಂದು ನಾನು ಈ ಹಿಂದೆಯೇ ಸದನದಲ್ಲಿ ಹೇಳಿದ್ದೇನೆ. ಅದರ ಮುಂದುವರೆದ ಭಾಗವಾಗಿ ಕಾಂಗ್ರೆಸ್ ಶಾಸಕರು ಹಾಗೂ ಸಚಿವರು ಈಗ ಸೆಪ್ಟೆಂಬರ್ ಕ್ರಾಂತಿ ಎನ್ನುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಕಿತ್ತಾಟ ಜೋರಾಗಿದೆ. ಒಬ್ಬರು ಅಧಿಕಾರ ಹಸ್ತಾಂತರ ಎನ್ನುತ್ತಾರೆ. ಮತ್ತೊಬ್ಬರು ಸಿದ್ದರಾಮಯ್ಯ ಅವರೇ ಮುಂದುವರೆಯಲಿದ್ದಾರೆ ಎನ್ನುತ್ತಾರೆ. ಈ ಎಲ್ಲಾ ಬೆಳವಣಿಗೆ ನಡುವೆ ಸಿದ್ದರಾಮಯ್ಯ ಏನೂ ಆಗಿಲ್ಲ ಎಂಬಂತೆ ಸುಳ್ಳು ಹೇಳುತಾ ಸಾಗುತ್ತಿದ್ದಾರೆ ಎಂದರು.

ಅಧಿಕಾರ ಹಂಚಿಕೆ ಒಪ್ಪಂದದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಡಲಿದ್ದಾರೆ ಎಂದರು.

ಹೈಕಮಾಂಡ್ ಆಹ್ವಾನದ ಮೇರೆಗೆ ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಪಕ್ಷದ ಅಧ್ಯಕ್ಷರ ಬದಲಾವಣೆ ಚರ್ಚೆಯೇ ಆಗಿಲ್ಲ. ದೇಶದ ಇತರೆ ರಾಜ್ಯಗಳಲ್ಲಿ ಬದಲಾವಣೆ ಪ್ರಕ್ರಿಯೆ ಆರಂಭವಾಗಿದೆ. ನನಗೆ 3 ತಿಂಗಳಿಗೊಮ್ಮೆ ರಾಜ್ಯದ ವರದಿ ಕೊಡಲು ವರಿಷ್ಠರು ಹೇಳಿದ್ದಾರೆ. ಹೀಗಾಗಿ ದೆಹಲಿಗೆ ತೆರಳಿ ವರದಿ ನೀಡಿದ್ದೇನೆ ಎಂದರು.

ಮೂವರು ಆರೋಪಿಗಳ ಬಂಧನ

ವನ್ಯಜೀವಿ ಅಪರಾಧ ಪ್ರಕರಣವೆಂದು ಪರಿಗಣಿಸಿ, ಹೂಗ್ಯಂ ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಅವರು ಸ್ಥಳೀಯ ಶಾಸಕ ಅನಿಲ್ ಚಿಕ್ಕಮಾದು ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದರಲ್ಲದೆ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದರು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ(ಎನ್‌ಟಿಸಿಎ) ರಚಿಸಿದ ವಿಶೇಷ ತನಿಖಾ ತಂಡ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಅವರಿಂದ ರಚಿಸಲಾದ ಉನ್ನತ ಮಟ್ಟದ ವಿಚಾರಣಾ ಸಮಿತಿ ತನಿಖೆ ಕೈಗೊಂಡಿತ್ತು. ಜೊತೆಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರೂ ಸ್ಥಳ ಪರಿಶೀಲಿಸಿ, ಪರಿಸ್ಥಿತಿ ಅವಲೋಕಿಸಿದ್ದರು.

ಸಚಿವರ ಸೂಚನೆಯಂತೆ ಹಿರಿಯ ಅರಣ್ಯಾಧಿಕಾರಿಗಳ ನಿರ್ದೇಶನದಲ್ಲಿ ಅರಣ್ಯ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ತಂಡ ಜಂಟಿ ಕಾರ್ಯಾಚರಣೆ ನಡೆಸಿ, ಮೂವರು ಆರೋಪಿಗಳನ್ನು ಬಂಧಿಸಿದೆ. ಆರೋಪಿಗಳು ವಿಚಾರಣೆ ವೇಳೆ ಹುಲುಗಳಿಗೆ ಬಲಿಯಾದ ಹಸುವಿನ ಉಳಿದ ಮಾಂಸಕ್ಕೆ ವಿಷ ಪ್ರಾಶನ ಮಾಡಿರುವುದಾಗಿ ತಿಳಿಸಿದ್ದು, ಅವರನ್ನು ದಸ್ತಗಿರಿ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಸಚಿವ ಈಶ್ವರ್ ಬಿ.ಖಂಡ್ರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

370ನೇ ವಿಧಿ ಅಂಬೇಡ್ಕರ್ ಏಕ ಸಂವಿಧಾನ ಸಿದ್ಧಾಂತಕ್ಕೆ ವಿರುದ್ಧವಾಗಿತ್ತು

ಸಿಜೆಐ ಬಿ.ಆರ್.ಗವಾಯಿ



ನಾಗ್ಪುರ, ಜೂ.28–ಡಾ.ಬಿ.ಆರ್. ಅಂಬೇಡ್ಕರ್ ಅವರು ದೇಶವನ್ನು ಒಗ್ಗಟ್ಟಿನಿಂದ ಇರಿಸಲು ಒಂದೇ ಸಂವಿಧಾನವನ್ನು ಕಲ್ಪಿಸಿಕೊಟ್ಟಿದ್ದರು. ಆದರೆ, ಯಾವುದೇ ರಾಜ್ಯಕ್ಕೆ ಪ್ರತ್ಯೇಕ ಸಂವಿಧಾನದ ಕಲ್ಪನೆಯನ್ನು ಎಂದಿಗೂ ಬೆಂಬಲಿಸಲಿಲ್ಲ. ಜಮ್ಮು–ಕಾಶ್ಮೀರಕ್ಕೆ ನೀಡಿದ್ದ 370ನೇ ವಿಧಿ ಅಂಬೇಡ್ಕರ್ ಅವರ ಏಕ ಸಂವಿಧಾನ ಸಿದ್ಧಾಂತಕ್ಕೆ ವಿರುದ್ಧವಾಗಿತ್ತು ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಹೇಳಿದ್ದಾರೆ.

ಸಂವಿಧಾನದ ಪೀಠಿಕೆ ಉದ್ಯಾನವನದ ಉದ್ಘಾಟನೆ ಮತ್ತು ಅಂಬೇಡ್ಕರ್ ಪ್ರತಿಮೆ ಅನಾವರಣ ಸಮಾರಂಭದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಒಂದೇ ಸಂವಿಧಾನದ ಅಡಿಯಲ್ಲಿ ಅಖಂಡ ಭಾರತದ ದೃಷ್ಟಿಕೋನದಿಂದ ಸುಪ್ರೀಂ ಕೋರ್ಟ್ ಸ್ಫೂರ್ತಿ ಪಡೆದಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸುವ ಮೂಲಕ ಕೇಂದ್ರ ಸರ್ಕಾರ ಉತ್ತಮ ನಿರ್ಧಾರ ಕೈಗೊಂಡಿದೆ ಎಂದಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸುವ ಕೇಂದ್ರದ ನಿರ್ಧಾರವನ್ನು ಸರ್ವಾನುಮತದಿಂದ ಎತ್ತಿಹಿಡಿದ ಅಂದಿನ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ನ್ಯಾಯಾಧೀಶರ ಪೀಠದಲ್ಲಿ ಬಿ.ಆರ್.ಗವಾಯಿ ಅವರು ಒಬ್ಬರಾಗಿದ್ದರು. ಒಂದು ದೇಶಕ್ಕೆ ಒಂದೇ ಸಂವಿಧಾನ ಇರುವುದು ಸೂಕ್ತ. ನಾವು ದೇಶವನ್ನು ಒಗ್ಗಟ್ಟಿನಿಂದ ಇರಿಸಲು ಬಯಸಿದರೆ, ನಮಗೆ ಒಂದೇ ಸಂವಿಧಾನ ಸಾಕು. ಸಂವಿಧಾನವು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವುದರ ಜತೆಗೆ ದೇಶವನ್ನು ಒಗ್ಗಟ್ಟಿನಿಂದ ಇಡುತ್ತದೆ ಎಂದಿದ್ದಾರೆ.

ನೆರೆಯ ರಾಷ್ಟ್ರಗಳ ಪರಿಸ್ಥಿತಿಯನ್ನು ನೋಡಿ. ಅದು ಪಾಕಿಸ್ತಾನ, ಬಾಂಗ್ಲಾದೇಶ ಅಥವಾ ಶ್ರೀಲಂಕಾ ಆಗಿರಬಹುದು. ನಮ್ಮ ದೇಶವು ಯುದ್ಧದಂತಹ ಸವಾಲುಗಳನ್ನು ಎದುರಿಸಿದಾಗಲೆಲ್ಲಾ ಒಗ್ಗಟ್ಟಿನಿಂದ ಉಳಿದಿದೆ ಎಂದು ಗವಾಯಿ ಹೇಳಿದ್ದಾರೆ.

ಶಿಷ್ಯವೇತನ ಆಧಾರಿತ ಪದವಿ ಕೋರ್ಸ್

ಉದ್ಯಮ ತಜ್ಞರಿಂದ ಪಡೆದ ಮಾಹಿತಿಯೊಂದಿಗೆ ವಿವಿ ಪಠ್ಯ ಶೀಘ್ರ ಪರಿಷ್ಕರಣೆ; ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್

ಬೆಂಗಳೂರು,ಜೂ.28–ರಾಜ್ಯ ಸರ್ಕಾರವು ಶಿಷ್ಯವೇತನ ಆಧಾರಿತ ಪದವಿ ಕೋರ್ಸ್‌ಗಳನ್ನು ಪರಿಚಯಿಸಲಿದೆ. ಉದ್ಯಮ ತಜ್ಞರಿಂದ ಪಡೆದ ಮಾಹಿತಿಯೊಂದಿಗೆ ವಿಶ್ವವಿದ್ಯಾಲಯದ ಪಠ್ಯಕ್ರಮವನ್ನು ಪರಿಷ್ಕರಿಸಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಜಾಗತಿಕ ಮಹಿಳಾ ಉದ್ಯಮಿಗಳ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಈ ಕ್ರಮಗಳು ಉನ್ನತ ಶಿಕ್ಷಣವನ್ನು ಉದ್ಯಮದ ಬೇಡಿಕೆಗಳೊಂದಿಗೆ ಜೋಡಿಸುವ ಮತ್ತು ವಿದ್ಯಾರ್ಥಿಗಳು ಇಂದಿನ ಉದ್ಯೋಗ ಮಾರುಕಟ್ಟೆಗೆ ಉತ್ತಮವಾಗಿ ಸಿದ್ಧರಾಗಿರುವುದನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿವೆ ಎಂದು ಹೇಳಿದರು.



ಕಳೆದ ವರ್ಷ ಅಪ್ರೆಂಟಿಸ್‌ಶಿಪ್‌ನೊಂದಿಗೆ ವಿಶಿಷ್ಟ ಪದವಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೂಲಕ ರಾಜ್ಯವು ಈ ದಿಕ್ಕಿನಲ್ಲಿ ಒಂದು ಹೆಜ್ಜೆ ಇಟ್ಟಿದೆ. ಲಾಜಿಸ್ಟಿಕ್ಸ್, ಚಿಲ್ಲರೆ ವ್ಯಾಪಾರ, ಇ–ಕಾಮರ್ಸ್, ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ಬಿಕಾಂನಂತಹ ಕೋರ್ಸ್‌ಗಳನ್ನು ಈ ಕಾರ್ಯಕ್ರಮದ ಅಡಿಯಲ್ಲಿ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ಐದನೇ ಮತ್ತು ಆರನೇ ಸೆಮಿಸ್ಟರ್‌ಗಳಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಒಳಗಾಗುತ್ತಾರೆ. ಅವರು ಪದವಿ ಕೋರ್ಸ್ ಮುಗಿಸುವ ಹೊತ್ತಿಗೆ ಉದ್ಯಮಕ್ಕೆ ಸಿದ್ಧರಾಗಿದ್ದಾರೆ ಎಂದು ಇದು ಖಚಿತಪಡಿಸುತ್ತದೆ ಎಂದು ಡಾ.ಎಂ.ಸಿ.ಸುಧಾಕರ್ ಹೇಳಿದರು.

ಸರ್ಕಾರವು ಈಗ ಈ ಅಪ್ರೆಂಟಿಸ್‌ಶಿಪ್ ಮಾದರಿ ಕಾರ್ಯಕ್ರಮವನ್ನು ವಿಸ್ತರಿಸುತ್ತಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಪಠ್ಯಕ್ರಮವನ್ನು ಮರುವಿನ್ಯಾಸಗೊಳಿಸಲು ಉದ್ಯಮ ಪಾಲುದಾರರೊಂದಿಗೆ ಸಹಕರಿಸುತ್ತಿದೆ, ಇದು ತಾಂತ್ರಿಕ ಬದಲಾವಣೆಗಳಿಗೆ ಹೆಚ್ಚು ಕ್ರಿಯಾತ್ಮಕ ಮತ್ತು ಸ್ಪಂದಿಸುವಂತೆ ಮಾಡುತ್ತದೆ ಎಂದರು. ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಕೈಗಾರಿಕಾ ಬೆಳವಣಿಗೆಯನ್ನು ಬೆಂಬಲಿಸಲು ಅನುಕೂಲಕರವಾಗಿಲ್ಲ ಎಂದು ಹೇಳುವ ಮೂಲಕ ಶಿಕ್ಷಣದ ವಿಧಾನದಲ್ಲಿ ವ್ಯವಸ್ಥಿತ ಬದಲಾವಣೆಯ ಅಗತ್ಯವನ್ನು ಒತ್ತಿ ಹೇಳಿದರು. ಕೌಶಲ ಮತ್ತು ಉದ್ಯಮಶೀಲತೆಯ ಮೇಲೆ ಹೆಚ್ಚು ಗಮನಹರಿಸುವ ಮೂಲಕ ನಾವು ಇದನ್ನು ಗಂಭೀರವಾಗಿ ಪರಿಹರಿಸುತ್ತಿದ್ದೇವೆ ಎಂದರು.

ಸಿದ್ದರಾಮಯ್ಯ ಇಲ್ಲದಿದ್ರೆ ರಾಜಕೀಯ ಬಿಡ್ತೀನಿ: ರಾಜಣ್ಣ

ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಆಗಬಹುದು

ತುಮಕೂರು ಜೂ.28– ಸಿದ್ಧರಾಮಯ್ಯ ಇರುವುದರಿಂದ ನಾನು ರಾಜಕಾರಣ ಮಾಡುತ್ತಿರುವುದು. ಅವರಿಲ್ಲದಿದ್ದರೆ ರಾಜಕೀಯ ಬಿಡುತ್ತೇನೆ ಎಂದು ಸಹಕಾರ ಸಚಿವ ಕೆಎನ್ ರಾಜಣ್ಣ ಹೇಳಿದ್ದಾರೆ.

ತುಮಕೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನನ್ನ ಪ್ರಕಾರ ಕಾಂಗ್ರೆಸ್‌ನಲ್ಲಿ ಹೈಕಮಾಂಡ್, ಕೆಪಿಸಿಸಿ ಅಧ್ಯಕ್ಷ ಹಾಗೂ ಸಿಎಂ ಮೂವರು ಪವರ್ ಸೆಂಟರ್‌ಗಳಿವೆ. ಸಿಎಂ ಬದಲಾವಣೆ ಅನ್ನೋದನ್ನು, ಕಾಲ ನಿರ್ಣಯ ಮಾಡಲಿದೆ. ಕೆಲ ಮಾಧ್ಯಮದವರು ರಾಜಣ್ಣನವರು ಸಿದ್ದರಾಮಯ್ಯನವರಿಂದ ದೂರವಾಗಿದ್ದಾರೆಂದು ಸುದ್ದಿ ಮಾಡಿದ್ದಾರೆ. ನಾನು ಯಾವತ್ತೂ ಸಿಎಂ ಸಿದ್ದರಾಮಯ್ಯರ ಜೊತೆ ಇದ್ದೇನೆ. ಇವತ್ತೂ, ನಾಳೆ, ಯಾವತ್ತೂ ನಾನು ಸಿದ್ದರಾಮಯ್ಯ ಬಣ ಎಂದರು.

ಆಗಸ್ಟ್–ಸೆಪ್ಟೆಂಬರ್ ಕ್ರಾಂತಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಾನು ಹೇಳಿದ ತಕ್ಷಣ ಬರೀ ಕಾಂಗ್ರೆಸ್‌ನಲ್ಲಿ ಮಾತ್ರ ಕ್ರಾಂತಿ ಆಗುತ್ತದೆ ಅಂದುಕೊಳ್ಳಬಾರದು. ಬಿಜೆಪಿಯಲ್ಲೂ ಕ್ರಾಂತಿ ಆಗುತ್ತಿದೆ. ಕೇಂದ್ರ ಸರ್ಕಾರದಲ್ಲೂ ಬದಲಾವಣೆ ನಿರೀಕ್ಷೆ ಮಾಡಬಹುದು. ಆರ್‌ಎಸ್‌ಎಸ್‌ನವರ ಸೆಟ್ ಆಫ್ ಪ್ರಿನ್ಸಿಪಲ್‌ನಂತೆ 75 ವರ್ಷದ ನಂತರ ಯಾವುದೇ ಹುದ್ದೆಯಲ್ಲಿ ಇರಲಿಕ್ಕಿಲ್ಲ. ಹಾಗಾಗಿಯೇ ಅಡ್ವಾಣಿಗೆ ಪ್ರಧಾನಿ ಸ್ಥಾನ ಸಿಕ್ಕಿಲ್ಲ. ಈಗ ಅದೇ ಪ್ರಿನ್ಸಿಪಲ್ ಮೋದಿಯವರಿಗೂ ಅನ್ವಯಿಸುತ್ತದೆ. ಅದು ಒಂದು ಬದಲಾವಣೆ ಕ್ರಾಂತಿ ಅಲ್ಲವೇ, ಅದನ್ನು ಯಾಕೆ ನೀವು ಊಹೆ ಮಾಡಲ್ಲ. ಬರೀ ಕರ್ನಾಟಕದ ಕಾಂಗ್ರೆಸ್ ಪಾರ್ಟಿಯನ್ನು ಯಾಕೆ ಊಹೆ ಮಾಡುತ್ತೀರಿ. ಸಿಎಂ ಬದಲಾಯಿಸುತ್ತಾರೆ, ಸಂಪುಟ ವಿಸ್ತರಣೆ, ಅಧ್ಯಕ್ಷ ಬದಲಾವಣೆ, ಬರೀ ಇದರ ಬಗ್ಗೆ ಯಾಕೆ ಚರ್ಚೆ ಮಾಡುತ್ತೀರಾ. ರಾಜಕೀಯ ನಿಂತ ನೀರಲ್ಲ, ಅದು ಬದಲಾಗುತ್ತಿರುತ್ತದೆ. ರಾಜಕೀಯ ಸಂದರ್ಭಕ್ಕೆ ಅನುಗುಣವಾಗಿ ಬದಲಾಗುತ್ತದೆ ಎಂದರು.



ಕೆ.ಎನ್.ರಾಜಣ್ಣ

ಸಚಿವ ಸಂಪುಟ ಪುನಾರಚನೆ ವಿಚಾರವಾಗಿ ಮಾತನಾಡಿ, ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಆಗುವುದು ಬಿಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಬದಲಾವಣೆಯಂತೂ ಆಗುತ್ತದೆ. ಆದರೆ ಯಾವಾಗ ಆಗುತ್ತದೆ ಎಂಬುದು ಗೊತ್ತಿಲ್ಲ. ಸತೀಶ್ ಜಾರಕಿಹೊಳಿಯವರು ಕೆಪಿಸಿಸಿ ಅಧ್ಯಕ್ಷರಾಗಬಹುದು ಅಂದುಕೊಂಡಿದ್ದೇನೆ. ಅವರೇ ಆಗಬಹುದು. ಆದರೇ ಎಲ್ಲವನ್ನೂ ಕಾಲ ತೀರ್ಮಾನ ಮಾಡಲಿದೆ ಎಂದರು.

ಸುರ್ಜೇವಾಲ ನನಗೇನು ತಾಕೀತು ಮಾಡಲು ಸಾಧ್ಯ?: ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಜೂ.30ರಂದು ರಾಜ್ಯಕ್ಕೆ ಬರುತ್ತಿದ್ದು, ಅವರು ನನಗೇನು ತಾಕೀತು ಮಾಡುತ್ತಾರೆ ಎಂದು ಸಚಿವ ಕೆ.ಎನ್.ರಾಜಣ್ಣ ಪ್ರಶ್ನಿಸಿದರು. ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ. ಡಿ.ಕೆ.ಶಿವಕುಮಾರ್ ಅವರನ್ನು ಪ್ರಧಾನಿ, ಇಲ್ಲವೆ ಮುಖ್ಯಮಂತ್ರಿಯನ್ನೇ ಮಾಡಲಿ. ನನ್ನದೇನೂ ಅಭ್ಯಂತರವಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಸತೀಶ್ ಜಾರಕಿಹೊಳಿ ಅಧ್ಯಕ್ಷರಾಗಬಹುದು ಅಂದುಕೊಂಡಿದ್ದೇನೆ. ಎಲ್ಲವನ್ನೂ ಕಾಲವೇ ತೀರ್ಮಾನ ಮಾಡಲಿದೆ ಎಂದು ಹೇಳಿದರು.

ನಾನು ಹೇಳಿದ ತಕ್ಷಣ ಕಾಂಗ್ರೆಸ್‌ನಲ್ಲಿ ಮಾತ್ರ ಕ್ರಾಂತಿ ನಡೆಯುತ್ತದೆ ಅಂದುಕೊಳ್ಳಬಾರದು. ಬಿಜೆಪಿಯಲ್ಲೂ ಕ್ರಾಂತಿ ಆಗಬಹುದು. ಪ್ರಧಾನಿ ಮೋದಿ ಅವರೇ ಬದಲಾಗಬಹುದು ಎಂದು ಸಮರ್ಥಿಸಿದರು.

ಮೈಸೂರು ರೈಲು ನಿಲ್ದಾಣದ ಫುಟ್ ಓವರ್ ಬ್ರಿಡ್ಜ್ ಮೆಟ್ಟಿಲು ಉನ್ನತೀಕರಣ

2 ತಿಂಗಳಲ್ಲಿ ಕಾಮಗಾರಿ ಪೂರ್ಣ, ಪ್ರಯಾಣಿಕರಿಗೆ ತಾತ್ಕಾಲಿಕ ಬದಲಿ ಮಾರ್ಗ ವ್ಯವಸ್ಥೆ



ಪ್ಲಾಟ್‌ಫಾರಂಗಳಿಗೆ ಸಂಪರ್ಕ ಕಲ್ಪಿಸುವ ಮೈಸೂರು ರೈಲು ನಿಲ್ದಾಣದ ಫುಟ್ ಓವರ್ ಬ್ರಿಡ್ಜ್ ಮೆಟ್ಟಿಲುಗಳ ನವೀಕರಣ ಕಾಮಗಾರಿಯನ್ನು ಅಧಿಕಾರಿಗಳು ಪರಿಶೀಲಿಸಿದರು.

ಮೈಸೂರು, ಜೂ.28(ಆರ್‌ಕೆ)– ಪ್ಲಾಟ್‌ಫಾರಂಗಳಿಗೆ ಸಂಪರ್ಕ ಕಲ್ಪಿಸುವ ಮೈಸೂರು ರೈಲು ನಿಲ್ದಾಣದ ಫುಟ್ ಓವರ್ ಬ್ರಿಡ್ಜ್ ಮೆಟ್ಟಿಲುಗಳ ನವೀಕರಣ ಕಾಮಗಾರಿ ಆರಂಭವಾಗಿದೆ.

ನೈರುತ್ಯ ರೈಲ್ವೇ ಮೈಸೂರು ವಿಭಾಗವು ಪ್ರಯಾಣಿಕರ ಸುರಕ್ಷತೆ ಮತ್ತು ಅನುಕೂಲ ಮಾಡಿಕೊಟ್ಟು ಮೂಲಸೌಕರ್ಯ ಕಲ್ಪಿಸಲು ಮುಂದಾಗಿದ್ದು, ಅದರ ಭಾಗವಾಗಿ ಮೈಸೂರು ರೈಲು ನಿಲ್ದಾಣದ 2 ಮತ್ತು 3ನೇ ಪ್ಲಾಟ್‌ಫಾರಂಗೆ ಹೋಗಲು ಫುಟ್ ಓವರ್ ಬ್ರಿಡ್ಜ್‌ಗಳ ಮೆಟ್ಟಿಲುಗಳನ್ನು ಉನ್ನತೀಕರಿಸುವ ಕಾಮಗಾರಿಯನ್ನು ಆರಂಭಿಸಿದೆ. ಹಲವು ದಶಕಗಳ ಹಿಂದೆ ನಿರ್ಮಿಸಿರುವ ಮೆಟ್ಟಿಲುಗಳು ತೀರಾ ಹಳೆಯದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದರಿಂದ ಪ್ರಯಾಣಿಕರ ಸುರಕ್ಷತೆ ಹಿನ್ನೆಲೆಯಲ್ಲಿ ಅವುಗಳನ್ನು ಸದೃಢಗೊಳಿಸಿ ಆಧುನೀಕರಣಗೊಳಿಸಲು ನೈರುತ್ಯ ರೈಲ್ವೆ ಮುಂದಾಗಿದ್ದು, 60 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರನಿಗೆ ಸೂಚಿಸಿದೆ.

ಈ ವೇಳೆ ಪ್ರಯಾಣಿಕರಿಗೆ ಬದಲಿಯಾಗಿ ತಾತ್ಕಾಲಿಕ ಮಾರ್ಗ ವ್ಯವಸ್ಥೆ ಮಾಡಲಾಗಿದ್ದು, ಪ್ರಯಾಣಿಕರು ಲಿಫ್ಟ್ ಮತ್ತು ಸಬ್ ವೇಗಳನ್ನು ಬಳಸಿಕೊಳ್ಳುವಂತೆ ಕೋರಲಾಗಿದೆ. ಅದಕ್ಕಾಗಿ ಸ್ಥಳದಲ್ಲಿ ಅಗತ್ಯ ಸೂಚನಾ ಮತ್ತು ಮಾರ್ಗಸೂಚಿ ಫಲಕಗಳನ್ನು ಹಾಕಲಾಗಿದೆಯಲ್ಲದೆ, ನಿರಂತರವಾಗಿ ಧ್ವನಿವರ್ಧಕಗಳ ಮೂಲಕ ಪ್ರಕಟ ಮಾಡಲಾಗುವುದು ಹಾಗೂ ಸ್ಥಳದಲ್ಲಿ ಸಿಬ್ಬಂದಿ ಹಾಜರಿದ್ದು ಗೈಡ್ ಮಾಡಲಿದ್ದಾರೆ.

ಯೋಗಾತ್ಮ ಮೈಸೂರಿನ ಶ್ರೀಹರಿ ಅವರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರಿನ ಯೋಗಾತ್ಮ ಹಾಗೂ ಜಿಎಸ್‌ಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕಾನಾಥ, ಪ್ರಗತಿಪರ ರೈತ ಪುಟ್ಟಯ್ಯ ಸೇರಿದಂತೆ ಹಲವು ಗಣ್ಯರಿಗೆ ಕೆಂಪೇಗೌಡ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಮೈಸೂರು, ಜೂ.28(ಆರ್‌ಕೆ)– ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮೈಸೂರಿನ ಯೋಗಾತ್ಮ ಹಾಗೂ ಜಿಎಸ್‌ಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ ದ್ವಾರಕಾನಾಥ, ಪ್ರಗತಿಪರ ರೈತ ಪುಟ್ಟಯ್ಯ ಸೇರಿದಂತೆ ಹಲವು ಗಣ್ಯರಿಗೆ ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದಿಂದ ಏರ್ಪಡಿಸಿದ್ದ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ.ಕೃಷ್ಣೇಗೌಡ ಅಧ್ಯಕ್ಷತೆ ಹಾಗೂ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ ನಾರಾಯಣ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ವಿಪಕ್ಷ ನಾಯಕ ಆರ್.ಅಶೋಕ್, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ, ಸ್ಪಟಿಕ ಮಠದ ಶ್ರೀ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಸಿಎಂ ಸದಾನಂದಗೌಡ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ವಿಶ್ವ ಪರಿಸರ ದಿನಾಚರಣೆ



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರು ಹಳೇ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಇರುವ ಉದ್ಯಾನವನದಲ್ಲಿ ಪರಿಸರ ಉಳಿವಿಗಾಗಿ... ಮುಂದಿನ ಪೀಳಿಗೆಗಾಗಿ ಅರಣ್ಯ ಇಲಾಖೆ, ಮೈಸೂರು ಮಹಾನಗರಪಾಲಿಕೆಯ 3ನೇ ವಲಯ ಕಚೇರಿ ಹಾಗೂ ರಘುಲಾಲ್ ಮೆಡಿಕಲ್‌ನ ರಾಘವನ್ ಸಹಕಾರದೊಂದಿಗೆ 33 ಸಸಿಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಪರಿಸರವಾದಿ ಭಾನುಮೋಹನ್, ಕುಮಾರ ನಿಸರ್ಗ, ಅದರ್ಶ್ ಅರಸ್, ಎಂಜಿಪಿ ಸಂಚಾಲಕರಾದ ಭಾನು ಪ್ರಶಾಂತ್, ವಿಶ್ವನಾಥ, ಕ್ಲಿನ್ ಮೈಸೂರಿನ ಲೀಲಾ ವೆಂಕಟೇಶ್, ದಯಾನಂದ ಸಾಗರ್, ನಿವೃತ್ತ ಅಧಿಕಾರಿ ರಾಜು, ಆರ್‌ಟಿಐ ಕಾರ್ಯಕರ್ತ ಗಂಗರಾಜು, ಕುಮಾರ್, ಕೆಆರ್‌ಎಸ್ ಪಕ್ಷದ ನಾಗೇಂದ್ರ, ಆನಂದ್ ಭಾಗವಹಿಸಿದ್ದರು.

ನಾಳೆ ಕಾವೇರಿಗೆ ಸಿಎಂ ಬಾಗಿನ

ಮೈಸೂರು, ಜೂ.28(ಬಿಎಲ್‌ಯು)–



ಮುಖ್ಯಮಂತ್ರಿ ಸಿದ್ದರಾಮಯ್ಯ ಜೂ.30 ರಂದು ಕೃಷ್ಣರಾಜಸಾಗರ ಜಲಾಶಯದಲ್ಲಿ ತುಂಬಿ ತುಳುಕುತ್ತಿರುವ ಕಾವೇರಿ ಮಾತೆಗೆ ಬಾಗಿನ ಅರ್ಪಿಸಲಿದ್ದಾರೆ. ಅಂದು ಬೆಳಗ್ಗೆ 9.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ 9.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಮೈಸೂರಿನ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿ ಅಲ್ಲಿಂದ ಸಚಿವರು, ಶಾಸಕರ ಜೊತೆ ಬಸ್ಸಿನಲ್ಲಿ ಕೆಆರ್‌ಎಸ್‌ಗೆ ತೆರಳುವರು. ಕೃಷ್ಣರಾಜ ಸಾಗರದಲ್ಲಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಲಿದ್ದಾರೆ. ನಂತರ ಅಲ್ಲೇ ಇರುವ ಕಾವೇರಿ ಪ್ರತಿಮೆ ಬಳಿ ಸಾರ್ವಜನಿಕ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಈ ಕಾರ್ಯಕ್ರಮದ ನಂತರ ಮಧ್ಯಾಹ್ನ 3.30 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿ ಅಲ್ಲಿಂದ ಬೆಂಗಳೂರಿಗೆ ತೆರಳುವರು.

ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ...



ಜನತಾನಗರ ಒಕ್ಕಲಿಗರ ಸಂಘದ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸುರೇಶ್, ಕಾರ್ಯದರ್ಶಿ ಲಕ್ಕೇಗೌಡ್ರು, ಖಜಾಂಚಿ ಮಂಜು, ನಿರ್ದೇಶಕರಾದ ಟೆಂಟ್ ಕುಮಾರ್, ಸೊಸೈಟಿ ಕುಮಾರ್, ಗವಿಸಿದ್ದು, ಕಲಾ, ಮಂಜು, ಮಹೇಶ್, ನಾರಾಯಣ್, ಸೈಕಲ್‌ಶಾಪ್ ಶಿವಣ್ಣ, ವೆಂಕಟೇಶ್, ಮಂಚೇಗೌಡ ಇನ್ನಿತರರಿದ್ದರು.

ಕೊಡವ ಹಾಕಿ ಪ್ರೀಮಿಯರ್ ಲೀಗ್

ಕೂರ್ಗ್ ಯುನೈಟೆಡ್ ಶುಭಾರಂಭ



ಕೊಡವ ಸಮಾಜ ಯುವ ವಿಭಾಗ ಮೈಸೂರು, ಕೊಡವ ಸಮಾಜ ಮೈಸೂರು ಮತ್ತು ಹಾಕಿ ಮೈಸೂರು ಸಹಯೋಗದಲ್ಲಿ ಮೈಸೂರಿನ ಚಾಮುಂಡಿವಿಹಾರ್ ಹಾಕಿ ಮೈದಾನದಲ್ಲಿ ನಡೆಯುತ್ತಿರುವ ಕೊಡವ ಹಾಕಿ ಪ್ರೀಮಿಯರ್ ಲೀಗ್‌ನಲ್ಲಿ ಕ್ರೀಡಾಪಟುಗಳು ತಂಡದ ಗೆಲುವಿಗಾಗಿ ಸೆಣಸಾಟ ನಡೆಸುತ್ತಿರುವುದು.

ಮೈಸೂರು, ಜೂ.28(ಜಿಎ)–ಕೊಡವ ಸಮಾಜ ಯುವ ವಿಭಾಗ, ಮೈಸೂರು, ಕೊಡವ ಸಮಾಜ ಮೈಸೂರು ಮತ್ತು ಹಾಕಿ ಮೈಸೂರು ಸಹಯೋಗದಲ್ಲಿ ಮೈಸೂರಿನ ಚಾಮುಂಡಿವಿಹಾರ್ ಹಾಕಿ ಮೈದಾನದಲ್ಲಿ ನಡೆಯುತ್ತಿರುವ ಕೊಡವ ಹಾಕಿ ಪ್ರೀಮಿಯರ್ ಲೀಗ್ (ಕೆಎಚ್‌ಪಿಎಲ್)ನಲ್ಲಿ ಎರಡನೇ ದಿನದ ಮೊದಲ ಪಂದ್ಯದಲ್ಲಿ ಕೂರ್ಗ್ ಯುನೈಟೆಡ್ ಶುಭಾರಂಭ ಮಾಡಿತು.

ಇಂದು ನಡೆದ ಮೊದಲ ಪಂದ್ಯದಲ್ಲಿ ಕೂರ್ಗ್ ಯುನೈಟೆಡ್ ಮತ್ತು ಎಂಟಿಬಿ ರಾಯಲ್ ವಿರುದ್ಧದ ಪಂದ್ಯದಲ್ಲಿ ಕೂರ್ಗ್ ಯುನೈಟೆಡ್ ತಂಡವು 2 ಗೋಲು ಗಳಿಸುವ ಮೂಲಕ ಗೆಲುವು ಪಡೆದುಕೊಂಡಿತು. ನಂತರ ಕಾಕೋಟ್ ಸ್ಟ್ರೈಕರ್ಸ್ ಮತ್ತು ಕೊಡವ ವಾರಿಯರ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಕಾಕೋಟ್ ಸ್ಟ್ರೈಕರ್ಸ್ 1 ಗೋಲು ದಾಖಲಿಸಿತು. ಆದರೆ ಕೊಡವ ವಾರಿಯರ್ಸ್ 2 ಗೋಲು ಗಳಿಸುವ ಮೂಲಕ ಗೆಲುವು ಪಡೆದುಕೊಂಡಿದೆ.

3ನೇ ಪಂದ್ಯದಲ್ಲಿ ಕೂರ್ಗ್ ಟೈಟಾನ್ಸ್ ತಂಡವು ಟೀಮ್ ಕೊಡವ ಟ್ರೈಬ್ ವಿರುದ್ಧ 2 ಗೋಲು ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು. ನಂತರ ಕನೆಕ್ಟಿಂಗ್ ಕೊಡವಸ್ ತಂಡದ ವಿರುದ್ಧ ಅಂಜಿಗೇರಿ ನಾಡ್ 1 ಗೋಲು ಗಳಿಸುವ ಮೂಲಕ ಜಯ ತನ್ನದಾಗಿಸಿಕೊಂಡಿತು. ಪಾಲೆ ತಾಲೂಕು ತಂಡವು ಎಂಟಿಬಿ ರಾಯಲ್ 1 ಗೋಲು ಬಾರಿಸುವ ಮೂಲಕ ಗೆಲುವು ಗಳಿಸಿತ್ತು. ಕೊಡವ ವಾರಿಯರ್ಸ್ ಮತ್ತು ಸೌತ್ ಸೈಡ್ ರೇಂಜರ್ಸ್ ನಡುವಿನ ಪಂದ್ಯದಲ್ಲಿ ಕೊಡವ ವಾರಿಯರ್ಸ್ 3 ಗೋಲು ಬಾರಿಸಿ ಭರ್ಜರಿ ಜಯಗಳಿತ್ತು. ಕೂರ್ಗ್ ಯುನೈಟೆಡ್ ಮತ್ತು ಕೊಡವ ಟ್ರೈಬ್ ನಡುವಿನ ಪಂದ್ಯದಲ್ಲಿ ಕೊಡವ ಟ್ರೈಬ್ ತಂಡವು 2 ಗೋಲು ಬಾರಿಸಿದರೆ, ಕೂರ್ಗ್ ಯುನೈಟೆಡ್ ದಾಂಡಿಗರು 3 ಗೋಲು ಗಳಿಸುವ ಮೂಲಕ ರೋಚಕ ಪ್ರದರ್ಶನ ನೀಡಿದರು.

ಇಂದು ಫೈನಲ್ ಪಂದ್ಯ

ಲೀಗ್ ಪಂದ್ಯಾವಳಿಯಲ್ಲಿ ಕೂರ್ಗ್ ಯುನೈಟೆಡ್, ಕೊಡವ ವಾರಿಯರ್ಸ್, ಪಾಲೆ ತಾಲೂಕು, ಸೌತ್ ಸೈಡ್ ರೇಂಜರ್ಸ್, ಟೀಮ್ ಕೊಡವ ಟ್ರೈಬ್, ಕನೆಕ್ಟಿಂಗ್ ಕೊಡವಸ್, ಅಂಜಿಗೇರಿ ನಾಡ್, ಕೂರ್ಗ್ ಟೈಟಾನ್ಸ್, ಕಾಕೋಟ್ ಸ್ಟ್ರೈಕರ್ಸ್ ಮತ್ತು ಎಂಟಿಬಿ ರಾಯಲ್ಸ್ ಸೇರಿದಂತೆ ಒಟ್ಟು 10 ತಂಡಗಳು ಉತ್ತಮ ಪ್ರದರ್ಶನ ನೀಡಿದ್ದು, ಇಂದು ಸೆಮಿಫೈನಲ್ ಪಂದ್ಯಾವಳಿಗಳು ನಡೆಯಲಿವೆ. ನಂತರ ಕೆಎಚ್‌ಪಿಎಲ್ ಕಪ್‌ಗಾಗಿ ಫೈನಲ್ ಪಂದ್ಯಾವಳಿಯೂ ನಡೆಯಲಿದೆ.

ಕಾಕೋಟ್ ಸ್ಟ್ರೈಕರ್ಸ್ ಮತ್ತು ಅಂಜಿಗೇರಿ ನಾಡ್ ನಡುವಿನ ಪಂದ್ಯವು ತಲಾ 1 ಗೋಲು ಬಾರಿಸಿ ಟೈ ಆಯಿತು. ನಂತರ ಪೆನಾಲ್ಟಿ ಶೂಟ್ ಮೂಲಕ ಅಂಜಿಗೇರಿ ನಾಡ್ ಗೆಲುವು ತನ್ನದಾಗಿಸಿಕೊಂಡಿತ್ತು. ಮುಂದಿನ ಪಂದ್ಯದಲ್ಲೂ ಕೂರ್ಗ್ ಟೈಟಾನ್ಸ್ ನಡುವೇ ಪಾಲೆ ತಾಲೂಕು 1 ಗೋಲು ಟೈ ಆಗಿ ಪೆನಾಲ್ಟಿ ಶೂಟ್‌ನಿಂದ ಪಾಲೆ ತಾಲೂಕು ಜಯಗಳಿಸಿತು. ಅಂತಿಮ ಲೀಗ್ ಪಂದ್ಯದಲ್ಲಿ ಮುಖಾಮುಖಿಯಾದ ಕನೆಕ್ಟಿಂಗ್ ಕೊಡವಸ್ ವಿರುದ್ಧ ಸೌತ್ ಸೈಡ್ ರೇಂಜರ್ಸ್ ಗೆಲುವು ಕಂಡಿತು.

ಬಾಹ್ಯಾಕಾಶ ನಿಲ್ದಾಣದಲ್ಲಿರುವ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಜೊತೆ ಪ್ರಧಾನಿ ಮೋದಿ ಮಾತುಕತೆ

ನವದೆಹಲಿ, ಜೂ. 28– ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ (ಐಎಸ್‌ಎಸ್) ಗಗನಯಾತ್ರಿ ಶುಭಾಂಶು ಶುಕ್ಲಾ ಅವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಧಾನಿ ನರೇಂದ್ರ ಮೋದಿ ಸಂವಾದ ನಡೆಸಿದ್ದಾರೆ.

ಜೂ.25ರಂದು ಆಕ್ಸಿಯಮ್–4 ಕಾರ್ಯಾಚರಣೆಯ ಭಾಗವಾಗಿ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಇತರ ಮೂವರು ಗಗನಯಾತ್ರಿಗಳ ಜೊತೆ ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಡ್ರ್ಯಾಗನ್ ಕ್ಯಾಪ್ಸುಲ್‌ನಲ್ಲಿ ಐಎಸ್‌ಎಸ್‌ಗೆ ಹಾರಿದ್ದರು. ಈ ಮೂಲಕ 40 ವರ್ಷಗಳ ನಂತರ ಬಾಹ್ಯಾಕಾಶಕ್ಕೆ ಹಾರಿದ ಮೊದಲ ಭಾರತೀಯ ಗಗನಯಾತ್ರಿಯೆನಿಸಿಕೊಂಡ ಶುಭಾಂಶು ಶುಕ್ಲಾ ಇತಿಹಾಸ ಸೃಷ್ಟಿಸಿದ್ದರು.

ಪ್ರಧಾನ ಮಂತ್ರಿ ಕಚೇರಿಯು ತನ್ನ ಅಧಿಕೃತ ಎಕ್ಸ್ ಹ್ಯಾಂಡಲ್‌ನಲ್ಲಿ, ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿರುವ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಹನ ನಡೆಸಿದರು ಎಂದು ಅವರಿಬ್ಬರ ಸಂವಾದದ ಫೋಟೋವನ್ನು ಪೋಸ್ಟ್ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಕೂಡ ಶುಭಾಂಶು ಅವರ ಜೊತೆಗಿನ ಸಂವಾದದ ವಿಡಿಯೋ ಶೇರ್ ಮಾಡಿಕೊಂಡಿದ್ದಾರೆ.



ಆಕ್ಸಿಯಮ್–4ರ ಯಶಸ್ವಿ ಉಡಾವಣೆಯ ನಂತರ ಪ್ರಧಾನಿ ಮೋದಿ ಅವರು ಈ ಮಿಷನ್ ಪೈಲಟ್ ಶುಭಾಂಶು ಶುಕ್ಲಾ ಮತ್ತು ಇತರ ಸಿಬ್ಬಂದಿ ಸದಸ್ಯರಾದ ಮಿಷನ್ ಕಮಾಂಡರ್ ಪೆಗ್ಗಿ ವಿಟ್ಸನ್ ಮತ್ತು ಮಿಷನ್ ತಜ್ಞರಾದ ಪೋಲೆಂಡ್‌ನ ಸ್ಲಾವೋಸ್ಜ್ ಉಜ್ನಾನ್ಸ್ಕಿ–ವಿಸ್ನಿವ್ಸ್ಕಿ ಮತ್ತು ಹಂಗೇರಿಯ ಟಿಬೋರ್ ಕಪು ಅವರನ್ನು ಅಭಿನಂದಿಸಿದ್ದರು. ಐಎಸ್‌ಎಸ್‌ಗೆ ಹಾರಿದ ಮೊದಲ ಭಾರತೀಯ ಗಗನಯಾತ್ರಿಯಾಗಲು ಹೊರಟಿದ್ದ ಶುಭಾಂಶು ಶುಕ್ಲಾ ಅವರು 1.4 ಬಿಲಿಯನ್ ಭಾರತೀಯರ ಆಶಯಗಳು, ಭರವಸೆಗಳು ಮತ್ತು ಆಕಾಂಕ್ಷೆಗಳನ್ನು ತಮ್ಮೊಂದಿಗೆ ಕೊಂಡೊಯ್ದಿದ್ದಾರೆ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಮೋದಿ ಹೇಳಿದ್ದೇನು: ನೀವು ಭೂಮಿಯನ್ನು ಬಿಟ್ಟು ಬಾಹ್ಯಾಕಾಶದಲ್ಲಿದ್ದರೂ ನಾವೆಷ್ಟು ಭೂಮಿ ತೂಕದವರು (ಡೌನ್ ಟು ಅರ್ಥ್) ಎಂಬುದನ್ನು ಜನ ಗಮನಿಸುತ್ತಿದ್ದಾರೆ. ನೀವು ಜನರ ಹೃದಯಕ್ಕೆ ಹತ್ತಿರದಲ್ಲಿದ್ದೀರಿ. 140 ಕೋಟಿ ಭಾರತೀಯರ ಭಾವನೆಗಳು ತಮ್ಮೊಂದಿಗಿವೆ. ಬಾಹ್ಯಾಕಾಶದಲ್ಲಿ ಭಾರತದ ಧ್ವಜ ಹಾರಿಸಿದ್ದಕ್ಕೆ ಹೃತ್ಪೂರ್ವಕ ಅಭಿನಂದನೆಗಳು ಎಂದ ಮೋದಿ ಶುಭಾಂಶು ಶುಕ್ಲಾ ಅವರ ಜೊತೆ ಹೋಗಿದ್ದ ಇತರರ ಆರೋಗ್ಯವನ್ನೂ ವಿಚಾರಿಸಿದರು.

ಇದಾದ ನಂತರ ತಮಾಷೆಯಾಗಿ, ಕ್ಯಾರೆಟ್ ಹಲ್ವಾ ತೆಗೆದುಕೊಂಡು ಹೋಗಿದ್ದೀರಾ? ಅದನ್ನು ಬೇರೆಯವರಿಗೂ ಕೊಟ್ಟಿರಾ? ಎಂದು ಮೋದಿ ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ನಾನು ನಿಜವಾಗಿಯೂ ಕ್ಯಾರೆಟ್ ಹಲ್ವಾ, ಹೆಸರುಬೇಳೆ ಹಲ್ವಾ, ಮಾವಿನ ರಸ ತೆಗೆದುಕೊಂಡು ಬಂದಿದ್ದೆ. ನಮ್ಮ ದೇಶದ ಪಾಕಪದ್ಧತಿಯ ಬಗ್ಗೆ ಬೇರೆ ದೇಶದವರಿಗೂ ತಿಳಿಸಬೇಕೆಂದು ಇಲ್ಲಿದ್ದ ಬೇರೆ ದೇಶಿಗರಿಗೂ ಕೊಟ್ಟೆ, ಎಲ್ಲರೂ ಕೂತು ಹಲ್ವಾ ತಿಂದೆವು. ಅವರಿಗೆ ತುಂಬ ಇಷ್ಟವಾಯಿತು ಎಂದಿದ್ದಾರೆ.

ನಾಲ್ವಡಿಯವರು ವಿದೇಶಕ್ಕೆ ಹೋಗಿಬಂದರೆ ಅಲ್ಲಿನ ಅಭಿವೃದ್ಧಿ ಮಾದರಿಯನ್ನ ತಮ್ಮ ಸಂಸ್ಥಾನದಲ್ಲಿ ಸಾಕಾರಗೊಳಿಸುತ್ತಿದ್ದರು

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವದಲ್ಲಿ ಪ್ರಾಧ್ಯಾಪಕ ಡಾ.ಪುರುಷೋತ್ತಮ್ ಪ್ರಶಂಸೆ



ಮೈಸೂರಿನ ಸುಬ್ಬರಾಯನಕೆರೆ ಸಭಾಂಗಣದಲ್ಲಿ ಶನಿವಾರ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.28(ಬಿಎಲ್‌ಯು)– ನಾಲ್ವಡಿ ಕೃಷ್ಣರಾಜ ಒಡೆಯರ್, ವಿದೇಶಕ್ಕೆ ಹೋಗಿಬಂದರೆ ಅಲ್ಲಿನ ಆಧುನಿಕತೆಯ ಅಭಿವೃದ್ಧಿಯನ್ನು ತಮ್ಮ ಸಂಸ್ಥಾನದಲ್ಲೂ ಸಾಕಾರಗೊಳಿಸುತ್ತಿದ್ದರು ಎಂದು ಕನ್ನಡ ಪ್ರಾಧ್ಯಾಪಕ ಡಾ.ಪುರುಷೋತ್ತಮ್ ಹೇಳಿದರು.

ನಗರದ ಸುಬ್ಬರಾಯನಕೆರೆ ಸಭಾಂಗಣದಲ್ಲಿ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು ನಾಲ್ವಡಿ ಒಡೆಯರ್ ಅವರ ನೀಡಿದ ಕೊಡುಗೆ ಸ್ಮರಣೀಯ. ನೂರಾರು ವರ್ಷವಾದರೂ ಅವರು ಅನುಷ್ಠಾನಗೊಳಿಸಿದ ಯೋಜನೆಗಳು ಜನರಿಗೆ ಅನುಕೂಲಕಾರಿಯಾಗಿವೆ ಎಂದು ಹೇಳಿದರು.

ಶೋಷಿತ ಮತ್ತು ಹಿಂದುಳಿದ ವರ್ಗದವರನ್ನು ಸಮಾನರಾಗಿ ಕಾಣುತ್ತಿದ್ದ ನಾಲ್ವಡಿ ಅವರು, ಮಹಿಳೆಯರ ಶಿಕ್ಷಣಕ್ಕೂ ಒತ್ತು ನೀಡಿ ಅವರಿಗಾಗಿಯೇ ಪ್ರತ್ಯೇಕ ಶಾಲಾ–ಕಾಲೇಜು ತೆರೆದರು ಎಂದರು. ಟಿಬಿ ಹಾಗೂ ಇತರೆ ರೋಗದಿಂದ ತಮ್ಮ ಕುಟುಂಬಸ್ಥರು ಸಾವನ್ನಪ್ಪಿದಾಗ ನನ್ನ ರಾಜ್ಯದ ಇತರರು ಈ ಮಾರಕ ರೋಗದ ಬಾಧೆಗೆ ಒಳಗಾಗಬಾರದೆಂದು ಟಿ.ಬಿ.ಆಸ್ಪತ್ರೆ ಮತ್ತು ಕೆ.ಆರ್.ಆಸ್ಪತ್ರೆ ನಿರ್ಮಾಣ ಮಾಡಿದರು ಎಂದು ವಿವರಿಸಿದರು.

ಹೊರದೇಶಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿ ಕಂಡಂತಹ ಆಧುನಿಕತೆಯ ಅಭಿವೃದ್ಧಿಯ ಪರಿಕಲ್ಪನೆ ಇಟ್ಟುಕೊಂಡು ತಮ್ಮ ಸಂಸ್ಥಾನದಲ್ಲಿಯೂ ಅದನ್ನು ಅನುಷ್ಠಾನ ಮಾಡುತ್ತಿದ್ದರು ಎಂದು ಡಾ.ಪುರುಷೋತ್ತಮ್ ಹೇಳಿದರು.

ಡಾ. ಸಿ.ರೇಣುಕಾಂಬ ಮಾತನಾಡಿ, ನಾಲ್ವಡಿ ಅವರು ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಿ ದೇವದಾಸಿ ಪದ್ಧತಿ ನಿರ್ಮೂಲನೆ ಮಾಡಿದರು. ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಲವು ಯೋಜನೆ ಜಾರಿಗೊಳಿಸುವ ಮೂಲಕ ಪ್ರಜೆಗಳಿಗೆ ದಾರಿದೀಪವಾದರು ಎಂದು ಹೇಳಿದರು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರೆ ರವಿ ನಿರೂಪಣೆ ಮಾಡಿದರು. ಸಿದ್ದೇಗೌಡ, ಗೋಪಿ, ಗುರುಬಸಪ್ಪ, ಭವಾನಿ, ಸ್ವಾಮಿ, ಮಾದಪ್ಪ, ಶಿವೇಗೌಡ, ಪೂರ್ಣಿಮಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ದೇಶ - ವಿದೇಶ

ಭಾರತ ಧ್ವಂಸಗೊಳಿಸಿದ ಪಾಕ್ ಉಗ್ರರ ಕ್ಯಾಂಪ್, ಲಾಂಚ್ ಪ್ಯಾಡ್ ಮರು ನಿರ್ಮಾಣ

ಇಸ್ಲಾಮಾಬಾದ್: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ



ಪ್ರತಿಕ್ರಿಯೆಯಾಗಿ ಮೇ ತಿಂಗಳಲ್ಲಿ ನಡೆದ 'ಆಪರೇಷನ್ ಸಿಂಧೂರ್' ವೇಳೆ ಭಾರತೀಯ ಸೇನೆಯು ಧ್ವಂಸಗೊಳಿಸಿದ ಭಯೋತ್ಪಾದಕ ಲಾಂಚ್‌ಪ್ಯಾಡ್‌ಗಳು ಮತ್ತು ತರಬೇತಿ ಶಿಬಿರಗಳನ್ನು ಪಾಕಿಸ್ತಾನ ಮರು ನಿರ್ಮಾಣ ಮಾಡುತ್ತಿದೆ ಎಂದು ಗುಪ್ತಚರ ಮೂಲಗಳು ತಿಳಿಸಿವೆ. ಮೂರು ಪ್ರಮುಖ ಭಯೋತ್ಪಾದಕ ಸಂಘಟನೆಗಳಾದ ಜೈಶ್–ಎ–ಮೊಹಮ್ಮದ್, ಲಷ್ಕರ್–ಎ–ತೊಯ್ಬಾ ಮತ್ತು ಹಿಜ್ಬುಲ್ ಮುಜಾಹಿದ್ದೀನ್‌ಗಳಿಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಗುರಿಯಾಗಿಟ್ಟುಕೊಂಡು ಭಾರತೀಯ ಪಡೆಗಳು ಮೇ 7 ರಂದು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 9 ಭಯೋತ್ಪಾದಕ ಶಿಬಿರಗಳ ಮೇಲೆ ನಿಖರವಾದ ದಾಳಿ ನಡೆಸಿದ್ದವು. ಬಹವಾಲ್‌ಪುರದಲ್ಲಿರುವ ಜೆಎಂ ಪ್ರಧಾನ ಕಚೇರಿಯನ್ನು ಧ್ವಂಸಗೊಳಿಸಲಾಗಿತ್ತು. ಲುನಿ, ಪುತ್ವಾಲ್, ತೈಪು ಪೋಸ್ಟ್, ಜಮಿಲಾ ಪೋಸ್ಟ್, ಉಮ್ರಾನ್ವಾಲಿ, ಚಪ್ರಾರ್, ಫಾರ್ವರ್ಡ್ ಕಹುಟಾ, ಚೋಟಾ ಚಾಕ್ ಮತ್ತು ಜಂಗ್ಲೋರಾ ಮತ್ತಿತರ ಪ್ರದೇಶಗಳಲ್ಲಿ ಮರು ನಿರ್ಮಾಣ ಮಾಡಲಾಗುತ್ತಿದೆ.

ನಾಳೆ ಚಂದ್ರ–ಮಂಗಳ ಸಂಯೋಗ; ಖಗೋಳ ವೀಕ್ಷಕರಲ್ಲಿ ಉತ್ಸಾಹ

ಬೆಂಗಳೂರು: ಜೂನ್ 30ರ ಮುಂಜಾನೆ ಖಗೋಳ



ವೀಕ್ಷಕರು ಒಂದು ಘಟನೆಗೆ ಸಾಕ್ಷಿಯಾಗಲಿದ್ದಾರೆ. ಆಗ ಚಂದ್ರ ಮತ್ತು ಮಂಗಳ ಗ್ರಹಗಳ ಸಂಯೋಗ ಎಂದು ಖಗೋಳಶಾಸ್ತ್ರಜ್ಞರು ಕರೆಯುವ ರೀತಿಯಲ್ಲಿ ಅಸಾಮಾನ್ಯವಾಗಿ ಪರಸ್ಪರ ಹತ್ತಿರದಲ್ಲಿ ಕಾಣಿಸಿಕೊಳ್ಳುತ್ತವೆ.

ಚಂದ್ರ ಮತ್ತು ಗ್ರಹಗಳ ನಡುವಿನ ಇಂತಹ ಜೋಡಣೆಗಳು ನಿಯಮಿತವಾಗಿ ಸಂಭವಿಸುತ್ತಿದ್ದರೂ ಈ ವರ್ಷದ ಕೊನೆಯಲ್ಲಿ ಮಂಗಳ ಗ್ರಹವು ತನ್ನ ವಿರುದ್ಧಕ್ಕೆ ಹತ್ತಿರವಾಗುತ್ತಿದ್ದಂತೆ ಮತ್ತು ರಾತ್ರಿ ಆಕಾಶದಲ್ಲಿ ಕ್ರಮೇಣ ಪ್ರಕಾಶಮಾನವಾಗುತ್ತಿದ್ದಂತೆ ಈ ನಿರ್ದಿಷ್ಟ ಜೋಡಣೆಯು ಅದರ ಸಮಯಕ್ಕೆ ಎದ್ದು ಕಾಣುತ್ತದೆ. ಈ ವಿದ್ಯಮಾನದಲ್ಲಿ ಮುಂಜಾನೆಯ ಮೊದಲು ಸ್ಪಷ್ಟ ಆಕಾಶವನ್ನು ವೀಕ್ಷಕರು ಮಂಗಳನ ಕೆಂಪು ಬಣ್ಣದ ಹೊಳಪಿನೊಂದಿಗೆ ಜೋಡಿಯಾಗಿರುವ ತೆಳುವಾದ ಅರ್ಧಚಂದ್ರನನ್ನು ವೀಕ್ಷಿಸಬಹುದು. ಎರಡೂ ಗ್ರಹಗಳು ಆಕಾಶದ ಒಂದೇ ಪ್ರದೇಶದಲ್ಲಿ ನೆಲೆಗೊಂಡಿವೆ. ಸುಮಾರು 3 ಡಿಗ್ರಿಗಳಷ್ಟು ಬೇರ್ಪಟ್ಟಿವೆ. ಎರಡು ಕಾಯಗಳು ವಾಸ್ತವವಾಗಿ ಮಿಲಿಯನ್ ಕಿಲೋಮೀಟರ್ ಅಂತರದಲ್ಲಿದ್ದರೂ ಕಕ್ಷೆಯ ಜೋಡಣೆಯ ವಿಚಿತ್ರತೆಯಿಂದಾಗಿ ಅವು ಭೂಮಿಯಿಂದ ಪಕ್ಕದಲ್ಲಿ ಕಾಣಿಸಿಕೊಳ್ಳುತ್ತವೆ.

ಮತ್ತೆ ಗಾಜಾದ ಮೇಲೆ ಇಸ್ರೇಲ್ ವಾಯುದಾಳಿ: 62 ಮಂದಿ ಸಾವು


ಗಾಜಾಪಟ್ಟಿ: ಇರಾನ್ ಮೇಲೆ ವಾಯುದಾಳಿಗಳನ್ನು



ನಿಲ್ಲಿಸಿರುವ ಇಸ್ರೇಲ್ ಇದೀಗ ಮತ್ತೆ ಗಾಜಾದ ಮೇಲೆ ಮುಗಿಬಿದ್ದಿದೆ. ಇರಾನ್ ಮೇಲೆ ಇಸ್ರೇಲ್ ಯುದ್ಧದಲ್ಲಿ ನಿರತರಾಗಿದ್ದಾಗ ಗಾಜಾದಲ್ಲಿ ಹಮಾಸ್ ಉಗ್ರ ಸಂಘಟನೆ ಮತ್ತೆ ಚಿಗುರಿಕೊಂಡಿತ್ತು. ಹೀಗಾಗಿ ಇಸ್ರೇಲ್ ಗಾಜಾದ ಮೇಲೆ ವಾಯುದಾಳಿ ನಡೆಸಿದ್ದು ಇದರಲ್ಲಿ ಕನಿಷ್ಠ 62 ಜನರು ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಕಾರ್ಯಕರ್ತರು ಹೇಳಿದ್ದಾರೆ. ಪ್ಯಾಲೆಸ್ತೀನಿಯನ್ನರು ಗಾಜಾದಲ್ಲಿ ಬೆಳೆಯುತ್ತಿರುವ ಮಾನವೀಯ ಬಿಕ್ಕಟ್ಟನ್ನು ಎದುರಿಸುತ್ತಿದ್ದು ಕದನ ವಿರಾಮದ ಸಾಧ್ಯತೆಗಳು ಹತ್ತಿರವಾಗುತ್ತಿವೆ. ಶವಗಳನ್ನು ತಂದ ಶಿಫಾ ಆಸ್ಪತ್ರೆಯ ಸಿಬ್ಬಂದಿಯ ಪ್ರಕಾರ, ದಾಳಿಗಳು ಶುಕ್ರವಾರ ತಡರಾತ್ರಿ ಪ್ರಾರಂಭವಾಗಿ ಶನಿವಾರ ಬೆಳಿಗ್ಗೆ ತನಕ ಮುಂದುವರೆದವು, ಸ್ಥಳಾಂತರಗೊಂಡ ಜನರು ಆಶ್ರಯ ಪಡೆದಿದ್ದ ಗಾಜಾ ನಗರದ ಪ್ಯಾಲೆಸ್ಟೈನ್ ಕ್ರೀಡಾಂಗಣದ ಬಳಿ 12 ಜನರು ಮತ್ತು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುತ್ತಿದ್ದ ಎಂಟು ಜನರು ಸಾವನ್ನಪ್ಪಿದರು. ಆರೋಗ್ಯ ಅಧಿಕಾರಿಗಳ ಪ್ರಕಾರ, 20ಕ್ಕೂ ಹೆಚ್ಚು ಶವಗಳನ್ನು ನಾಸರ್ ಆಸ್ಪತ್ರೆಗೆ ಸಾಗಿಸಲಾಗಿದೆ.

ಟೆಂಪೋದಲ್ಲಿ ಮುಂದಿನ ಸೀಟು ಬಿಟ್ಟು ಕೊಡದ ತಂದೆಯನ್ನು ಗುಂಡಿಟ್ಟು ಹತ್ಯೆಗೈದ ಪುತ್ರ

ನವದೆಹಲಿ: ಟೆಂಪೋದಲ್ಲಿ ಮುಂದಿನ ಸೀಟು ಬಿಟ್ಟು



ಕೊಡದ ತಂದೆಯನ್ನು ಪುತ್ರನೇ ಗುಂಡಿಟ್ಟು ಹತ್ಯೆಗೈದಿರುವ ಘಟನೆ ಉತ್ತರ ದೆಹಲಿಯ ತಿಮಾರ್‌ಪುರ ಪ್ರದೇಶದಲ್ಲಿ ನಡೆದಿದೆ.

ಉತ್ತರಾಖಂಡ್‌ನಲ್ಲಿರುವ ತಮ್ಮ ಸ್ವಗ್ರಾಮಕ್ಕೆ ಸ್ಥಳಾಂತರಗೊಳ್ಳಲು ಬಾಡಿಗೆಗೆ ಪಡೆದಿದ್ದ ಟೆಂಪೋದಲ್ಲಿ ಮುಂದಿನ ಸೀಟು ಬಿಟ್ಟು ಕೊಡದಿದ್ದಕ್ಕೆ 26 ವರ್ಷದ ಪುತ್ರ ಗುಂಡಿಟ್ಟು ತನ್ನ ತಂದೆಯನ್ನು ಕೊಲೆ ಮಾಡಿರುವುದಾಗಿ ಪೊಲೀಸರ ಮೂಲಗಳು ತಿಳಿಸಿವೆ.

ಆರೋಪಿ ದೀಪಕ್ ಎಂಬಾತನನ್ನು ಸ್ಥಳದಿಂದ ಬಂಧಿಸಲಾಗಿದ್ದು, 11 ಜೀವಂತ ಕಾಟ್ರಿಡ್ಜ್‌ಗಳು ಪತ್ತೆಯಾಗಿವೆ. ಮೃತನನ್ನು 60 ವರ್ಷದ ಸುರೇಂದ್ರ ಸಿಂಗ್ ಎಂದು ಗುರುತಿಸಲಾಗಿದೆ. ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ ನಿವೃತ್ತ ಸಬ್–ಇನ್‌ಸ್ಪೆಕ್ಟರ್ ಆಗಿದ್ದ ಅವರನ್ನು ಕೂಡಲೇ ಎಚ್‌ಆರ್‌ಹೆಚ್ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅಷ್ಟರಲ್ಲಿ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ

ಪಾಕಿಸ್ತಾನ ಸೇನಾ ಬೆಂಗಾವಲು ಪಡೆ ವಾಹನದ ಮೇಲೆ ಆತ್ಮಾಹುತಿ ದಾಳಿ; 16 ಸೈನಿಕರು ಸಾವು

ಇಸ್ಲಾಮಾಬಾದ್: ಪಾಕಿಸ್ತಾನದಲ್ಲಿ ಆತ್ಮಾಹುತಿ ಬಾಂಬ್



ದಾಳಿ ನಡೆದಿದೆ. ಪಾಕಿಸ್ತಾನಿ ತಾಲಿಬಾನ್ ಎಂದು ಹೇಳಿಕೊಂಡವರಿಂದ ನಡೆದ ದಾಳಿಯಲ್ಲಿ 16 ಸೈನಿಕರು ಸಾವನ್ನಪ್ಪಿದ್ದು, ನಾಗರಿಕರು, ಸ್ಥಳೀಯ ಸರ್ಕಾರದ ಅಧಿಕಾರಿಗಳು ಸೇರಿದಂತೆ ಎರಡು ಡಜನ್‌ಗೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾ ಬೆಂಗಾವಲು ಪಡೆ ವಾಹನದ ಮೇಲೆ ಆತ್ಮಹತ್ಯಾ ಬಾಂಬರ್, ಸ್ಫೋಟಕ ತುಂಬಿದ ವಾಹನವನ್ನು ಡಿಕ್ಕಿ ಹೊಡೆಸಿದ್ದಾನೆ ಎಂದು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಉತ್ತರ ವಜಿರಿಸ್ತಾನ್ ಜಿಲ್ಲೆಯ ಸ್ಥಳೀಯ ಸರ್ಕಾರಿ ಅಧಿಕಾರಿಯೊಬ್ಬರು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದ್ದಾರೆ.

ಪಾಕಿಸ್ತಾನ ತಾಲಿಬಾನ್‌ನ ಒಂದು ಬಣವಾದ ಹಫೀಜ್ ಗುಲ್ ಬಹದ್ದೂರ್ ಸಶಸ್ತ್ರ ಗುಂಪಿನ ಆತ್ಮಹತ್ಯಾ ಬಾಂಬರ್ ವಿಭಾಗ ಈ ದಾಳಿಯ ಹೊಣೆ ಹೊತ್ತುಕೊಂಡಿದೆ. 2021ರಲ್ಲಿ ಕಾಬೂಲ್‌ನಲ್ಲಿ ತಾಲಿಬಾನ್ ಅಧಿಕಾರಕ್ಕೆ ಮರಳಿದ ನಂತರ ಪಾಕಿಸ್ತಾನ–ಅಫ್ಘಾನಿಸ್ತಾನದ ಗಡಿಯಲ್ಲಿ ಹಿಂಸಾಚಾರ ಹೆಚ್ಚಾಗಿದೆ.

ಕಿರುಗೂರು ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ



ಕಾಡಾನೆಗಳ ಹಾವಳಿಯಿಂದ ನಾಶಗೊಂಡಿರುವ ಅಡಿಕೆ ಮತ್ತು ಕಾಫಿ ತೋಟ.

ಮಡಿಕೇರಿ/ ಪೊನ್ನಂಪೇಟೆ, ಜೂ.28– ಕಾಫಿ ತೋಟಕ್ಕೆ ಲಗ್ಗೆ ಇಟ್ಟು ಅಪಾರ ಪ್ರಮಾಣದ ಕೃಷಿ ಫಸಲುಗಳನ್ನು ನಾಶ ಪಡಿಸುವ ಕಾಡಾನೆಗಳ ಹಾವಳಿ ಹತ್ತು ಹದಿನೈದು ದಿನಗಳಿಂದ ಮಿತಿಮೀರಿದೆ.

ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮತ್ತೂರು, ಕಿರುಗೂರು ಗ್ರಾಮದಲ್ಲಿ ಸುಮಾರು ಹನ್ನೆರಡು ವರ್ಷಗಳಿಂದ ನಿರಂತರವಾಗಿ ಮಳೆಗಾಲದಲ್ಲಿ ಮತ್ತೂರು, ಕಿರುಗೂರು ಗ್ರಾಮಕ್ಕೆ 8ರಿಂದ 10 ಕಾಡಾನೆಗಳ ಹಿಂಡು ಲಗ್ಗೆಯಿಡುತ್ತಿವೆ. ನಿನ್ನೆ ಕಾಡಾನೆಗಳ ಹಿಂಡು ಮತ್ತೂರು ಗ್ರಾಮದ ಕಾಕೇರ ರವಿಯವರಿಗೆ ಸೇರಿದ 20ರಿಂದ 25 ಫಸಲು ಭರಿತ ಕಾಫಿ, 15 ರಿಂದ 20 ಫಸಲು ಬಿಡುವ ಅಡಿಕೆ ಹಾಗೂ ತೆಂಗು, ಬಾಳೆ ಹಾಗೂ ಇನ್ನಿತರ ಬೆಳೆಗಳನ್ನು ತಿಂದು ತುಳಿದು ನಾಶಪಡಿಸಿವೆ.

ಗ್ರಾಮದ ಕಾಕೇರ ನಾಣಯ್ಯ, ಪಿ.ಎನ್ ರುಕ್ಮಿಣಿ, ಪುತ್ತಮನೆ ಸ್ವರಣ್, ಚೆಪ್ಪುಡಿರ ನಟೇಶ್, ಕಾಳಪ್ಪ ಹಾಗೂ ಇತರರ ಕಾಫಿ ತೋಟಗಳು ಕಾಡಾನೆಗಳ ದಾಂಗುಡಿಗೆ ನಾಶವಾಗಿವೆ. ಮತ್ತೂರು, ಕಿರುಗೂರು ಗ್ರಾಮದಲ್ಲೆ ಬೀಡು ಬಿಟ್ಟಿರುವ ಕಾಡಾನೆಗಳ ಹಿಂಡು ಗ್ರಾಮದ ಕೃಷಿ ಪ್ರದೇಶಗಳಲ್ಲಿ ದಾಂಧಲೆ ನಡೆಸುತ್ತಿವೆ. ಒಂದೆಡೆ ಕೃಷಿ ಫಸಲು ನಾಶವಾಗುತ್ತಿದ್ದರೆ, ಮತ್ತೊಂದೆಡೆ ಸಂಜೆ ವೇಳೆ ಗ್ರಾಮಸ್ಥರು ಹೊರ ಬರಲು ಭಯ ಪಡುವ ವಾತಾವರಣ ಸೃಷ್ಟಿಯಾಗಿದೆ.

ಮತ್ತೂರು, ಕಿರುಗೂರು ಗ್ರಾಮಗಳಿಗೆ ಕಾಡಾನೆಗಳ ಹಿಂಡು ಲಗ್ಗೆ ಇಟ್ಟಿರುವ ಬಗ್ಗೆ ಮಾಹಿತಿ ನೀಡಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡುವ ಅರಣ್ಯ ಇಲಾಖೆ ಸಿಬ್ಬಂದಿ ಪಟಾಕಿ ಸಿಡಿಸಿ, ಕಾಡಾನೆಗಳನ್ನು ಮತ್ತೂರು ಗ್ರಾಮದಿಂದ ಮಾಯಮುಡಿ ಹಾಗೂ ಕಿರುಗೂರು ಗ್ರಾಮದ ಕೀರೆಹೊಳೆವರೆಗೆ ಓಡಿಸಿ ಬರುತ್ತಾರೆ. ಆದರೆ ರಾತ್ರಿ ಮತ್ತೆ ಗ್ರಾಮದ ಕಾಫಿ ತೋಟಗಳಿಗೆ ಲಗ್ಗೆ ಇಡುವ ಕಾಡಾನೆಗಳ ಹಿಂಡು ಕೃಷಿ ಫಸಲುಗಳನ್ನು ನಾಶಪಡಿಸುತ್ತಿರುವ ಘಟನೆ ಸುಮಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಲೇ ಇದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಕೊಡಗು ಪತ್ರಕರ್ತರ ಸಂಘದಿಂದ 10 ಮಂದಿಗೆ ವಾರ್ಷಿಕ ಪ್ರಶಸ್ತಿ

'ಮೈಸೂರು ಮಿತ್ರ'ನಿಗೆ 'ಅತ್ಯುತ್ತಮ ಪರಿಣಾಮಕಾರಿ ವರದಿ' ಪ್ರಶಸ್ತಿ

ಮಡಿಕೇರಿ, ಜೂ.28–ಕೊಡಗು ಪತ್ರಕರ್ತರ ಸಂಘದಿಂದ ಕೊಡ ಮಾಡುವ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಘೋಷಣೆಯಾಗಿದ್ದು, ಮೈಸೂರು ಮಿತ್ರ 'ಅತ್ಯುತ್ತಮ ಪರಿಣಾಮಕಾರಿ ವರದಿ' ಪ್ರಶಸ್ತಿಗೆ ಭಾಜನವಾಗಿದೆ. 'ಮೈಸೂರು ಮಿತ್ರ' ಪತ್ರಿಕೆಯಲ್ಲಿ 2024ರ ಜೂ.23ರಂದು ಪ್ರಕಟಗೊಂಡ 'ಪ್ರಕೃತಿ ವಿಕೋಪದಲ್ಲಿ ಇಡೀ ಕುಟುಂಬವನ್ನು ಕಳೆದುಕೊಂಡು ಅನಾಥವಾದ ಯುವತಿಯ ಯಶೋಗಾಥೆ' ವರದಿಗೆ ಪ್ರಶಸ್ತಿ ಲಭಿಸಿದ್ದು, ಸಂಘದ ನಿರ್ದೇಶಕ ಗುಡ್ಡೆಮನೆ ವಿಶುಕುಮಾರ್ ನೀಡಿರುವ ಅತ್ಯುತ್ತಮ ಪರಿಣಾಮಕಾರಿ ವರದಿಗೆ ಭಾಜನವಾಗಿದೆ. ಇದರೊಂದಿಗೆ ಜಿಲ್ಲೆಯ ಒಟ್ಟು 10 ಮಂದಿ ಪತ್ರಕರ್ತರು ಪ್ರಶಸ್ತಿಗೆ ಪಾತ್ರರಾಗಿದ್ದಾರೆ.



ಪ್ರಕೃತಿ ವಿಕೋಪದಲ್ಲಿ ಇಡೀ ಕುಟುಂಬ ಕಳೆದುಕೊಂಡು

ಅನಾಥಳಾದ ಯುವತಿಯ ಯಶೋಗಾಥೆ

● ಶೈಕ್ಷಣಿಕ ಸಾಧನೆ ಮಾಡಿ ಕಾಲೇಜಿನ ಸಹಾಯಕ ಪ್ರೊಫೆಸರ್ ಆಗಿ ಸೇವೆ ● ಪಿಹೆಚ್‌ಡಿ ಪದವಿ ಪಡೆದ ಡಾ.ಪಲ್ಲವಿ

ಮಡಿಕೇರಿ ಜನತೆಗೆ ಅರ್ಪಣೆ

ಪ್ರಶಸ್ತಿಗೆ ಭಾಜನವಾದ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟಗೊಂಡ ಸುದ್ದಿ.

ಪತ್ರಕರ್ತರಾಗಿದ್ದ ದಿ.ಕೆ.ಬಿ. ಮಹಂತೇಶ್ ಸ್ಮರಣಾರ್ಥ ಸ್ಥಾಪಿಸಿರುವ ಅತ್ಯುತ್ತಮ ಕ್ರೀಡಾ ವರದಿಗೆ ಕುಡೆಕಲ್ ಸಂತೋಷ್, ದಿವಂಗತ ಬಿ.ಆರ್.ಶಶಿರಮ್ಮ ಮತ್ತು ದಿವಂಗತ ಬಿ.ಟಿ.ರಾಮದಾಸ ಶೆಟ್ಟಿ ಜ್ಞಾಪಕಾರ್ಥ ಸ್ಥಾಪಿಸಿರುವ ಅತ್ಯುತ್ತಮ ಗ್ರಾಮೀಣ ವರದಿಗೆ ಗಿರೀಶ್ ಪಗಡಿ ಗತ್ತಲ ಮತ್ತು ಮೋಹನ್ ರಾಜ್ ಜಂಟಿಯಾಗಿ ಪಡೆದುಕೊಂಡಿದ್ದಾರೆ.

ತಾಯಿ ನಾಪಂಡ ಭೋಜಮ್ಮ ಹೆಸರಿನಲ್ಲಿ ಸ್ಥಾಪಿಸಿರುವ ರಾಜಕೀಯ ವರದಿಗೆ ವಿಘ್ನೇಶ್ ಭೂತನಕಾಡು, ರಾಜಲಕ್ಷ್ಮಿ ಗೋಪಾಲಕೃಷ್ಣ ಹೆಸರಿನಲ್ಲಿ ಸ್ಥಾಪಿಸಿರುವ ಅತ್ಯುತ್ತಮ ಮಾನವೀಯ ವರದಿಗೆ ಸುಂಟಿಕೊಪ್ಪದ ಸುನಿಲ್ ಪೂಜಾರಿ, ಮಂಡಿಬೆಲೆ ಮಂಡಿಬೆಲೆ ದ್ಯಾವಮ್ಮ–ಶಾಮಣ್ಣ ಹೆಸರಿನಲ್ಲಿ ಸ್ಥಾಪಿಸಿರುವ ಕೊಡಗಿನ ಆದಿವಾಸಿ ಜನಾಂಗದ ಜೀವನ ಕುರಿತ ಮಾನವೀಯ ವರದಿಗಾಗಿ ಸೋಮವಾರಪೇಟೆಯ ಡಿ.ಪಿ. ಲೋಕೇಶ್, ಅತ್ಯುತ್ತಮ ಕೃಷಿ ವರದಿ ದತ್ತಿ ಪ್ರಶಸ್ತಿಗೆ ಗೋಣಿಕೊಪ್ಪದ ವಿನೋದ್ ಮೂಡಗದ್ದೆ, ದಿ.ಮೀರಾ ಕಾಮತ್ ಮತ್ತು ಎಂ.ಜಿ. ಪದ್ಮನಾಭ ಕಾಮತ್ ಸ್ಮರಣಾರ್ಥ ಸ್ಥಾಪಿಸಿರುವ ದೃಶ್ಯ ವಾಹಿನಿಯಲ್ಲಿ ಪ್ರಸಾರವಾದ ಮಾನವೀಯ ವರದಿಗೆ ಟಿ.ವಿ ಒನ್ ಚಾನಲ್, ನಾಪಂಡ ಮುತ್ತಣ್ಣ ಅವರ ಹೆಸರಿನಲ್ಲಿ ಸ್ಥಾಪಿಸಿರುವ ದೃಶ್ಯವಾಹಿನಿಯಲ್ಲಿ ಪ್ರಸಾರವಾದ ಕೊಡಗಿನ ಜ್ವಲಂತ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವರದಿಗೆ ಟಿ.ಜೆ. ಪ್ರವೀಣ್‌ಕುಮಾರ್ ಭಾಜನರಾಗಿದ್ದಾರೆ.

ಪ್ರಶಸ್ತಿ ಪ್ರದಾನ: ನಗರದ ಪತ್ರಿಕಾಭವನದಲ್ಲಿ ಜುಲೈ 1ರಂದು ನಡೆಯಲಿರುವ ಪತ್ರಿಕಾ ದಿನಾಚರಣೆಯಲ್ಲಿ ಸಮಾಜ ಸೇವಕ ತೇಲಪಂಡ ಶಿವಕುಮಾರ್ ನಾಣಯ್ಯ ವಿವಿಧ ದತ್ತಿ ದಾನಿಗಳ ಸಮ್ಮುಖದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

ಪತ್ರಕರ್ತ ಕೆ.ತಿಮ್ಮಪ್ಪ, ಸಂಘದ ಸ್ಥಾಪಕಾಧ್ಯಕ್ಷ ಎಸ್.ಎ. ಮುರಳೀಧರ್, ಕ್ಷೇಮನಿಧಿ ಸಮಿತಿ ಅಧ್ಯಕ್ಷ ಜಿ.ವಿ. ರವಿಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದು ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ, ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕವನಗಳು ಭಾಷೆಯ ಬಲವನ್ನು ಹೆಚ್ಚಿಸುತ್ತವೆ

ಮಡಿಕೇರಿ: ಕವನಗಳು ಭಾಷೆಯ ಬಲವನ್ನು ಹೆಚ್ಚಿಸುತ್ತವೆ ಎಂದು ಲೇಖಕಿ ಹಾಗೂ ಕೊಡವ ಮಕ್ಕಡ ಕೂಟದ ಸಲಹೆಗಾರರಾದ ಐಚಂಡ ರಶ್ಮಿ ಮೇದಪ್ಪ ತಿಳಿಸಿದ್ದಾರೆ

ನಗರದ ಪತ್ರಿಕಾ ಭವನದಲ್ಲಿ ಲೇಖಕಿ ಮಾಳೇಟಿರ ಸೀತಮ್ಮ ವಿವೇಕ್‌ರ ಚೀತೆರ ಕಾಳ ಮುತ್ತ್ ಮಾಲೆ ಕೊಡವ ಕವನ ಸಂಕಲನ ಬಿಡುಗಡೆ ಮಾಡಿ, ಕವನಗಳು ಭಾಷೆಯ ಬಲವನ್ನು ಹೆಚ್ಚಿಸುವುದಲ್ಲದೆ, ಓದುಗರ ಜೊತೆ ಮಾತನಾಡುತ್ತ, ಮನ ಮುಟ್ಟಿ ಹೊಸ ಆಯಾಮಕ್ಕೆ ಕೊಂಡೊಯ್ಯುತ್ತದೆ. ಭಾಷೆಯ ಬೆಳವಣಿಗೆಯಲ್ಲಿ ಸಾಹಿತ್ಯ ಮಹತ್ವಪೂರ್ಣ ಪಾತ್ರ ವಹಿಸುತ್ತದೆ ಕಥೆ, ಕಾದಂಬರಿ, ನಾಟಕ, ಕವನ ಸಂಕಲನಗಳು ಸಾಹಿತ್ಯ ಕ್ಷೇತ್ರದ ಸುಂದರ ಮತ್ತು ಶಕ್ತಿಯುತ ಪ್ರಕಾರಗಳಾಗಿವೆ ಎಂದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಅಧ್ಯಕ್ಷತೆ ವಹಿಸಿ ಸಾಮಾಜಿಕ ಕಳಕಳಿ, ಕೊಡಗಿನ ಅಭ್ಯುದಯದ ಕಾಳಜಿ, ಸಂಸ್ಕೃತಿ, ಸಾಹಿತ್ಯ ಬೆಳವಣಿಗೆಯ ಮೇಲಿನ ಆಸಕ್ತಿಯಿಂದ ಸರ್ಕಾರದ ಅನುದಾನವಿಲ್ಲದಿದ್ದರೂ ಸಾಹಿತ್ಯ ಬೆಳವಣಿಗೆಗೆ ಒತ್ತು ನೀಡುವ ನಿಟ್ಟಿನಲ್ಲಿ ದಾನಿಗಳ ಸಹಕಾರದಿಂದ ನಿರಂತರ ಕಾರ್ಯನಿರ್ವಹಣೆಯಲ್ಲಿ ತೊಡಗಿರುವ ಕೊಡವ ಮಕ್ಕಡ ಕೂಟ ಹೊಸ ಬರಹಗಾರರನ್ನು ಪ್ರೋತ್ಸಾಹಿಸುವ



ಕೆಲಸ ಮಾಡುತ್ತಿದೆ ಎಂದರು. ಲೇಖಕಿಯ ತಂದೆ ಹಾಗೂ ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಕಂಬೀರಂಡ ಕಿಟ್ಟು ಕಾಳಪ್ಪ ಅವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಲೇಖಕಿ ಮಾಳೇಟಿರ ಸೀತಮ್ಮ ವಿವೇಕ್, ತಾಯಿ ಕಂಬೀರಂಡ ಮುತ್ತಮ್ಮ ಹಾಗೂ ಸಮಾಜ ಸೇವಕ ಹಂಚೆಟ್ಟಿರ ಮನು ಮುದ್ದಪ್ಪ ಉಪಸ್ಥಿತರಿದ್ದರು.

ರೈತ ಹೋರಾಟಗಾರರ ಬಿಡುಗಡೆಗೆ ಆಗ್ರಹಿಸಿ ಸಿಪಿಐಎಂ ಪ್ರತಿಭಟನೆ



ರೈತ ಹೋರಾಟಗಾರರ ಬಿಡುಗಡೆಗೆ ಆಗ್ರಹಿಸಿ ಸಿಪಿಐಎಂ ಪ್ರತಿಭಟನೆ ನಡೆಸಿತು

ಸಿದ್ದಾಪುರ,ಜೂ.28– ದೇವನಹಳ್ಳಿ ರೈತ ಹೋರಾಟಗಾರರನ್ನು ಬಿಡುಗಡೆಗೊಳಿಸಿ, ಭೂ ಸ್ವಾಧೀನ ಪ್ರಕ್ರಿಯೆಯಿಂದ ದೂರ ಸರಿಯಬೇಕು ಎಂದು ಒತ್ತಾಯಿಸಿ ಸಿಪಿಐಎಂ ಕೊಡಗು ಜಿಲ್ಲಾ ಘಟಕದ ನೆಲ್ಯಹುದಿಕೇರಿ ಶಾಖೆ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿತು.

ರೈತರ ಭೂಮಿಯನ್ನು ಕಾರ್ಪೊರೇಟ್ ಕಂಪನಿಗಳಿಗೆ ಕೊಡಲು ಮುಂದಾಗಿರುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಕಾರ್ಪೋರೇಟ್ ಉದಾರ ನೀತಿಯನ್ನು ಖಂಡಿಸಿ ಬಂಧಿತರನ್ನು ಬಿಡುಗಡೆಗೊಳಿಸಬೇಕು. ಅವರ ಮೇಲೆ ಹಾಕಲಾಗಿರುವ ಕೇಸ್ ಅನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಪಕ್ಷದ ಮುಖಂಡ ಪಿ.ಆರ್.ಭರತ್ ಮಾತನಾಡಿ, ಬಿಜೆಪಿ ಸರ್ಕಾರ ತಂದಿದ್ದ ನೀತಿಯನ್ನೇ ಕಾಂಗ್ರೆಸ್ ಸರ್ಕಾರ ಮುಂದುವರೆಸುತ್ತಿರುವುದರ ವಿರುದ್ಧ ಪ್ರತಿಭಟಿಸಿದ ರೈತರನ್ನು ಜೈಲಿಗೆ ಹಾಕಿರುವುದು ಸರಿಯಾದ ಕ್ರಮವಲ್ಲ, ತಕ್ಷಣವೇ ಅವರನ್ನು ಬಿಡುಗಡೆ ಮಾಡುವಂತೆ ಭರತ್ ಆಗ್ರಹಿಸಿದರು.

ಯೋಗದಿಂದ ಉತ್ತಮ ಆರೋಗ್ಯ ಸಾಧ್ಯ: ಸೀತಾರಾಮ ರೈ

ವಿರಾಜಪೇಟೆ: ಯೋಗ ಮಾಡುವುದರಿಂದ ಜೀವನದಲ್ಲಿ ಉತ್ತಮ ಆರೋಗ್ಯ ಪಡೆಯಬಹುದು. ಆದ್ದರಿಂದ ಮಕ್ಕಳಿಗೆ ಶಿಕ್ಷಣದ ಜೊತೆಗೆ ಯೋಗವನ್ನು ಕಲಿಸುವಂತಾಗಬೇಕು ಎಂದು ಶ್ರೀ ಕಾವೇರಿ ಯೋಗ ಕೇಂದ್ರದ ಗುರು ಸೀತಾರಾಮ ರೈ ತಿಳಿಸಿದರು.

ಸಮೀಪದ ಅರಮೇರಿ ಕಳಂಚೇರಿ ಶ್ರೀ ಮಠದ ಲಿಂಗರಾಜೇಂದ್ರ ಭವನದಲ್ಲಿ ನಡೆದ 'ಹೊಂಬೆಳಕು ಕಿರಣ 232 ಮಾಸಿಕ ತತ್ತ್ವ ಚಿಂತನಾಗೋಷ್ಠಿ' ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ (ಯೋಗ ಪ್ರಾತ್ಯಕ್ಷಿಕೆ) ಭಾಗವಹಿಸಿ 'ವಿಶ್ವ ಯೋಗ ದಿನಾಚರಣೆಯ ಮಹತ್ವದ ಬಗ್ಗೆ ಮಾತನಾಡಿ ಯೋಗ ಎಂಬುದು ಒಂದು ವಿದ್ಯೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಪಿರಿಯಾಪಟ್ಟಣ ಕರ್ನಾಟಕ ಬ್ಯಾಂಕ್ ಉದ್ಯೋಗಿ ಗುರುಬಲ್ಲಾಳ್ ಮಾತನಾಡಿ, ದೇಶದಲ್ಲಿ ಯೋಗ ಅಂದರೆ ನಮ್ಮ ಭಾರತ ಪ್ರತಿಯೊಬ್ಬರು ಯೋಗ ಮಾಡುವಂತಾಗಬೇಕು. ಮಿತ ಆಹಾರ ಸೇವನೆ ಯೋಗದಿಂದ ಶಿಸ್ತು ಏಕಾಗ್ರತೆಯಿಂದ



ಪಿರಿಯಾಪಟ್ಟಣ ಬ್ಯಾಂಕ್ ಉದ್ಯೋಗಿ ಗುರುಬಲ್ಲಾಳ್ ಯೋಗ ಪ್ರದರ್ಶನ ನೀಡಿದರು.

ಧ್ಯಾನ ಮಾಡುವುದು. ಮನಸ್ಸು ಆತ್ಮವನ್ನು ಯೋಗದಿಂದ ಸಂಪರ್ಕ ಪಡುತ್ತದೆ ಎಂದ ಅವರು ವಿದ್ಯಾರ್ಥಿಗಳಿಗೆ ಯೋಗಬ್ಯಾಸ ಮಾಡುವ ವಿಧಾನವನ್ನು ತೋರಿಸಿಕೊಟ್ಟರು.

ಹೊಂಬೆಳಕು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ಭಾರತ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಯೋಗಬ್ಯಾಸ ಮಾಡುವ ಕಾರ್ಯ ಅಂದಿನಿಂದಲೂ ನಡೆದುಕೊಂಡು ಬರುತ್ತಿದ್ದು ಸಮಾಜದ ಏಳಿಗೆಗೆ ಮನುಷ್ಯ ಒಳ್ಳೆಯ ಭಾವನೆ ಉತ್ತಮ ಆರೋಗ್ಯದ ಬೆಳವಣಿಗೆಗೆ ಸದಾ ಯೋಗಬ್ಯಾಸ ಮಾಡುವುದು ಉತ್ತಮ ಹಾಗೂ ಕಲಿತಿರುವುದನ್ನು ಮತ್ತೊಬ್ಬರಿಗೂ ಹೇಳಿಕೊಡುವ ಮೂಲಕ ಪ್ರತಿಯೊಬ್ಬರು ಯೋಗ ಕಲಿತು ಆರೋಗ್ಯವಂತರಾಗುವಂತೆ ಸಲಹೆ ನೀಡಿದರು.

ಅಂತಾರಾಷ್ಟ್ರೀಯ ಕರಾಟೆಪಟು ಗೋಣಿಕೊಪ್ಪಲು ಜಮ್ಮಡ ಜಯಜೋಯಪ್ಪ, ವಿದ್ಯಾರ್ಥಿಗಳಿಗೆ ವಿಶ್ವ ಯೋಗದ ಮಹತ್ವದ ಬಗ್ಗೆ ತಿಳಿಸಿದರು. ನಿವೃತ್ತ ಯೋಗ ಶಿಕ್ಷಕ ಪಿ.ಎ.ಲಕ್ಷ್ಮಿನಾರಾಯಣ, ವೈದ್ಯಾದ ಡಾ.ಎಸ್.ವಿ. ನರಸಿಂಹನ್, ಕಾಳಿಮಾಡ ಡಾ.ಶಿವಪ್ಪ, ಡಾ. ಶಿವಕುಮಾರ್, ಹೆಚ್.ಎಸ್.ತಿಮ್ಮಪ್ಪಯ್ಯ, ಎಸ್.ಎಂ. ಸುಧಕರ್, ಶಿಕ್ಷಕವೃಂದ, ವಿದ್ಯಾರ್ಥಿಗಳಿದ್ದರು.

ಬಿ.ಎ.ನಾಗೇಗೌಡ ನಿಧನ



ಕುಶಾಲನಗರ,ಜೂ.28–ಕರವೇ ಸಂಘಟನೆ ಗೌರವಾಧ್ಯಕ್ಷ ಬಿ.ಎ. ನಾಗೇಗೌಡ (47)ತೀವ್ರ ಹೃದಯಾಘಾತದಿಂದ ನಿಧನರಾದರು.

ಮೃತರು ಪತ್ನಿ ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಪಟ್ಟಣದ ಸೋಮೇಶ್ವರ ಬಡಾವಣೆ ನಿವಾಸಿಯಾಗಿದ್ದ ಮೃತ ನಾಗೇಗೌಡರು ಜೇಸೀ ಅಲ್ಯೂಮಿನಿ ಸಂಸ್ಥೆಯ ವಲಯ 14 ರ ಉಪಾಧ್ಯಕ್ಷರಾಗಿದ್ದರು. ಕಳೆದ ಹಲ ವರ್ಷಗಳಿಂದ ಜನಶ್ರೀ ಸಂಸ್ಥೆಯನ್ನು ಕಟ್ಟಿದ್ದರು. ನಾಡಪ್ರಭು ಪತ್ತಿನ ಸಹಕಾರ ಸಂಘದ ಮಾಜಿ ನಿರ್ದೇಶಕರು, ತಾಲೂಕು ಒಕ್ಕಲಿಗ ಸಂಘದ ಕಾರ್ಯದರ್ಶಿಯೂ ಆಗಿದ್ದರು.

ಮೃತರ ನಿಧನಕ್ಕೆ ಕುಶಾಲನಗರದ ಹಲವು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಅವರ ಹುಟ್ಟೂರು ಪಿರಿಯಾಪಟ್ಟಣ ತಾಲೂಕಿನ ಪಿ.ಬಸವನಹಳ್ಳಿ ಗ್ರಾಮದಲ್ಲಿ ಬೆಳಗ್ಗೆ 10 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರದ್ಧಾಂಜಲಿ: ಇಲ್ಲಿನ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಸಂಘಸಂಸ್ಥೆಗಳ ವತಿಯಿಂದ ನಡೆದ ಭಾವಪೂರ್ಣ ಶ್ರದ್ಧಾಂಜಲಿ ಸಭೆಯಲ್ಲಿ ನಾಗೇಗೌಡ ಅವರ ಭಾವಚಿತ್ರಕ್ಕೆ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ವಿ.ಪಿ. ಶಶಿಧರ್, ನಾಡಪ್ರಭು ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಕೆ.ದಿನೇಶ್, ಮಾಜಿ ಅಧ್ಯಕ್ಷ ಎಂ.ಡಿ.ರಂಗಸ್ವಾಮಿ, ಕರವೇ ಜಿಲ್ಲಾಧ್ಯಕ್ಷ ದೀಪಕ್ ಪುಷ್ಪಾರ್ಚನೆ ನೆರವೇರಿಸಿದರು.

ಪಟ್ಟಣದ ಪ್ರಮುಖರಾದ ಅಣ್ಣಯ್ಯ, ಸಂಧ್ಯಾ, ರೂಪ, ಕೆ.ಎಸ್.ಕೃಷ್ಣೆಗೌಡ, ಎಸ್.ಎಸ್.ಚಂದ್ರಶೇಖರ್, ವಿ.ಜೆ.ನವೀನ್, ಎಂ.ಡಿ.ಕೃಷ್ಣಪ್ಪ, ವಿ.ಎಸ್.ಆನಂದಕುಮಾರ್, ಹೆಚ್.ಎನ್. ರಾಮಚಂದ್ರ, ಪರಮೇಶ್ ಮಂಡ್ಯ, ಕೆ.ಎಸ್.ನಾಗೇಶ್ ಇತರರು ಪಾಲ್ಗೊಂಡಿದ್ದರು.

ಪರಿಸರ ಸಂದೇಶ ಸಾರುವ ಉಡುಗೆ ತೊಡುಗೆ ತೊಟ್ಟ ಮಕ್ಕಳು



ನಿಸರ್ಗ ವಿದ್ಯಾನಿಕೇತನದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ವಿವಿಧ ರೀತಿಯ ಹಸಿರಿನ ಉಡುಗೆ ತೊಟ್ಟ ಚಿಣ್ಣರರು ಗಮನ ಸೆಳೆದರು.

ಕೊಳ್ಳೇಗಾಲ: ಹಸಿರು ಬಣ್ಣದ ವಿವಿಧ ವೇಷ ಭೂಷಣ ಧರಿಸಿ ಪರಿಸರ ಉಳಿವಿನ ಸಂದೇಶ ಸಾರುವಲ್ಲಿ ಪಟ್ಟಣದ ನಿಸರ್ಗ ವಿದ್ಯಾನಿಕೇತನದ ಚಿಣ್ಣರು ಯಶಸ್ವಿಯಾದರು.

ಸಂಸ್ಥೆಯ ಪ್ರಿ–ಕೆಜಿ, ಎಲ್ ಕೆಜಿ ಹಾಗೂ ಯುಕೆಜಿಯ ನೂರಾರು ವಿದ್ಯಾರ್ಥಿಗಳಿಗೆ ಪರಿಸರದ ದಿನದ ಅಂಗವಾಗಿ ಪೋಷಕರು ತಮ್ಮ ತಮ್ಮ ಪುಟಾಣಿಗಳಿಗೆ ವಿವಿಧ ರೀತಿಯಲ್ಲಿ ಹಸಿರಿನ ಉಡುಗೆಯಿಂದಲೇ ಮಕ್ಕಳನ್ನು ಶೃಂಗರಿಸಿ ಶಾಲೆಗೆ ಕರೆತಂದಿದ್ದರು. ಹಲವು ಮಕ್ಕಳು ಗಿಳಿ, ಪರಿಸರವನ್ನು ಸಂರಕ್ಷಿಸಿ ಎಂಬಿತ್ಯಾದಿ ಸಂದೇಶ ಬಿತ್ತರಿಸುವ ಉಡುಗೆಯೊಂದಿಗೆ ಅಲಂಕೃತಗೊಂಡು ಗಮನ ಸೆಳೆದರು.

ಸಂಸ್ಥೆಯ ಶಿಕ್ಷಕರು ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಶಾಲಾ ಆವರಣದಲ್ಲಿ ಹಸಿರಿನ ಚಪ್ಪರದ ರೀತಿಯಲ್ಲಿ ತಯಾರಿಸಿದ್ದ ಮಾದರಿಯಲ್ಲಿ ಮಕ್ಕಳನ್ನು ನಿಲ್ಲಿಸಿ, ಶಿಕ್ಷಕರು, ಮಕ್ಕಳ ಸಂಭ್ರಮದಲ್ಲಿ ಪಾಲ್ಗೊಂಡರು.

ಅವರು ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿಯೆ ಮಕ್ಕಳಲ್ಲಿ ಪರಿಸರ ಉಳಿವಿನ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಇಂದು ಪರಿಸರ ದಿನಾಚರಣೆ ಅಯೋಜಿಸಲಾಗಿದೆ ಎಂದು ಮುಖ್ಯಶಿಕ್ಷಕ ಶಂಕರ್ ತಿಳಿಸಿದರು.

ಪ್ರಾಂಶುಪಾಲ ನಯನ ಕ್ಲಾರಿಬಲ್, ಸಹ ಮುಖ್ಯಶಿಕ್ಷಕ ಗಿರಿಜಾ ಅರುಣ, ಶಿಕ್ಷಕರಾದ ಪ್ರಿಯಾ, ರಾಜೇಶ್ವರಿ ಶಿವಕುಮಾರ್, ದೀಪ, ರಾಜೇಶ್ವರಿ ಪ್ರಶಾಂತ್ ಇತರರಿದ್ದರು.

ಕಳಪೆ ಬಿತ್ತನೆ ಬೀಜ ಮಾರಾಟ; ಲಕ್ಷಾಂತರ ರೂ. ನಷ್ಟ

ಯಳಂದೂರು, ಜೂ. 28 (ವಿ.ನಾಗರಾಜು)–ತಾಲೂಕಿನ ಹೊನ್ನೂರು ಗ್ರಾಮದ ರೈತರೊಬ್ಬರಿಗೆ ಖಾಸಗಿ ಕಂಪೆನಿ ಕಳಪೆ ಗುಣಮಟ್ಟದ ಮಂಗಳೂರು ಸೌತೆಯ ಬಿತ್ತನೆ ಬೀಜ ನೀಡಿದ ಪರಿಣಾಮ ರೈತರೊಬ್ಬರು ಲಕ್ಷಾಂತರ ರೂ. ನಷ್ಟ ಅನುಭವಿಸಿದ ಘಟನೆ ನಡೆದಿದೆ.

ಹೊನ್ನೂರು ಗ್ರಾಮದಲ್ಲಿ ಜಮೀನನ್ನು ಗುತ್ತಿಗೆ ಪಡೆದಿದ್ದ ಸೋಮಣ್ಣ ಎಂಬುವರೇ ಲಕ್ಷಾಂತರ ರೂ. ನಷ್ಟ ಅನುಭವಿಸಿದವರಾಗಿದ್ದಾರೆ. ಇವರು ಎಚ್.ವಿ. ಪ್ರಕಾಶ್, ರಾಜಮ್ಮ ಎಂಬುವರಿಗೆ ಸೇರಿದ 4.25 ಎಕರೆ ಜಮೀನಿನಲ್ಲಿ ವಿನ್‌ಸೀಡ್ ಕಂಪೆನಿಯ ಚಾರ್ಲಿ ತಳಿಯ 45 ದಿನಗಳ ಬೆಳೆಯಾಗಿರುವ ಮಂಗಳೂರು ಸೌತೆಯ ಬಿತ್ತನೆ ಬೀಜದ ಸಸಿಗಳನ್ನು ಫಾಲಾಕ್ಷ ಎಂಬುವರಿಂದ ಪಡೆದುಕೊಂಡು ಬಿತ್ತನೆ ಮಾಡಿದ್ದರು. ಮಂಗಳೂರು ಸೌತೆಯಲ್ಲಿ ಹಲವು ತಳಿಗಳಿವೆ. ಆದರೆ ಇವರ ಜಮೀನಿನಲ್ಲಿ ಸೌತೆಯು ಫಲ ಕೊಡಲು ಆರಂಭಗೊಳ್ಳುತ್ತಿದ್ದಂತೆಯೇ ಎಲ್ಲಾ ತಳಿಯ ಕಾಯಿಗಳು ಕಾಣಿಸಿಕೊಂಡಿದೆ. ಅಲ್ಲದೆ ಕಾಯಿಗಳು ಸಣ್ಣದಾಗಿದ್ದು ದಪ್ಪವಾಗುತ್ತಿಲ್ಲ. ಎಕರೆಗೆ 20 ಟನ್ ಬರುತ್ತದೆ ಎಂದು ನೀಡಿದ್ದ ಭರವಸೆ ಹುಸಿಯಾಗಿದೆ. ಈವರೆಗೆ ಕೇವಲ 7.5 ಟನ್ ಕಾಯಿ ಮಾತ್ರ ಕಟಾವು ಮಾಡಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಕಂಪೆನಿಯ ಮೇಲಾಧಿಕಾರಿಯನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಎಂದು ಆರೋಪಿಸಿದರು.

ಇದೊಂದು ನ್ಯೂಜಿಲ್ಯಾಂಡ್ ಮೂಲದ ಎಮ್‌ಎನ್‌ಸಿ ಕಂಪೆನಿಯ ವಿರುದ್ಧ ದಾವೆಯನ್ನು ಹೂಡಲು ತಯಾರಿ ನಡೆಸಿದ್ದೇವೆ. ಅಲ್ಲಿವರೆಗೆ ಕಂಪೆನಿಯ ಪ್ರತಿನಿಧಿಯಾಗಿ ಬಂದಿರುವ ವಿಕಾಸ್‌ನನ್ನು ಪೊಲೀಸ್ ಕಸ್ಟಡಿಗೆ ನೀಡಲು ತೀರ್ಮಾನಿಸಿದ್ದೇವೆ. ಮುಂದಿನ ದಿನಗಳಲ್ಲಿ ಕಂಪನಿ ಸೂಕ್ತ ಸ್ಪಂದನೆ ಲಭಿಸದಿದ್ದಲ್ಲಿ ಇದರ ವಿರುದ್ಧ ಗ್ರಾಹಕರ ನ್ಯಾಯಾಲಯಕ್ಕೆ ದೂರು ನೀಡಲಾಗುವುದು ಎಂದರು

ಅಧಿಕಾರಿಗಳಿಂದ ಪರಿಶೀಲನೆ



ಹೊನ್ನೂರು ಗ್ರಾಮದ ರೈತರ ಜಮೀನಿನಲ್ಲಿ ಕಳಪೆ ಗುಣಮಟ್ಟದ ಬೀಜದಿಂದ ಹಾಳಾದ ಮಂಗಳೂರು ಸೌತೆಯನ್ನು ಪರಿಶೀಲಿಸುತ್ತಿರುವ ಅಧಿಕಾರಿಗಳ ತಂಡ.

ರೈತ ಸಂಘದ ಹೊನ್ನೂರು ಪ್ರಕಾಶ್ ಮಾತನಾಡಿ, ವಿದೇಶಿ ಕಂಪೆನಿಗಳು ರೈತರಿಗೆ ಕಳಪೆ ಗುಣಮಟ್ಟದ ಬಿತ್ತನೆ ಬೀಜ ನೀಡಿವೆ ಎಕರೆ ಸೌತೆ ಬೆಳೆಯಲು ಲಕ್ಷ ರೂ ಖರ್ಚಾಗುತ್ತದೆ. ಈಗ ಸೋಮಣ್ಣರವರಿಗೆ ನಾಲ್ಕೂವರೆಯಿಂದ 5 ಲಕ್ಷ ರೂ. ಖರ್ಚಾಗಿದ್ದರೂ ಫಸಲು ಮಾತ್ರ ಕೈಗೆ ಬಂದಿಲ್ಲ. ಅಲ್ಲದೆ ಕಂಪನಿಯ ಮುಖ್ಯಸ್ಥರನ್ನು ಸಂಪರ್ಕಿಸಲು ಸಾಧ್ಯವೇ ಆಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೊದಲಿಗೆ ಕಾನೂನು ಹೋರಾಟ ಮಾಡಲು ನಿರ್ಧರಿಸಿದ್ದೇವೆ. ನ್ಯಾಯ ಸಿಗದಿದ್ದರೆ ಇದರ ವಿರುದ್ಧ ಹೋರಾಟ ನಡೆಸಲಾಗುವುದು. ಈ ಬಗ್ಗೆ ತೋಟಗಾರಿಕಾ ಇಲಾಖೆಯವರಿಗೆ ದೂರು ನೀಡಲಾಗಿದೆ ತೋಟಗಾರಿಕೆ ಸಹಾಯಕ ನಿರ್ದೇಶಕ ರಾಜು, ಅಧಿಕಾರಿ ಶಿವರಂಜನಿ ಇತರರು ಉಪಸ್ಥಿತರಿದ್ದರು.

ಸಹೋದರನ ಮಗನನ್ನು ಕೊಂದವನಿಗೆ ಜೀವಾವಧಿ ಶಿಕ್ಷೆ



ರವಿ

ಕೊಳ್ಳೇಗಾಲ: ಜಮೀನು ವಿಚಾರವಾಗಿ ಸಹೋದರನ ಮಗನನ್ನು ಹತ್ಯೆ ಮಾಡಿದ್ದ ವ್ಯಕ್ತಿಗೆ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಹನೂರು ತಾಲೂಕು, ಜಿ.ಕೆ. ಹೊಸೂರು ಗ್ರಾಮದ ರವಿಗೆ ಶಿಕ್ಷೆ ವಿಧಿಸಿರುವ ನ್ಯಾಯಾಲಯ, ಪ್ರಕರಣದ ಇತರೆ ಐವರು ಆರೋಪಿಗಳನ್ನು ಬಿಡುಗಡೆಗೊಳಿಸಿದೆ.

ಪಿತ್ರಾರ್ಜಿತ ಜಮೀನಿನ ಭಾಗಾಂಶದ ವಿಚಾರದಲ್ಲಿ ರವಿ ಹಾಗೂ ಸಹೋದರನ ಕುಟುಂಬದ ನಡುವೆ ತಕರಾರಿತ್ತು. ಈ ಹಿನ್ನೆಲೆಯಲ್ಲಿ ರವಿಯೇ ಸರ್ವೆ ಮಾಡಿಸಿದ್ದ. ಸರ್ವೆ ವೇಳೆ ಗಡಿ ಗುರುತುಗಳನ್ನು ಎರಡೂ ಕುಟುಂಬಗಳಿಗೆ ತೋರಿಸಲಾಗಿತ್ತು. ಆದರೆ ಗಡಿ ಗುರುತು ಒಪ್ಪದ ರವಿ, ಜಮೀನು ಒತ್ತುವರಿ ಮಾಡಿಕೊಂಡಿದ್ದ. 2022ರ ಮಾರ್ಚ್ 21ರಂದು ಸಂಜೆ ರವಿ ಜಮೀನು ಉಳುಮೆ ಮಾಡಿಸುವಾಗ ಅಲ್ಲಿಗೆ ಸಹೋದರನ ಮಗ ಮನೋಜ್ ತನ್ನ ತಾಯಿ ಚಿಕ್ಕಮಣಿ ಜೊತೆಗೆ ಹೋಗಿದ್ದ. ಆಗ ರವಿ, ಮನೋಜನ ಕುತ್ತಿಗೆಪಟ್ಟಿ ಹಿಡಿದು ಎಳೆದಾಡಿ, ಅಲ್ಲೇ ಬಿದ್ದಿದ್ದ ಗೂಟದ ದೊಣ್ಣೆಯಿಂದ ಆತನ ತಲೆಗೆ ಮೂರ್ನಾಲ್ಕು ಬಾರಿ ಹೊಡೆದಿದ್ದ. ತೀವ್ರ ಹಲ್ಲೆಯಿಂದ ರಕ್ತಸಿಕ್ತವಾಗಿ ಪ್ರಜ್ಞೆತಪ್ಪಿ ಬಿದ್ದಿದ್ದ ಮನೋಜ್‌ನನ್ನು ಹೋಲಿಕ್ರಾಸ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆತ ಅಂದು ರಾತ್ರಿ ಮೃತಪಟ್ಟ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಹನೂರು ಠಾಣೆಯ ಅಂದಿನ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶ ಟಿ.ಸಿ.ಶ್ರೀಕಾಂತ್ ಅವರು, ರವಿ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ಹಾಗೂ 5 ಸಾವಿರ ರೂ. ದಂಡ ವಿಧಿಸಿ, ಇಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಪಿ.ಮಂಜುನಾಥ್ ಹಾಗೂ ಸಿ.ಬಿ. ಗಿರೀಶ್ ವಾದ ಮಂಡಿಸಿದ್ದರು.

ಸತ್ತೇಗಾಲ ಬೈಪಾಸ್ ರಸ್ತೆಯಲ್ಲಿ ಸವಾರರ ಸುರಕ್ಷತೆಗೆ ಆಗ್ರಹಿಸಿ ಪ್ರತಿಭಟನೆಗೆ ತೀರ್ಮಾನ



ಸತ್ತೇಗಾಲ ಬೈಪಾಸ್ ರಸ್ತೆಯಲ್ಲಿ ಜಿಲ್ಲಾ ಡಳಿತದ ನಿರ್ಲಕ್ಷ್ಯ ವಿರೋಧಿಸಿ ಸುರಕ್ಷತೆ ಇಲ್ಲದ ಕಾರಣ ಅಪಘಾತ, ಸಾವು, ನೋವಿನ ಕುರಿತು ಸತ್ತೇಗಾಲ ಜಿಪಂ ವ್ಯಾಪ್ತಿಯ ಮುಖಂಡರು, ಗ್ರಾಮಸ್ಥರು ಸಭೆ ಸೇರಿ 4 ರಂದು ಪ್ರತಿಭಟನೆ ನಡೆಸಲು ನಿರ್ಣಯ ಕೈಗೊಂಡರು. ರಾಜಶೇಖರ್, ವರ್ಮ, ಬಸವಣ್ಣ, ಮಾದೇಗೌಡ, ಅರುಣ್ ಇನ್ನಿತರಿದ್ದರು.

ಕೊಳ್ಳೇಗಾಲ: ತಾಲೂಕಿನ ಸತ್ತೇಗಾಲ ಗ್ರಾಮದ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯಲ್ಲಿ ಸಾವು–ನೋವುಗಳು ಸಂಭವಿಸುತ್ತಿದ್ದರೂ ಜನಪ್ರತಿನಿಧಿಗಳು ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಜು.4 ರಂದು ರಸ್ತೆಚಳವಳಿ ಹಮ್ಮಿಕೊಳ್ಳಲು ಸಭೆ ತೀರ್ಮಾನಿಸಿದೆ.

ತಾಲೂಕಿನ ಸತ್ತೇಗಾಲ ಮತ್ತು ಸತ್ತೇಗಾಲ ಹ್ಯಾಂಡ್‌ಪೋಸ್ಟ್ ಹೊರವಲಯದ ಹೆದ್ದಾರಿಯ ಬೈಪಾಸ್ ರಸ್ತೆಯ ಮೂಲಕ ರಸ್ತೆ ಸಾರಿಗೆ ಬಸ್ಸುಗಳು ತೆರಳುತ್ತಿದ್ದು, ಗ್ರಾಮಕ್ಕೆ ಬಸ್‌ಗಳು ಹೋಗದೆ ಪ್ರಯಾಣಿಕರು ಪರಿತಪಿಸುತ್ತಿದ್ದಾರೆ. ಬೈಪಾಸ್ ರಸ್ತೆಯಲ್ಲಿ ವಾಹನಗಳ ಚಾಲಕರು ಅತೀ ವೇಗವಾಗಿ ಚಾಲನೆ ಮಾಡುವುದರಿಂದ ಅಪಘಾತಗಳು ಸಂಭವಿಸುತ್ತಿದ್ದು, ಹ್ಯಾಂಡ್‌ಪೋಸ್ಟ್ ಬೈಪಾಸ್ ಗ್ರಾಮದ ರೈತರು ಜಮೀನುಗಳಿಗೆ ತೊಂದರೆಯಾಗುತ್ತಿದೆ.

ಸತ್ತೇಗಾಲದಿಂದ ಉಗನಿಯಾ ಗ್ರಾಮಕ್ಕೆ ತೆರಳುವ ರಸ್ತೆ ಕೊಳ್ಳೇಗಾಲ–ಸತ್ತೇಗಾಲ ಈ ರಸ್ತೆಗಳ ಮೇಲುಸೇತುವೆ ನಿರ್ಮಿಸಿ ಅಪಘಾತಗಳನ್ನು ತಡೆಯಿರಿ ಎಂದು ಜಿಲ್ಲಾಧಿಕಾರಿ ಉಪವಿಭಾಗಾಧಿಕಾರಿಗಳು ಹಾಗೂ ಡಿವೈಎಸ್‌ಪಿ, ಗ್ರಾಮಾಂತರ ಸಬ್ ಇನ್ಸ್‌ಪೆಕ್ಟರ್, ಸಾರಿಗೆ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಪತ್ರ ಸಲ್ಲಿಸಿದ್ದರೂ ಕ್ರಮಕೊಂಡಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿ ಜಿಲ್ಲಾಡಳಿತದ ನಿರ್ಲಕ್ಷ್ಯ ಖಂಡಿಸಿ ಜು.4ರಂದು ಉಗ್ರ ಪ್ರತಿಭಟನೆ ನಡೆಸಲು ಮುಖಂಡರು ಒಕ್ಕೊರಲ ನಿರ್ಣಯ ಕೈಗೊಂಡರು.

ಮುಖಂಡ ಮುಖಂಡ ವರ್ಮ, ಯುವ ಮುಖಂಡ ಅವಿನಾಶ್, ಸತ್ತೇಗಾಲ ರಾಜಶೇಖರ್ ಮಾತನಾಡಿದರು. ಗ್ರಾಪಂ. ಅಧ್ಯಕ್ಷ ಮಲ್ಲೇಶ್, ಸದಸ್ಯರಾದ ಗೋವಿಂದ, ನವೀನ್‌ಕುಮಾರ್, ಆರೋಗ್ಯಸ್ವಾಮಿ, ಡಾ.ಬಿ.ಆರ್.ಅಂಬೇಡ್ಕರ್ ಸತ್ಯಾದ್ರಿ ಯುವಕ ಸಂಘದ ಅಧ್ಯಕ್ಷ ಅವಿನಾಶ್, ಎಪಿ ಎಂಸಿ ಮಾಜಿ ಅಧ್ಯಕ್ಷ ಮಾದೇಗೌಡ, ತಾಪಂ ಮಾಜಿ ಸದಸ್ಯ ಅರುಣ್, ರೈತ ಸಂಘದ ಭಾಸ್ಕರ್, ಮಾದಪ್ಪ, ಕುಮಾರ್, ಚಾರ್ಲಿಸ್, ಮುಖಂಡರಾದ ಹ್ಯಾಂಡ್ ಪೋಸ್ಟ್ ಮಾದೇವು, ರವಿಶಂಕರ್, ಟಿ.ಮಹದೇವಯ್ಯ, ನಾರಾಯಣಸ್ವಾಮಿ, ಕಾಂತರಾಜು, ನಂಜುಂಡಮೂರ್ತಿ, ಗುಲ್ಲಾ ಶಿವಣ್ಣೇಗೌಡ, ಬಸವಣ್ಣ, ಸಿದ್ದರಾಜು, ಎಡಕುರಿಯಾ ಬಸವರಾಜು, ನಂಜುಂಡ, ಶಾಂತರಾಜು, ಶಿವಲಿಂಗ, ಸತ್ತೇಗಾಲ ರಾಜಶೇಖರ್, ಸಂಜು, ಶಾಮಿಯಾನ ನಾಗರಾಜು, ಬಾಟಲ್‌ನಾಗರಾಜು, ಶಿವನಸಮುದ್ರದ ಚಿಕರಾವಳಯ್ಯ, ಕಾಳಯ್ಯ, ಚಂದ್ರಶೇಖರ್, ನಾಗೇಂದ್ರ, ಪುಟ್ಟರಾಜ ಇನ್ನಿತರಿದ್ದರು


ಹಸಿರು ನಮ್ಮ ಉಸಿರು

ಕೆಂಪೇಗೌಡರನ್ನು ಸಮುದಾಯದ ಪ್ರತಿನಿಧಿಯಾಗಿ ಗುರುತಿಸುವುದು ಸರಿಯಲ್ಲ : ಮಹೇಶ್

ಗುಂಡ್ಲುಪೇಟೆ, ಜೂ–28 (ಸೋಮ್.ಜಿ)– ಜಾತ್ಯತೀತ ತಳಹದಿಯ ಮೇಲೆ ಆಡಳಿತ ನಡೆಸಿದ ಧೀಮಂತ ನಾಯಕ ಕೆಂಪೇಗೌಡರನ್ನು, ಕೇವಲ ಒಂದು ಸಮುದಾಯದ ಪ್ರತಿನಿಧಿಯಾಗಿ ಗುರುತಿಸುವುದು ಸರಿಯಲ್ಲ ಎಂದು ಎಲ್‌ಐಸಿಯ ಅಭಿವೃದ್ಧಿ ಅಧಿಕಾರಿ ಜಿ.ಎನ್.ಮಹೇಶ್ ಅಭಿಪ್ರಾಯ ಪಟ್ಟಿದ್ದಾರೆ.

ತಾಲೂಕು ಆಡಳಿತದ ವತಿಯಿಂದ ತಾಲೂಕು ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 516ನೇ ಕೆಂಪೇಗೌಡರ ಜಯಂತಿ ಮಹೋತ್ಸವದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಫಲವಾಗಿ ಇಂದು ಬೆಂಗಳೂರು ಅಂತರರಾಷ್ಟ್ರೀಯ ಭೂಪಟದಲ್ಲಿ ಪ್ರಮುಖಸ್ಥಾನ ಪಡೆದಿದೆ. ಇಂತಹ ಮಹಾನ್ ನಾಯಕನನ್ನು ಕೇವಲ ಒಂದು ಸಮುದಾಯದ ಪ್ರತಿನಿಧಿ ಯಾಗಿಸುವುದು ಸರಿಯಲ್ಲ ಎಂದರು.

ತಹಶೀಲ್ದಾರ್ ರಮೇಶ್‌ಬಾಬು, ಪುರಸಭೆ ಅಧ್ಯಕ್ಷ ಮಧುಸೂಧನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಒಕ್ಕಲಿಗರ ಸಂಘದ ಅಧ್ಯಕ್ಷ ಜಯ ರಾಮು, ಪಿ. ಸುರೇಂದ್ರ, ರವಿ ಮತ್ತು ಪದಾಧಿಕಾರಿಗಳು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಾರ್ಮಿಕ ಇಲಾಖೆ ನಿರೀಕ್ಷಕ ನಾರಾಯಣಸ್ವಾಮಿ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರಾದ ಬ್ರಹ್ಮಾನಂದ್, ಬೋರೇಗೌಡ, ಮುನೀರ್‌ಪಾಷ ಇತರರು ಇದ್ದರು.




ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ರಮೇಶ್‌ಬಾಬು, ಎಲ್‌ಐಸಿಯ ಅಭಿವೃದ್ಧಿ ಅಧಿಕಾರಿ ಜಿ.ಎನ್.ಮಹೇಶ್, ಪುರಸಭೆ ಅಧ್ಯಕ್ಷ ಮಧುಸೂದನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಒಕ್ಕಲಿಗರ ಸಂಘದ ಅಧ್ಯಕ್ಷ ಜಯರಾಮು, ಪಿ.ಸುರೇಂದ್ರ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಪುಟ 9
ಮೈಸೂರು ಮಿತ್ರ
ಭಾನುವಾರ 29–06–2025

ಡಾ. ವಸಂತ ರಾಜು ಎನ್.
ಪ್ರಾಂಶುಪಾಲರು ಮತ್ತು ಗ್ರಂಥಪಾಲಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ತಲಕಾಡು, ಮೊ.ನಂ.9916882066

ವಜ್ರ ಮಹೋತ್ಸವ ಸಂಭ್ರಮದಲ್ಲಿ ಮೈಸೂರು ವಿವಿ ಗ್ರಂಥಾಲಯ ವಿಭಾಗ



ಮೈಸೂರು ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ ವಜ್ರ ಮಹೋತ್ಸವವನ್ನು ಈ ವರ್ಷ ಆಚರಿಸಿಕೊಳ್ಳುತ್ತಿರುವುದು ನಿಜಕ್ಕೂ ಶ್ಲಾಘನೀಯ. 1965ರಲ್ಲಿ ಪ್ರಾರಂಭವಾದ ಗ್ರಂಥಾಲಯ ವಿಭಾಗ ಅನೇಕ ಮಜಲುಗಳನ್ನು ದಾಟಿ 60 ವರ್ಷವನ್ನು ಪೂರೈಸಿ ಮುನ್ನಡೆಯುತ್ತಿರುವುದು ಮೈಸೂರು ವಿವಿ ಮತ್ತು ವಿಭಾಗದ ಹಿರಿಯ–ಕಿರಿಯ ಅಧ್ಯಾಪಕರು, ವಿದ್ಯಾರ್ಥಿಗಳು ಸಂಭ್ರಮಿಸಬೇಕಾದ ಸಂಗತಿ. ಗ್ರಂಥಾಲಯ ವಿಭಾಗದ ಈ ಬೆಳವಣಿಗೆ ಮತ್ತು ಸಾಧನೆಯ ಹಿಂದೆ ಅನೇಕ ಪ್ರಾತಃಸ್ಮರಣೀಯರ ಪಾತ್ರ, ಕೊಡುಗೆ ಇದೆ.

ಪ್ರೊ. ಪಿ.ಕೆ. ಪಾಟೀಲ್ ಮತ್ತು ಪ್ರೊ. ಕೆ.ಎಸ್. ದೇಶಪಾಂಡೆಯವರ ಒತ್ತಾಸೆಯಿಂದ 1965 ಜೂನ್ 24ರಂದು ಗ್ರಂಥಾಲಯ ವಿಭಾಗ ಮೈಸೂರು ವಿವಿಯಲ್ಲಿ ಪ್ರಾರಂಭವಾಯಿತು. ಪ್ರೊ. ಪಿ.ಕೆ. ಪಾಟೀಲ್ ರವರು ಮುಂದೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿದರು. ಪ್ರೊ. ಕೆ.ಎಸ್. ದೇಶಪಾಂಡೆಯವರು ಧಾರವಾಡದ ಕರ್ನಾಟಕ ವಿವಿಯ ಗ್ರಂಥಾಲಯದ ನೇತೃತ್ವ ವಹಿಸಿ ಗ್ರಂಥಾಲಯ ಕ್ಷೇತ್ರದ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸಿದರು.

ಇವರ ಪ್ರಯತ್ನದಿಂದ 1965ನೇ ಇಸವಿಯಲ್ಲಿ ಕೇವಲ 20 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಗ್ರಂಥಾಲಯ ವಿಭಾಗ ಅಂದು ಸ್ನಾತಕ ಪದವಿಗೆ ಮಾತ್ರ ಸೀಮಿತವಾಗಿತ್ತು. ಕರ್ನಾಟಕದಲ್ಲಿ ಮೊದಲ ಬಾರಿಗೆ ಮೈಸೂರು ವಿವಿಯ ಗ್ರಂಥಾಲಯ ವಿಭಾಗ 1971ರಲ್ಲಿ ಗ್ರಂಥಾಲಯ ವಿಜ್ಞಾನ ಸ್ನಾತಕೋತ್ತರ ಪದವಿ ತರಗತಿಗಳನ್ನು ಪ್ರಾರಂಭಿಸಿತು. ಇದು ಮುಂದೆ ದೇಶದ ಕೆಲವೇ ವಿಶ್ವವಿದ್ಯಾಲಯಗಳಲ್ಲಿ ಲಭ್ಯವಿದ್ದ ಪಿಹೆಚ್.ಡಿ ಸಂಶೋಧನಾ ಘಟಕವನ್ನು ಮೈಸೂರು ವಿವಿಯಲ್ಲಿ ಸ್ಥಾಪಿಸಲು ಪ್ರೇರಣೆಯಾಯಿತು.

ಗ್ರಂಥಾಲಯ ಕ್ಷೇತ್ರದಲ್ಲಿನ ನಿರಂತರ ಬೆಳವಣಿಗೆಯನ್ನು ಗಮನಿಸಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಎಂದು ಗ್ರಂಥಾಲಯ ವಿಜ್ಞಾನ ವಿಭಾಗವನ್ನು ಮರು ನಾಮಕರಣ ಮಾಡಲಾಯಿತು. 1992ರಲ್ಲಿ ಎರಡು ವರ್ಷದ ಸಂಯೋಜಿತ ಸ್ನಾತಕೋತ್ತರ ಪದವಿಯನ್ನು ಆರಂಭಿಸಿತು. ಇದು ಮೈಸೂರು ವಿವಿಯ ಗ್ರಂಥಾಲಯ ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿನ ಮಹತ್ವದ ಬದಲಾವಣೆಗೆ ಮತ್ತು ಉತ್ತಮ ಸಂಶೋಧನಾ ಮತ್ತು ಪಠ್ಯಕ್ರಮವನ್ನು ರೂಪಿಸಲು ಸಹಾಯಕವಾಯಿತು. ಸಾವಿರಾರು ವಿದ್ಯಾರ್ಥಿಗಳಿಗೆ ಬದುಕು ರೂಪಿಸಿರುವ ಇಂತಹ ಮಹತ್ತರ ಘಟ್ಟಗಳನ್ನು ದಾಟಿ ರಜತ ಮತ್ತು ಸುವರ್ಣ ಮಹೋತ್ಸವವನ್ನು ಪೂರೈಸಿರುವ ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಈಗ ವಜ್ರ ಮಹೋತ್ಸವದ ಹೊಸ್ತಿಲಲ್ಲಿದೆ. ಈ ಸಂದರ್ಭದಲ್ಲಿ ವಿಭಾಗದ ಮೈಲುಗಲ್ಲುಗಳನ್ನು ನೆನೆಯುವ ಸಂತಸದ ಸಂದರ್ಭವಿದು.

ಕುಲಪತಿಗಳನ್ನು ಕೊಡುಗೆ ನೀಡಿದ ವಿಭಾಗ



ವಿ.ಜಿ.ತಳವಾರ್

ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಅಧ್ಯಾಪಕರು ಮತ್ತು ಇಲ್ಲಿ ಪದವಿ ಪಡೆದ ಅನೇಕ ಮಹನೀಯರು ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಮತ್ತು ದೇಶದ ಇತರ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಮುಖ್ಯವಾಗಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದ ಪ್ರೊ. ವಿ.ಜಿ. ತಳವಾರ್, ಪ್ರತಿಷ್ಠಿತ ಮೈಸೂರು ವಿವಿಯ ಕುಲಸಚಿವರಾಗಿ ನಂತರ 2008ರಲ್ಲಿ ಇದೇ ವಿವಿಯ ಕುಲಪತಿಗಳಾಗಿ ಆಯ್ಕೆಯಾದರು. ದೇಶದಲ್ಲೇ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶೈಕ್ಷಣಿಕ ವಲಯದಿಂದ ವಿಶ್ವವಿದ್ಯಾನಿಲಯ ಒಂದರ ಕುಲಪತಿಗಳಾಗಿ ಆಯ್ಕೆಯಾದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪ್ರೊ. ವಿ.ಜಿ.ತಳವಾರ್ ಪಾತ್ರರಾದರು. ಇವರ ಅವಧಿಯಲ್ಲೇ ಭಾರತ ಸರ್ಕಾರ ಮೈಸೂರು ವಿವಿಯನ್ನು ಉತ್ಕೃಷ್ಟ ಶೈಕ್ಷಣಿಕ ಸಂಸ್ಥೆ ಎಂದು ಗುರುತಿಸಿ ವಿವಿಯಲ್ಲಿ ಬಹುಶಿಸ್ತಿನ ಅಧ್ಯಯನಗಳನ್ನು ಉತ್ತೇಜಿಸಲು ನೂರು ಕೋಟಿ ಅನುದಾನವನ್ನು ನೀಡಿದ್ದು ವಿಶೇಷ.

ಬೆಂಗಳೂರು ವಿಶ್ವವಿದ್ಯಾಲಯವನ್ನು ಮೂರು ವಿವಿಗಳಾಗಿ ಪರಿವರ್ತಿಸಿದ ಸಂದರ್ಭದಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾಗಿದ್ದ ಪ್ರೊ. ಟಿ.ಡಿ. ಕೆಂಪರಾಜು, ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಹಿರಿಯ ವಿದ್ಯಾರ್ಥಿ ಎಂಬುದು ಮತ್ತೊಂದು ಹೆಮ್ಮೆಯ ಸಂಗತಿ. ಇದಲ್ಲದೇ ಬೆಂಗಳೂರಿನ ರೇವಾ ಖಾಸಗಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಮತ್ತು ಛತ್ತೀಸಘಡ್‌ನ ಕಳಿಂಗಾ ಖಾಸಗಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ವಿಭಾಗದ ಹಳೆಯ ವಿದ್ಯಾರ್ಥಿಗಳಾದ ಡಾ. ಧನಂಜಯ ಮತ್ತು ಡಾ. ಎಸ್.ಚಂದ್ರಪ್ಪ ಕರ್ತವ್ಯ ನಿರ್ವಹಿಸಿದ್ದಾರೆ. ಇನ್ನೂ ಅನೇಕ ಮಹನೀಯರು ದೇಶದ ಪ್ರತಿಷ್ಠಿತ ಸಂಸ್ಥೆಗಳ ಅತ್ಯುನ್ನತ ಹುದ್ದೆಗಳನ್ನು ಅಲಂಕರಿಸಿ ವಿಭಾಗಕ್ಕೆ ಕೀರ್ತಿ ತಂದಿದ್ದಾರೆ.

ಡಾ. ಪಿ.ವೈ. ರಾಜೇಂದ್ರ ಕುಮಾರ್, ಕೊಲ್ಕತ್ತಾದಲ್ಲಿರುವ ದೇಶದ ರಾಷ್ಟ್ರೀಯ ಗ್ರಂಥಾಲಯ ಇದರ ಮಹಾ–ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ನಮ್ಮ ದೇಶದ ಪ್ರತಿಷ್ಠಿತ ರಕ್ಷಣಾ ಸಂಶೋಧನಾ ಕೇಂದ್ರ ಡಿಆರ್‌ಡಿಓದ ಮಾಹಿತಿ ಕೇಂದ್ರದ ನಿರ್ದೇಶಕರಾಗಿದ್ದ ಡಾ. ನಾಗೇಶ್ವರ್ ರಾವ್ ಮತ್ತು ಈಗ ಯುಜಿಸಿಯ ಅಂಗ ಸಂಸ್ಥೆಯಾದ ಇನ್ಫರ್ಮೇಷನ್ ಮತ್ತು ಲೈಬ್ರರಿ ನೆಟ್ವರ್ಕ್ ಕೇಂದ್ರದ ಮುಖ್ಯಸ್ಥರಾಗಿರುವ ಡಾ. ದೇವಿಕಾ ಪಿ. ಮಾದಳ್ಳಿ ಇದೇ ವಿಭಾಗದ ಹಳೆಯ ವಿದ್ಯಾರ್ಥಿಗಳು ಎನ್ನುವುದು ಪ್ರಶಂಸನೀಯ. ಇನ್ನೂ ಅನೇಕ ಮಹನೀಯರು ದೇಶ–ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಗ್ರಂಥಾಲಯ ವಿಭಾಗಕ್ಕೆ ಹೆಸರು ತಂದಿದ್ದಾರೆ.

ಸುವರ್ಣ ಮಹೋತ್ಸವ ಆಚರಣೆ

ವಿಭಾಗವು 40 ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ 2005ರಲ್ಲಿ ಸಂಸ್ಥಾಪನಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಅಂದು ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಶಾಲಿನಿ ಅರಸ್ ನೇತೃತ್ವದಲ್ಲಿ ಇಂಟರ್ನೆಟ್‌ನ ಪ್ರಭಾವದಿಂದಾಗಿ ಮಾಹಿತಿ ಕ್ಷೇತ್ರದಲ್ಲಿನ ಕ್ಷಿಪ್ರ ಬೆಳವಣಿಗೆಯ ಹಿನ್ನೆಲೆಯಲ್ಲಿ ಮಾಹಿತಿ ವಿಜ್ಞಾನ ಶೈಕ್ಷಣಿಕ ಕ್ಷೇತ್ರ ಬದಲಾಗುತ್ತಿರುವ ಕಾಲಘಟ್ಟದಲ್ಲಿ ತನ್ನ ನೆಲೆಯನ್ನು ಹೇಗೆ ಪುನರ್ ವಿಮರ್ಶೆಗೆ ಒಳಪಡಿಸಬೇಕು ಎನ್ನುವ ಬಗ್ಗೆ ವಿಚಾರ ಗೋಷ್ಠಿಯನ್ನು ಆಯೋಜಿಸಿತ್ತು. ದೇಶದ ಅನೇಕ ಮಾಹಿತಿ ತಂತ್ರಜ್ಞಾನ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದ ತಜ್ಞರು ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ವಿಚಾರ ಮಂಥನ ನಡೆಸಿದರು. ಇದೇ ರೀತಿ ಜೂನ್ 2015ರಲ್ಲಿ ವಿಭಾಗವು 50 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಸುವರ್ಣ ಸಂಭ್ರಮಾಚರಣೆಯನ್ನು ಆಯೋಜಿಸಲಾಗಿತ್ತು. ಎರಡು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಜೊತೆಗೆ ವಿಭಾಗದ ಹಳೆಯ ವಿದ್ಯಾರ್ಥಿಗಳನ್ನು ಸೇರಿಸಿ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಆಯೋಜನೆ ಮಾಡಲಾಗಿತ್ತು. ಗ್ರಂಥಾಲಯಗಳ ಕುರಿತ ಅಭಿಯಾನ, ಸುವರ್ಣ ಉಪನ್ಯಾಸ ಮಾಲಿಕೆ, ಕ್ಯಾಂಪಸ್ ನಡಿಗೆ, ಹಳೆ ವಿದ್ಯಾರ್ಥಿಗಳ ಅನುಭವಗಳ ಸಂಪಾದಿತ ಪುಸ್ತಕಗಳ ಬಿಡುಗಡೆ ಮುಂತಾದ ಕಾರ್ಯಕ್ರಮಗಳ ಜೊತೆಗೆ ಬಹುಮುಖ್ಯವಾಗಿ ಈ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘ – ಮೈಸೂರು ಮಾಹಿತಿ & ಗ್ರಂಥಾಲಯ ವಿಜ್ಞಾನ ಹಿರಿಯ ವಿದ್ಯಾರ್ಥಿಗಳ ಸಂಘ (ಮಿಲನ್) ಎನ್ನುವ ಹೆಸರಿನಲ್ಲಿ ರಚಿಸಲಾಯಿತು.

ಪ್ರಥಮ ಡಿಜಿಟಲ್ ಗ್ರಂಥಾಲಯದ ಕೊಡುಗೆ

ದೇಶದಲ್ಲಿ ಡಿಜಿಟಲ್ ಗ್ರಂಥಾಲಯಗಳ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗ ಗಮನಾರ್ಹ ಕೆಲಸ ಮಾಡಿದ್ದು ಆ ಮೂಲಕ ದೇಶ–ವಿದೇಶಗಳ ಡಿಜಿಟಲ್ ಮಾಹಿತಿ ತಜ್ಞರ ಗಮನಸೆಳೆದಿದೆ. ಡಿಜಿಟಲ್ ಮಾಧ್ಯಮಗಳು ಮನೆಮಾತಾಗುವ ಮೊದಲೇ ಇಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲಾಗಿತ್ತು. ಪ್ರೊ. ಶಾಲಿನಿ ಅರಸ್ ನೇತೃತ್ವದಲ್ಲಿ ಅಮೇರಿಕಾದ ಫೋರ್ಡ್ ಫೌಂಡೇಷನ್ ಅನುದಾನದ ಮೂಲಕ ವಿದ್ಯಾನಿಧಿ ಡಿಜಿಟಲ್ ಲೈಬ್ರರಿಯನ್ನು ವಿಭಾಗದಲ್ಲಿ ಅಭಿವೃದ್ಧಿಪಡಿಸಲಾಯಿತು. ದೇಶದ ಅನೇಕ ವಿಶ್ವವಿದ್ಯಾಲಯಗಳಿಗೆ ಸಲ್ಲಿಕೆಯಾಗಿದ್ದ ಪಿಹೆಚ್.ಡಿ ಮಹಾ ಪ್ರಬಂಧಗಳನ್ನು ಡಿಜಿಟಲ್ ರೂಪದಲ್ಲಿ ದೊರೆಯುವಂತೆ ಈ ಯೋಜನೆ ಮೂಲಕ ರೂಪಿಸಲಾಗಿತ್ತು. ಮುಂದೆ ಈ ಡಿಜಿಟಲ್ ಗ್ರಂಥಾಲಯದ ಮಾದರಿಯಲ್ಲಿ ಯುಜಿಸಿ ಶೋಧಗಂಗಾ ಎನ್ನುವ ಪಿಹೆಚ್.ಡಿ ಮಹಾ–ಪ್ರಬಂಧಗಳ ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯವನ್ನು ಪ್ರಾರಂಭಿಸಿತು.

ವಿಭಾಗದ ಸಂಶೋಧನಾ ಕಾರ್ಯಗಳನ್ನು ಗಮನಿಸುತ್ತಿದ್ದ ಯುಜಿಸಿ ತನ್ನ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಡಿಜಿಟಲ್ ಗ್ರಂಥಾಲಯ ಕ್ಷೇತ್ರದಲ್ಲಿ ಮತ್ತಷ್ಟು ಕೆಲಸಗಳನ್ನು ಪ್ರೋತ್ಸಾಹಿಸಲು ವಿಶೇಷ ಅನುದಾನ ನೀಡಿತು. ಈ ಅನುದಾನ ಪಡೆದ ದೇಶದ ಕೆಲವೇ ಅಧ್ಯಯನ ವಿಭಾಗಗಳಲ್ಲಿ ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಕೂಡ ಒಂದು ಎನ್ನುವುದು ವಿಶೇಷ.

ವಜ್ರ ಮಹೋತ್ಸವದ ಸಂಭ್ರಮ

ಈಗ 60 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವು, ಈಗ ವಿಭಾಗದ ಮುಖ್ಯಸ್ಥರಾಗಿರುವ ಪ್ರೊ. ಚಂದ್ರಶೇಖರ, ಡಾ. ಎನ್.ಎಸ್. ಹರಿನಾರಾಯಣ ಮತ್ತು ಡಾ. ಅದಿತ್ಯ ಕುಮಾರಿ ಮತ್ತು ಅತಿಥಿ ಉಪನ್ಯಾಸಕರ ಕ್ರಿಯಾಶೀಲತೆ ಹಾಗೂ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘ–ಮಿಲನ್ ಸಹಯೋಗದೊಂದಿಗೆ ವರ್ಷಪೂರ್ತಿ ಅನೇಕ ವಿಶಿಷ್ಟ ಕಾರ್ಯಕ್ರಮಗಳ ಮೂಲಕ ವಜ್ರ ಮಹೋತ್ಸವವನ್ನು ಆಚರಿಸಲು ಸಜ್ಜಾಗುತ್ತಿದೆ. ಇದರ ಅಂಗವಾಗಿ ನಿನ್ನೆ (ಶನಿವಾರ) ಮೈಸೂರು ವಿವಿಯ ವಿಜ್ಞಾನ ಭವನದಲ್ಲಿ 'ಟರ್ನಿಂಗ್ ಪೇಜಸ್ ಆಂಡ್ ಬಿಯಾಂಡ್: ರೀಕ್ಯಾಲಿಬ್ರೇಟಿಂಗ್ ಲೇಬ್ರರಿಯನ್ಷಿಪ್ ಫರ್ ಎ ಕನೆಕ್ಟೆಡ್ ಅಂಡ್ ಕ್ರಿಯೆಟೀವ್ ವರ್ಲ್ಡ್' ವಿಷಯದ ಮೇಲೆ ವಿಚಾರಗೋಷ್ಠಿಯನ್ನು ಆಯೋಜನೆ ಮಾಡಿತ್ತು. ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ.ಸಂಗಮೇಶ್ವರ ವಿಶೇಷ ಉಪನ್ಯಾಸದೊಂದಿಗೆ ಅಧಿಕೃತವಾಗಿ ಚಾಲನೆ ಪಡೆದಿದೆ.

ಉಪನ್ಯಾಸ ಮಾಲಿಕೆ, ಚರ್ಚಾಗೋಷ್ಠಿ

ಮೈಸೂರು ವಿವಿಯ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವು ಮಾಹಿತಿ ತಂತ್ರಜ್ಞಾನ ಮತ್ತು ಇಂಟರ್ನೆಟ್‌ನ ಪ್ರಭಾವದಿಂದ ಮಾಹಿತಿ ಕ್ಷೇತ್ರದಲ್ಲಾಗುತ್ತಿರುವ ಬೆಳವಣಿಗೆಗಳನ್ನು ಕಾಲ–ಕಾಲಕ್ಕೆ ವಿಚಾರಗೋಷ್ಠಿಗಳು, ದತ್ತಿ ಉಪನ್ಯಾಸ ಮಾಲಿಕೆಗಳು, ಸಂವಾದಗಳ ಮೂಲಕ ಅವುಗಳಿಗೆ ಮುಖಾಮುಖಿಯಾಗುತ್ತಿರುವುದು ಇದರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

ವಿಭಾಗದ ಹಳೆಯ ವಿದ್ಯಾರ್ಥಿ ಮತ್ತು ಬೆಂಗಳೂರಿನ ಇನ್ಫರ್ಮಟಿಕ್ಸ್ ಇಂಡಿಯಾ ಲಿಮಿಟೆಡ್‌ನ ಮುಖ್ಯಸ್ಥರಾದ ಎನ್.ವಿ. ಸತ್ಯನಾರಾಯಣರವರ ಒತ್ತಾಸೆಯಿಂದಾಗಿ 2001ರಿಂದ ಇನ್ಫರ್ಮೇಟಿಕ್ಸ್ ದತ್ತಿ ಉಪನ್ಯಾಸ ಮಾಲಿಕೆಯನ್ನು ಆಯೋಜಿಸಿಕೊಂಡು ಬರುತ್ತಿರುವುದಕ್ಕೆ ಒಂದು ಉದಾಹರಣೆಯಷ್ಟೇ. ಡಿಜಿಟಲ್ ಗ್ರಂಥಾಲಯ ಕ್ಷೇತ್ರದಲ್ಲಿ ಸಂಶೋಧನೆಯನ್ನು ಮನಗಂಡು ಅವರು ದತ್ತಿ ಉಪನ್ಯಾಸ ಮಾಲಿಕೆಯನ್ನು ವಿಭಾಗದ ಜೊತೆಗೂಡಿ ಪ್ರಾರಂಭಿಸಿದರು. ಈ ದತ್ತಿ ಉಪನ್ಯಾಸ ಮಾಲಿಕೆ ದೇಶ–ವಿದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ–ಗ್ರಂಥಾಲಯ–ಡಿಜಿಟಲ್ ಮಾಹಿತಿ ಕ್ಷೇತ್ರಗಳಲ್ಲಿ ಗಮನಾರ್ಹ ಸಂಶೋಧನೆ ಮಾಡಿದ ಅನೇಕ ವಿದ್ವಾಂಸರ ಉಪನ್ಯಾಸಗಳನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಇತ್ತೀಚೆಗೆ ಅಂದರೆ ಕಳೆದ ತಿಂಗಳು ಅದರ 18ನೇ ದತ್ತಿ ಉಪನ್ಯಾಸ ಮಾಲಿಕೆಯನ್ನು ಆಯೋಜಿಸಲಾಗಿತ್ತು. ಈ ಉಪನ್ಯಾಸ ಮಾಲಿಕೆಯಲ್ಲಿ ಬೆಂಗಳೂರಿನ ಐಐಐಟಿ–ಬಿನ ಪ್ರಾಧ್ಯಾಪಕರಾದ ಡಾ. ಶ್ರೀನಾಥ ಶ್ರೀನಿವಾಸ 'ಕೃತಕ ಬುದ್ಧಿಮತ್ತೆ ಮತ್ತು ಕಥೆ ಹೇಳುವಿಕೆ' ಕುರಿತು ಮಾತನಾಡಿದರು. ಇದಲ್ಲದೇ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುವರ್ಣ ಸಂಭ್ರಮ ಉಪನ್ಯಾಸ ಮಾಲಿಕೆ ಸೇರಿದಂತೆ ಅನೇಕ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ವಿಭಾಗವು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

ಕ್ರಿಯಾತ್ಮಕ ಹಿರಿಯ ವಿದ್ಯಾರ್ಥಿಗಳ ಸಂಘ

2015ರಲ್ಲಿ ವಿಭಾಗದ ಸುವರ್ಣ ವರ್ಷದ ಆಚರಣೆಯ ಸಂದರ್ಭದಲ್ಲಿ ಸ್ಥಾಪಿಸಲಾದ ಹಿರಿಯ ವಿದ್ಯಾರ್ಥಿಗಳ ಸಂಘ ವಿಭಾಗದ ಜೊತೆಗೂಡಿ ತುಂಬಾ ರಚನಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ಅಂದರೆ 2023–2025ರ ಅವಧಿಯಲ್ಲಿ ಡಾ. ಮೀರಾ ಅಧ್ಯಕ್ಷತೆಯಲ್ಲಿ ಕಾರ್ಯೋನ್ಮುಖವಾಗಿದ್ದು ಅವರ ಅವಧಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲಾಗಿದೆ. ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಗ್ರಂಥಾಲಯ ಮತ್ತು ಓದಿನ ಸಂಸ್ಕೃತಿಯನ್ನು ಬೆಳೆಸಲು ಮೈಸೂರು ಸೇರಿದಂತೆ ರಾಜ್ಯದ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಅವುಗಳ ಜೊತೆಗೂಡಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಹಿನ್ನೆಲೆಯಲ್ಲಿ ಗ್ರಂಥಾಲಯಗಳ ಮಹತ್ವದ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸುವ ಅನೇಕ ಕಾರ್ಯಕ್ರಮಗಳನ್ನು, ಉಪನ್ಯಾಸಗಳನ್ನು ನಡೆಸಲಾಯಿತು. ಗ್ರಂಥಾಲಯ ಮತ್ತು ಮಾಹಿತಿ ಕ್ಷೇತ್ರದ ಮೇಲೆ ಕೃತಕ ಬುದ್ಧಿಮತ್ತೆಯ ಪ್ರಭಾವ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಳೆದ ವರ್ಷ ಮಿಲನ್ ಮತ್ತು ಗ್ರಂಥಾಲಯ ವಿಭಾಗದ ಸಂಯೋಜನೆಯಲ್ಲಿ 'ಶೈಕ್ಷಣಿಕ ಪ್ರಕಟಣೆ, ಕೃತಕ ಬುದ್ಧಿಮತ್ತೆ ಮತ್ತು ಗ್ರಂಥಾಲಯ' ವಿಷಯದ ಮೇಲೆ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಕೃತಕ ಬುದ್ಧಿಮತ್ತೆ ಮೇಲೆ ಕೆಲಸ ಮಾಡುತ್ತಿರುವ ಶೈಕ್ಷಣಿಕ ಮತ್ತು ತಂತ್ರಜ್ಞಾನ ಕ್ಷೇತ್ರದ ತಜ್ಞರನ್ನು ಆಹ್ವಾನಿಸಿ ಎರಡು ದಿನಗಳು ಈ ವಿಷಯದ ಮೇಲೆ ವಿದ್ವತ್ ಉಪನ್ಯಾಸಗಳನ್ನು ಆಯೋಜಿಸಿತು. ಈ ಕಾರ್ಯಕ್ರಮವನ್ನು ಮೈಸೂರು ವಿವಿಯ ಕುಲಪತಿ ಪ್ರೊ ಲೋಕನಾಥ್ ಉದ್ಘಾಟಿಸಿದ್ದು ವಿಶೇಷವಾಗಿತ್ತು.

ಮಕ್ಕಳ ಚಿತ್ರಕಥೆ: ಮೊಂಡುತನ ಒಳ್ಳೆಯದಲ್ಲ...


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಉತ್ತರ ಧ್ರುವ ಯಾವಾಗಲೂ ಹಿಮದಿಂದ ಕೂಡಿರುತ್ತದೆ. ಹಾಗಾಗಿ ಚಳಿಗಾಲದಲ್ಲಿ ಇಲ್ಲಿರುವ ಪಕ್ಷಿಗಳು ದಕ್ಷಿಣದತ್ತ ವಲಸೆ ಹೋಗಿ, ಜೀವ ಉಳಿಸಿಕೊಂಡು ಮತ್ತೆ ಮರಳುತ್ತವೆ. ಹೀಗೆ ವಲಸೆ ಹೋಗುವ ಪಕ್ಷಿಗಳು ಆಹಾರ ಮತ್ತು ಉತ್ತಮ ಹವಾಗುಣವಿರುವ ಜಾಗವನ್ನೇ ಆಯ್ಕೆ ಮಾಡಿಕೊಂಡಿರುತ್ತವೆ.




ಹಾಗಾಗಿ ಚಳಿಗಾಲದಲ್ಲಿ ಎಲ್ಲಾ ಪಕ್ಷಿಗಳು ವಲಸೆ ಹೋಗಲು ನಿರ್ಧರಿಸಿದವು. ಆದರೆ ಒಂದು ಪಕ್ಷಿ ಅದಕ್ಕೆ ಒಪ್ಪಲಿಲ್ಲ ನಾನು ಇಲ್ಲೇ ಇರುವುದಾಗಿ ಮೊಂಡುತನ ಪ್ರದರ್ಶಿಸಿತು. ಉಳಿದ ಪಕ್ಷಿಗಳು ಅದಕ್ಕೆ ಪರಿಸ್ಥಿತಿಯನ್ನ ಮನವರಿಕೆ ಮಾಡಿಕೊಡುವ ಪ್ರಯತ್ನವನ್ನ ಸಾಕಷ್ಟು ಮಾಡಿ ಕೊನೆಗೆ ಅದನ್ನು ಕೈಬಿಟ್ಟವು.



ಎಷ್ಟೇ ಹೇಳಿದರೂ ತಮ್ಮ ಮಾತನ್ನ ಕೇಳದ ಆ ಪಕ್ಷಿಯನ್ನ ಬಿಟ್ಟು ಉಳಿದ ಎಲ್ಲಾ ಪಕ್ಷಿಗಳು ವಲಸೆಹೊರಟವು. ಆದರೆ, ಬಳಿಕ ಮೊಂಡುತನ ಪ್ರದರ್ಶಿಸಿದ ಹಕ್ಕಿಗೆ ತಾನಿದ್ದ ದುರ್ಗಮ ಪರಿಸ್ಥಿತಿ ಅರಿವಾಗಿ ಅದೂ ಕೂಡ ವಲಸೆ ಹೋಗಲು ನಿರ್ಧರಿಸಿ ತಾನೊಂದೇ ಅಲ್ಲಿಂದ ಹಾರಲು ಆರಂಭಿಸಿತು.



ಹೀಗೆ ಹಾರುತ್ತಿದ್ದ ವೇಳೆ ದಿಕ್ಕು–ದೆಸೆ ತಿಳಿಯದೆ ಆ ಪಕ್ಷಿ ಒಂದು ಹಿಮ ಗಡ್ಡೆಯ ಬಳಿ ಅಸ್ವಸ್ಥಗೊಂಡು ಕೆಳಗೆ ಬೀಳುವ ವೇಳೆ ಅದೃಷ್ಟವಶಾತ್ ಭೂ ಪ್ರದೇಶದಲ್ಲಿ ಸಿಕ್ಕಿ ಅಲ್ಲಿ ಸುಧಾರಿಸಿಕೊಳ್ಳುವ ವೇಳೆ ರೈತನ ಪತ್ನಿ ಸಗಣಿಯನ್ನು ತಂದು ಅದರ ಮೇಲೆ ಹಾಕಿದಳು. ಇದರಿಂದಾಗಿ ಮತ್ತೊಂದು ಸಂಕಷ್ಟದಿಂದ ಆ ಪಕ್ಷಿ ನಲುಗಿ ಹೋಯಿತು.



ಆದರೆ, ಸಾವರಿಸಿಕೊಂಡು ಆ ಹಕ್ಕಿ ಸಗಣಿಯನ್ನು ಕೊರೆದು ಗಾಳಿ ಬರುವಂತೆ ರಂಧ್ರ ಮಾಡಿ, ಸ್ವಲ್ಪ ಸುಧಾರಿಸಿಕೊಂಡ ನಂತರ ಅದೇ ಹಿತಕರವಾದ ವಾತಾವರಣವೆಂದು ಭಾವಿಸಿ, ಸಂತೋಷದಿಂದ ಹಾಡಲು ಆರಂಭಿಸಿತು. ಈ ಸದ್ದಿನಿಂದ ಎಚ್ಚೆತ್ತ ಬೆಕ್ಕು ಹುಡುಕುತ್ತಾ ಬಂದು ಕೊನೆಗೆ ಸಗಣಿಯೊಳಗಿದ್ದ ಪಕ್ಷಿಯನ್ನ ಕೊಂದು ತಿಂದಿತು.

ನೀತಿ: ಕೆಲವು ವೇಳೆ ನಾವು ಭಾವಿಸಿದ್ದೇ ಸರಿಯಾಗಿರುವುದಿಲ್ಲ. ಅದರಿಂದ ಆಪತ್ತು ಬರಬಹುದು. ಹಾಗಾಗಿ ಕೆಲವರ ಮಾತು ಕೇಳುವುದರಿಂದಲೂ ನಾವು ಅಪಾಯದಿಂದ ಪಾರಾಗಬಹುದು.

ವಾರಭವಿಷ್ಯ



29.06.2025 ರಿಂದ 5.07.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ–ಸಿಂಹ, ಕನ್ಯಾ, ತುಲಾ, ಕುಜ–ಸಿಂಹ, ಬುಧ–ಕಟಕ, ಗುರು–ಮಿಥುನ, ಶುಕ್ರ–ವೃಷಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಕುಟುಂಬ ಸೌಖ್ಯ, ಆರೋಗ್ಯ ಮರುಕಳಿಸುವುದು. ಸ್ತ್ರೀಯರ ಜೊತೆ ಸವಿ ಮಾತಿನ ಸಲ್ಲಾಪ. ಶ್ರದ್ಧೆಯಿಂದ ಮಾಡಿದ ಕೆಲಸದಲ್ಲಿ ಯಶಸ್ಸು. ಸ್ವ ಬುದ್ಧಿಯಿಂದ ಕೆಲಸ ಪ್ರಾರಂಭಿಸಿ. ಧನಾದಾಯ. ವ್ಯಯಸ್ಥಿತ ಶನಿದೇವನಿಂದ ಕೃಷಿಯಲ್ಲಿ ಅಲ್ಪ ಫಲ, ಅಲ್ಪ ಭೋಜನ, ನೆರೆಹೊರೆಯಲ್ಲಿ ಯಾವುದಾದರೊಂದು ವಿಷಯಕ್ಕೆ ಜಗಳ. ಅನ್ಯಸ್ಥಳ ವಾಸ, ನೇತ್ರ ಬಾಧೆ.

ಶ್ರೀ ಗಣಪತಿ ಆರಾಧನೆ, ಶುಭ ಸಂಖ್ಯೆ–5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶ್ರೀ ಬೃಹಸ್ಪತಿಯ ಕರುಣ ದೃಷ್ಟಿಯಿಂದ ಮನಸ್ಸಿಗೆ ಹರ್ಷ ನೀಡುವ ಪ್ರಸಂಗಗಳು. ಸೌಭಾಗ್ಯವು ಧನ ಸಂಪಾದನೆಯ ಹೊಸ ಮಾರ್ಗ ತೋರುವುದು. ಧರ್ಮ ಕಾರ್ಯಗಳಿಗೆ ಧನ ದಾನದಿಂದ ಮನಃ ಸಂತುಷ್ಟಿಯು. ಸ್ತ್ರೀ ಪುತ್ರರಿಂದ ಸುಖ ವೃದ್ಧಿ. ಎಣ್ಣೆಕಾಳು, ದ್ವಿದಳ ಧಾನ್ಯ ಬೆಳೆ ವಿಪುಲವಾಗಿ ಬೆಳೆಯುವುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಸಂದರ್ಶನ. ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು.

ಶ್ರೀ ಚಾಮುಂಡೇಶ್ವರಿ ಉಪಾಸನೆ, ಶುಭ ಸಂಖ್ಯೆ–2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಬಂಧಿಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳಬೇಕು. ಯಾವುದೇ ನಿರ್ಧಾರಕ್ಕೆ ಮುನ್ನ ನಿಧಾನಿಸಿ. ರತ್ನ ವ್ಯಾಪಾರಿಗಳಿಗೆ ಅಧಿಕ ಲಾಭ. ಸತ್ಸಂಗ ಹಾಗೂ ವಿನೋದ ಗೋಷ್ಠಿ. ವಾರ ಮಧ್ಯೆ–ದ್ರವ್ಯಲಾಭ, ಪರೀಕ್ಷೆ, ಸಂದರ್ಶನಗಳಲ್ಲಿ ಸಫಲತೆಯನ್ನು ನಿರೀಕ್ಷಿಸಬಹುದು. ಜನ್ಮ ಗುರುವಿನ ಕಾರಣ ಆರೋಗ್ಯದ ಕಡೆಗೆ ಅಸಡ್ಡೆ ಕೂಡದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಿ.

ಶ್ರೀ ವಿಷ್ಣು ನಾಮ ಸ್ಮರಣೆ, ಶುಭ ಸಂಖ್ಯೆ–1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದ ಆದಿಗೆ ಆಪ್ತೇಷ್ಟರ ಮಿಲನ. ಅತಿಥಿ ಅಭ್ಯಾಗತರ ಆಗಮನ. ಅವರ ಉಪಚಾರ ಹಾಗೂ ಸಂತೋಷ ಕೂಟಗಳ ಕಾರಣ ಧಾರಾಳ ಹಣ ವ್ಯಯ. ಆಷಾಢ ಮಾಸದ ಮನೆ ಸಂಪ್ರದಾಯಗಳನ್ನು ಆಚರಿಸಿಕೊಳ್ಳಿ. ಸ್ವ–ಧರ್ಮಾಚರಣೆಯಿಂದ ಮನಸ್ಸಿನ ವ್ಯಾಕುಲತೆ ನಿವಾರಣೆ. ಸರ್ಕಾರಕ್ಕೆ ದಂಡ ಪಾವತಿಸಬೇಕಾದೀತು. ರಾಜಕೋಪ ಚತುಷ್ಪಾದ ಪ್ರಾಣಿಗಳಿಂದ ತೊಂದರೆ.

ಶ್ರೀ ದುರ್ಗಾ ಪೂಜೆ, ಶುಭ ಸಂಖ್ಯೆ–4

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗುರು ಕೃಪೆಯಿಂದ ವ್ಯಾಪಾರ–ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಸರ್ವಜನ ಪ್ರಿಯತೆಯನ್ನು ಗಳಿಸುವಿರಿ. ಬದುಕು ಸಮೃದ್ಧವಾಗಲಿದೆ. ಸಮಾಜದಲ್ಲಿ ಸೌಜನ್ಯದ ಮಾತುಗಳಿಂದ ಮನಸ್ಸು ಗೆಲ್ಲುವಿರಿ. ಬಂಧು ಜನರ ಸಮಾಗಮದಿಂದ ಹರುಷ. ಸರ್ಕಾರಿ ಅಧಿಕಾರಿಗಳ ಸಹಕಾರ ದೊರಕುವುದು. ಅಷ್ಟ ಶನಿಯ ಕಾರಣ ಕಳ್ಳಕಾಕರ ಬಗ್ಗೆ ಜಾಗೃತರಾಗಿರಿ.

ಶ್ರೀ ರಾಘವೇಂದ್ರ ದರ್ಶನ, ಶುಭ ಸಂಖ್ಯೆ–7

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಆದಿಗೆ ಹಲವು ಮೂಲಗಳಿಂದ ಧನ ಸಂಚಯ, ಧೈರ್ಯ, ಪರಾಕ್ರಮ, ಬುದ್ಧಿ ವೃದ್ಧಿಸುವುದು. ಶತ್ರುಗಳು ಹಿಮ್ಮೆಟ್ಟುವರು. ಎಲ್ಲರಿಂದಲೂ ಪ್ರಶಂಸಿಸಲ್ಪಡುವಿರಿ. ಗೋವು, ಮಹಿಷ ವ್ಯಾಪಾರದಿಂದ ಲಾಭ ಗಳಿಕೆ. ಸಪ್ತಮ ಶನಿಯ ಕಾರಣ ವ್ಯರ್ಥವಾದ ಅಲೆದಾಟಗಳು. ಸರ್ವ ಧಾನ್ಯಗಳೂ ಸ್ವಲ್ಪ ಫಲ ನೀಡುವುದು. ಶ್ರೀಮತಿಯೊಡನೆ ನಿಷ್ಠೂರದ ಮಾತು ಹಾಗೂ ವ್ಯಾಕುಲತೆ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–9

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಹೊಸ ಉದ್ಯೋಗ ಪ್ರಾರಂಭಿಸಲು ಸಮಯ ಅನುಕೂಲಕರವಾಗಿದೆ. ನೆರೆ–ಹೊರೆ, ಬಂಧು ಮಿತ್ರರೊಂದಿಗೆ ಪ್ರೀತಿ ವಿಶ್ವಾಸ ವೃದ್ಧಿಸುವುದು. ರಾಜ ದರ್ಶನ ಅಂದರೆ ಮಂತ್ರಿ–ಶಾಸಕರ ದರ್ಶನದಿಂದ ಕಾರ್ಯಾನುಕೂಲ. ಕ್ಷೀರಾನ್ನಾದಿ ಸುಖ ಭೋಜನ, ಗೋವು–ಅಶ್ವ ವ್ಯಾಪಾರದಲ್ಲಿ ಹೆಚ್ಚಿನ ಲಾಭ. ವಧು–ವರಾನ್ವೇಷಣೆ ಮುಂದುವರೆಯಲಿದೆ. ವಾರಾಂತ್ಯಕ್ಕೆ ಅನ್ಯ ಸ್ಥಳ ವಾಸ, ದೇಹಕ್ಕೆ ದಣಿವು.

ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–8

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಅಷ್ಟಮ ಗುರುವೂ, ಪಂಚಮ ಶನಿಯೂ ನಿಮ್ಮನ್ನು ಹಲವು ರೀತಿಯಲ್ಲಿ ಕಾಡಿಸುವರು. ಆಪ್ತರಲ್ಲಿ ನಿಷ್ಠೂರದ ಮಾತಿನಿಂದ ಸಂಗ–ಭಂಗ. ಏರಿಳಿತವಿಲ್ಲದೆ ಬದುಕಿಲ್ಲ. ಪ್ರಾರಬ್ಧ ಕೆಟ್ಟದಾದಾಗ ದೈವ ಪ್ರಾರ್ಥನೆಯಿಂದ ಪರಿಹಾರ. ವಾರಾಂತ್ಯಕ್ಕೆ ಶುಭ ಚಂದ್ರ ಗೋಚರ ಫಲವಾಗಿ ಕೈ ಹಾಕಿದ ಕೆಲಸ ಕಾರ್ಯಗಳು ನಿಧಾನವೆನಿಸಿದರೂ ಮುಂದೆ ಸಾಗುವುದು. ಹಿರಿಯರ ಬುದ್ಧಿ ಮಾತಿಗೆ ಬೆಲೆ ಇರಲಿ.

ಶ್ರೀ ಮನೆ ದೇವರ ದರ್ಶನ, ಶುಭ ಸಂಖ್ಯೆ–4

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಮಹತ್ವದ ವಿಷಯಗಳಲ್ಲಿ ಹಿರಿಯರ ವಿವೇಕದ ಮಾತಿಗೆ ಬೆಲೆ ಕೊಟ್ಟು ನಡೆಯುವುದರಿಂದ ಶುಭ ಫಲವನ್ನು ಹೊಂದುವಿರಿ. ಸಾಹಿತಿಗಳಿಗೆ, ಕಲಾವಿದರಿಗೆ ಮನ್ನಣೆ, ಗೌರವಾದರಗಳು. ನಿಮ್ಮ ಶ್ರೇಯೋಭಿಲಾಷಿಗಳ ಮಿಲನದಿಂದ ಮನೆಯಲ್ಲಿ ಸಂಭ್ರಮದ ವಾತಾವರಣ. ದುಬಾರಿ ಗೃಹೋಪಯೋಗಿ ವಸ್ತುಗಳನ್ನು ಪಡೆಯುವಿರಿ. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯದು.

ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–9

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಯೋಜಿತ ಕೆಲಸ ಕಾರ್ಯಗಳು ನಿಂತು ನಿಂತು ಸಾಗುತ್ತವೆ. ಎಲ್ಲವನ್ನೂ ಒಮ್ಮೆಲೇ ಮಾಡಲು ಹೋಗಿ ಪಜೀತಿ ಪಡುವಿರಿ. ಕೆಲವೊಮ್ಮೆ ಸಮಯಕ್ಕೆ ಬೆಲೆ ಕೊಡುವುದನ್ನು ರೂಢಿಸಿಕೊಳ್ಳಿ. ರೈಲು ಹೋದ ಮೇಲೆ ಟಿಕೆಟ್ ಕೊಂಡಂತೆ ಆಗುವುದು ಬೇಡ. ವಾರಾಂತ್ಯಕ್ಕೆ ತುರ್ತು ಕೆಲಸಗಳಿಗೆ ಹಣ ಒದಗಿ ನಿಶ್ಚಿಂತೆ ಎನಿಸುವುದು. ಕೊಂಚ ಸಮಯ ತಾಳ್ಮೆಯಿಂದಿದ್ದರೆ ಒಳಿತು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆರಂಭಕ್ಕೆ ಶುಭ ವಾರ್ತೆಯೊಂದು ಬಂದು ಹರ್ಷಿತರಾಗುವಿರಿ. ವ್ಯಾಪಾರ ಉದ್ಯೋಗಗಳಲ್ಲಿ ಉತ್ತಮ ಲಾಭವನ್ನು ನಿರೀಕ್ಷಿಸಬಹುದು. ಕಾರ್ಯ ಸಾಧನೆಗಾಗಿ ಅಧಿಕ ತಿರುಗಾಟಗಳು ಉಂಟಾದೀತು. ನಿಮ್ಮ ಜವಾಬ್ದಾರಿ ಹೆಚ್ಚಾಗಿ, ಖರ್ಚು–ವೆಚ್ಚಗಳು ಹೆಚ್ಚುವುದು. ನಿಮ್ಮ ಆರೋಗ್ಯದ ಕಡೆ ಗಮನ ನೀಡಿ. ಅಗ್ನಿ, ವಿದ್ಯುತ್ ಅಪಘಾತಗಳಿಂದ ಜಾಗೃತರಾಗಿರಿ. ಪಿತ್ತದಿಂದ ಬಳಲುವ ಸಾಧ್ಯತೆ.

ಓಂ ನಮೋ ನಾರಾಯಣಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಈ ವಾರದಲ್ಲಿ ಹಾಗೆ ಬಂದ ಹಣ ಹೀಗೆ ವ್ಯಯವಾಗುತ್ತದೆ. ಜನ್ಮರಾಶಿ ಸ್ಥಿತ ಶನಿ, ಹಾಗೂ ವ್ಯಯಸ್ಥಿತ ರಾಹುವಿನಿಂದ ದುಡುಕಿನ ತೀರ್ಮಾನಗಳಿಗೆ ಬಲಿಯಾಗುವಿರಿ. ಮಾನಸಿಕ ದುಗುಡವೂ ಹೆಚ್ಚುತ್ತದೆ. ತಾಳ್ಮೆಯೇ ನಿಮ್ಮ ಮೂಲ ಮಂತ್ರವಾಗಿರಲಿ. ವಾರದ ಕಡೆಗೆ ಮಹತ್ವದ ಕೆಲಸಗಳಲ್ಲಿ ಮರು ಪ್ರಯತ್ನದಿಂದ ಕಾರ್ಯ ಸಿದ್ಧಿ. ನಿಮ್ಮ ಕುಲಾಚಾರಗಳನ್ನು ಪಾಲಿಸುವುದರಿಂದ ಕಷ್ಟ ನಿವಾರಣೆ.

ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ–6

ಮೈಸೂರು ಮಿತ್ರ

ಬಿಜೆಪಿಯಿಂದ 'ತುರ್ತು ಪರಿಸ್ಥಿತಿ–ಕರಾಳ ಇತಿಹಾಸಕ್ಕೆ 50 ವರ್ಷ' ಕಾರ್ಯಕ್ರಮ

ಕಾಂಗ್ರೆಸ್‌ನಿಂದ ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನ, ಮಾನವ ಹಕ್ಕುಗಳ ವ್ಯವಸ್ಥೆ ನಾಶ

ನಂಜನಗೂಡು: 1975ರಲ್ಲಿ ಪ್ರಧಾನಿ ಇಂದಿರಾಗಾಂಧಿ ಅವರು ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನದ ಆಶಯಗಳನ್ನು ಮಣ್ಣು ಪಾಲು ಮಾಡಿ ಮಾನವ ಹಕ್ಕುಗಳನ್ನು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶಪಡಿಸಿದ ಪರಿಣಾಮ ದೇಶದಲ್ಲಿ ನಾಗರಿಕರು ಹೇಗೆ ಸಂಕಷ್ಟ ಎದುರಿಸಿದರು ಎಂಬುದನ್ನು ಇಂದಿನ ತಲೆಮಾರಿಗೆ ತಿಳಿಸುವ ಉದ್ದೇಶದಿಂದ ಬಿಜೆಪಿ ಪಕ್ಷ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ 50 ವರ್ಷ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ತಿಳಿಸಿದರು.

ತಾಲೂಕಿನ ಹದಿನಾರು ಗ್ರಾಮದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಪಕ್ಷದ ವತಿಯಿಂದ ಏರ್ಪಡಿಸಲಾಗಿದ್ದ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ ಐವತ್ತು ವರ್ಷ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಆಂತರಿಕ ಕ್ಷೋಭೆ, ಯುದ್ಧದ ಭೀತಿ, ಆರ್ಥಿಕ ಸಂಕಷ್ಟದ ಪರಿಸ್ಥಿತಿಯಲ್ಲಿ ತುರ್ತು ಪರಿಸ್ಥಿತಿಯನ್ನು ಹೇರುವ ಅಧಿಕಾರ ರಾಷ್ಟ್ರಪತಿಗಿದೆ, ಆದರೆ 1971ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಉತ್ತರ ಪ್ರದೇಶದ ರಾಯಭರೇಲಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಇಂದಿರಾ ಗಾಂಧಿ ವಾಮ ಮಾರ್ಗದಿಂದ ಚುನಾವಣೆಯಲ್ಲಿ ಗೆದ್ದಿದ್ದನ್ನು ಪ್ರಶ್ನಿಸಿ ರಾಜನಾರಾಯಣರವರು ಅಲಹಾಬಾದ್ ಕೋರ್ಟ್‌ನಲ್ಲಿ ದೂರು ದಾಖಲಿಸಿದ ಪರಿಣಾಮ ಇಂದಿರಾ ಗಾಂಧಿ ಅವರ ಲೋಕಸಭಾ ಸದಸ್ಯತ್ವ ಅಸಿಂಧು ಎಂದು ನ್ಯಾಯಾಲಯದ ತೀರ್ಪು ಬಂದ ಹಿನ್ನೆಲೆಯಲ್ಲಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಕಗ್ಗೊಲೆ ನಡೆಸಿ ತುರ್ತು ಪರಿಸ್ಥಿತಿಯನ್ನು ಹೇರಲಾಯಿತು ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿ ಕಾಂಗ್ರೆಸ್ ಸರ್ಕಾರ ತುರ್ತು ಪರಿಸ್ಥಿತಿ ಹೇರಿ, ದೇಶದಲ್ಲಿ ಕರಾಳ ಇತಿಹಾಸವನ್ನು ಸೃಷ್ಟಿಸಿದ್ದಲ್ಲದೆ, ಸಂವಿಧಾನ ತಿದ್ದುಪಡಿಯ ಮೂಲಕ ಅಂಬೇಡ್ಕರ್ ಅವರ ಮೂಲ ಸಂವಿಧಾನದ ಆಶಯಗಳನ್ನು ಕಗ್ಗೊಲೆ ನಡೆಸಿ ನಾಗರಿಕ ಹಕ್ಕುಗಳನ್ನು ಸಂಪೂರ್ಣವಾಗಿ ಕಿತ್ತುಕೊಂಡರು, ಆದರೆ ಈ ಬಗ್ಗೆ ಆರ್‌ಎಸ್‌ಎಸ್ ದೇಶದಲ್ಲಿ ಅತ್ಯಂತ ದೊಡ್ಡ ಆಂದೋಲನ ರೂಪಿಸಿ ಸಾವಿರಾರು ಜನ ಜೈಲು ಪಾಲಾಗಿ, ಹೋರಾಟ ನಡೆಸಿದ ಪರಿಣಾಮ 1988ರಲ್ಲಿ ಕಾಂಗ್ರೆಸ್ ಸರ್ಕಾರ ತಿದ್ದುಪಡಿ ಮಾಡಿದ್ದ ಸಂವಿಧಾನದ ಎಲ್ಲಾ ನಿರ್ಣಯಗಳನ್ನು ರದ್ದುಪಡಿಸಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೂಲ ಸಂವಿಧಾನವನ್ನು ಪುನಃ ಸ್ಥಾಪನೆ ಮಾಡಿದ ಕೀರ್ತಿ ಆರ್‌ಎಸ್‌ಎಸ್‌ಗೆ ಸಲ್ಲುತ್ತದೆ, ಎಂದರಲ್ಲದೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಿದ್ದರಾಮಯ್ಯನವರ ಕೊಡುಗೆ ಶೂನ್ಯ, ಯಾವ ಹೋರಾಟದಲ್ಲೂ ಭಾಗವಹಿಸದೆ ಶೋಕಿವಾಲನಾಗಿ, ಹಬ್ಬ, ಬೀಗರೂಟದ ಬಾಡೂಟಗಳಲ್ಲಿ ಭಾಗವಹಿಸಿದ್ದರು, ಈಗ ಸಂವಿಧಾನದ ಬಗ್ಗೆ ದೊಡ್ಡ ಭಾಷಣ ಬಿಗಿಯುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.



ಬಿಜೆಪಿ ಪಕ್ಷದ ವತಿಯಿಂದ ಏರ್ಪಡಿಸಲಾಗಿದ್ದ ತುರ್ತು ಪರಿಸ್ಥಿತಿ ಹೇರಿದ ಕಾಂಗ್ರೆಸ್ ಕರಾಳ ಇತಿಹಾಸಕ್ಕೆ ಐವತ್ತು ವರ್ಷ ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಮತ್ತು ಗಣ್ಯರು ಉದ್ಘಾಟಿಸಿದರು.

ಮಾಜಿ ಶಾಸಕ ಬಿ.ಹರ್ಷವರ್ಧನ್, ಮೈಸೂರು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿದರು.

ಸಮಾರಂಭದಲ್ಲಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸೆರೆವಾಸ ಅನುಭವಿಸಿದ ಹೋರಾಟಗಾರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾರಂಭದಲ್ಲಿ ವರುಣ ಕ್ಷೇತ್ರದ ಬಿಜೆಪಿ ಮಂಡಲ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್. ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಮೈಸೂರು ಸಹಕಾರ ಬ್ಯಾಂಕ್ ನಿರ್ದೇಶಕ ಸದಾನಂದ, ಜಿ.ಪಂ ಮಾಜಿ ಸದಸ್ಯರಾದ ಮಂಗಳಾ ಸೋಮಶೇಖರ್, ಡಾ.ಶಿವರಾಮು, ಗುರುಸ್ವಾಮಿ, ಮುಖಂಡರಾದ ಡಾ.ರೇವಣ್ಣ, ಪ್ರಫುಲ್ಲಾ ಮಲ್ಲಾಡಿ, ಬಾಲಚಂದ್ರ, ವಿನಯ್ ಕುಮಾರ್, ಕಣೆನೂರು ಪರಶಿವಮೂರ್ತಿ, ಹುಲ್ಲಹಳ್ಳಿ ಮೋಹನ್, ಪಿ.ಮಹೇಶ್, ವಳಗೆರೆ ಪುಟ್ಟಸ್ವಾಮಿ, ಅರುಣ್, ಉಮೇಶ್ ಮೋದಿ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಾಮ್ರಾಟ್ ಸುಂದರೇಶ್, ಪ್ರಧಾನ ಕಾರ್ಯದರ್ಶಿ ಮಧುರಾಜ್, ತಾಪಂ ಮಾಜಿ ಸದಸ್ಯ ಸಿ.ಎಂ.ಮಹದೇವಯ್ಯ, ನಂಜನ ಗೂಡು ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ ನಗರ ಮಂಡಲ ಅಧ್ಯಕ್ಷ ಸಿದ್ದರಾಜು, ಮೈಸೂರು ಜಿಲ್ಲಾ ಗ್ರಾಮಾಂತರ ಮಹಿಳಾ ಮೋರ್ಚಾ ಅಧ್ಯಕ್ಷೆ ನಳಿನಿ ಗೌಡ, ಸೇರಿದಂತೆ ಗ್ರಾಮಸ್ಥರು, ಅಭಿಮಾನಿಗಳು ಹಾಗೂ ಇತರ ಪ್ರಮುಖ ನಾಯಕರು ಉಪಸ್ಥಿತರಿದ್ದರು.

ಅಧಿಕಾರ ದುರುಪಯೋಗಪಡಿಸಿಕೊಳ್ಳದೆ ಮಾದರಿ ಶಾಸಕರಾಗಿ ಯತೀಂದ್ರ ಕಾರ್ಯ ನಿರ್ವಹಣೆ

ತಿ.ನರಸೀಪುರ, ಜೂ.28– ಡಾ.ಯತೀಂದ್ರರವರು ಸರಳ ಸಜ್ಜನಿಕೆಯ ರಾಜಕಾರಣಿಯಾಗಿದ್ದು, ತಮಗೆ ಎಲ್ಲ ಅಧಿಕಾರವಿದ್ದರೂ, ಅದನ್ನು ದುರುಪಯೋಗ ಪಡಿಸಿಕೊಳ್ಳದೇ ಮಾದರಿ ಶಾಸಕರಂತೆ ಕೆಲಸ ಮಾಡುತ್ತಿದ್ದಾರೆ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಪ್ರಕಾಶ್ ಹೇಳಿದರು.

ಡಾ.ಯತೀಂದ್ರ ಸಿದ್ದರಾಮಯ್ಯ ಅವರ 46ನೇ ಜನ್ಮದಿನದ ಅಂಗವಾಗಿ ಕೆಂಪಯ್ಯನ ಹುಂಡಿ ಕಾಂಗ್ರೆಸ್ ಮುಖಂಡ ಮಾಧು ಅವರು ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಯತೀಂದ್ರರವರ ಹೆಸರಿನಲ್ಲಿ ವಿಶೇಷ ಅರ್ಚನೆ ಮಾಡಿಸಿ, ದಾಸೋಹ ಭವನದಲ್ಲಿ ಹಮ್ಮಿಕೊಳ್ಳಲಾದ ಅನ್ನದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾರ್ಯಕರ್ತರು ಮತ್ತು ಕ್ಷೇತ್ರದ ಜನತೆಯ ಕಷ್ಟ ಸುಖಗಳಿಗೆ ಸ್ಪಂದಿಸುವ ಮಾನವೀಯ ಗುಣ ಹೊಂದಿರುವ ಅವರು ತಮ್ಮ ರಾಜಕೀಯ ಜೀವನದ ಅವಧಿಯಲ್ಲಿ ಮತ್ತಷ್ಟು ಹೆಚ್ಚಿನ ಅಧಿಕಾರ ಪಡೆದು ರಾಜ್ಯದ ಜನತೆಯ ಸೇವೆ ಮಾಡುವಂತಾಗಲಿ ಎಂದರು. ವಿಧಾನಪರಿಷತ್ ಸದಸ್ಯರಾಗಿ ತಮ್ಮದೇ ಆದ ಸರಳವಾದ ಶೈಲಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮುನ್ನಡಿ ಇಟ್ಟಿರುವ ಡಾ.ಯತೀಂದ್ರ ಸಿದ್ದರಾಮಯ್ಯ ತಂದೆಯಂತೆಯೇ ರಾಜಕಾರಣದಲ್ಲಿ ಮಿನುಗುವ ನಕ್ಷತ್ರದಂತಾಗಲಿ ಎಂದರು.



ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಕಾಂಗ್ರೆಸ್ ಹಿರಿಯ ಮುಖಂಡ ಕೆಂಪಯ್ಯನ ಹುಂಡಿ ಮಾಧು ಚಾಲನೆ ನೀಡಿದರು.

ಪ್ರಥಮ ದರ್ಜೆ ಗುತ್ತಿಗೆದಾರ, ಕಾಂಗ್ರೆಸ್ ಮುಖಂಡ ಕೆಂಪಯ್ಯನಹುಂಡಿ ಮಾಧು ಮಾತನಾಡಿ ಡಾ.ಯತೀಂದ್ರರವರು ರಾಜಕಾರಣದಲ್ಲಿ ಯಾವುದೇ ಕಳಂಕವಿಲ್ಲದ ರಾಜಕಾರಣಿ, ವರುಣ ಕ್ಷೇತ್ರದಿಂದ ಶಾಸಕರಾಗಿ ನಂತರ ತಂದೆಗೋಸ್ಕರ ಕ್ಷೇತ್ರ ಬಿಟ್ಟು ವಿಧಾನಪರಿಷತ್ ಸದಸ್ಯರಾಗಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಅವರು ರಾಜ್ಯ ರಾಜಕಾರಣದಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ತಂದೆ ಸಿದ್ದರಾಮಯ್ಯರವರಂತೆ ಉತ್ತಮ ರಾಜಕಾರಣಿಯಾಗುವ ಎಲ್ಲ ಗುಣ ಲಕ್ಷಣಗಳನ್ನು ಹೊಂದಿರುವ ಡಾ.ಯತೀಂದ್ರ ರಾಜ್ಯ ರಾಜಕಾರಣದ ಮಿನುಗುವ ನಕ್ಷತ್ರ ಇದ್ದಂತೆ ಎಂದು ಬಣ್ಣಿಸಿದರು.

ಜಿಲ್ಲಾ ಎಸ್‌ಸಿ/ಎಸ್‌ಟಿ ಗುತ್ತಿಗೆದಾರ ಸಂಘದ ಜಿಲ್ಲಾಧ್ಯಕ್ಷ ಹೊಸಪುರ ಕೆ.ಮಲ್ಲು, ದಲಿತ ಜಾಗೃತಿ ಸಮಿತಿಯ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್, ತಾ.ಪಂ.ಮಾಜಿ ಅಧ್ಯಕ್ಷ ಅಂದಾನಿ, ಪುರಸಭೆ ಮಾಜಿ ಅಧ್ಯಕ್ಷ ಎನ್.ಸೋಮು, ಸದಸ್ಯರಾದ ಬಾದಾಮಿ ಮಂಜು, ಮೆಡಿಕಲ್ ನಾಗರಾಜು, ಮುಖಂಡರಾದ ಕೇತಳ್ಳಿ ಮಂಜು, ಮಹದೇವಸ್ವಾಮಿ, ತಾಯೂರು ಮಧು, ಕರಿಯಪ್ಪ, ಪುಟ್ಟಬುದ್ಧಿ, ಕೆಂಪೇಗೌಡ ಮತ್ತಿತರರಿದ್ದರು.

ಫಸಲ ಭೀಮ ಯೋಜನೆ ಸೌಲಭ್ಯ ಪಡೆಯಲು ಮನವಿ

ನಂಜನಗೂಡು: 2025–26ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರೈತರು ಸುರಕ್ಷತೆ ಹಿತದೃಷ್ಟಿಯಿಂದಾಗಿ ಪ್ರಧಾನ ಮಂತ್ರಿ ಫಸಲ್ ಭೀಮ ವಿಮಾ ಯೋಜನೆ ಸೌಲಭ್ಯ ಪಡೆಯಲು ಮುಂದಾಗಬೇಕು ಎಂದು ತಾಲೂಕು ಸಹಾಯಕ ಕೃಷಿ ನಿರ್ದೇಶಕ ರವಿ ಹೇಳಿದರು.

ಮಳೆಯಾಶ್ರಿತ ಬೆಳೆಗಳಾದ ಸೂರ್ಯಕಾಂತಿ, ಹೆಸರು, ಉದ್ದು, ಅಲಸಂದೆ ಬೆಳೆಗಳ ವಿಮಾ ನೋಂದಣಿಗೆ ಜೂ.30 ಕೊನೆಯ ದಿನಾಂಕವಾಗಿರುತ್ತದೆ, ಜೋಳ ನೆಲಗಡಲೆ ಬೆಳೆಗಳಿಗೆ ಜು.15 ಕೊನೆಯ ದಿನಾಂಕವಾಗಿದೆ, ತೊಗರಿ, ಮುಸುಕಿನ ಜೋಳ, ರಾಗಿ, ಹತ್ತಿ, ಬೆಳೆಗಳ ನೋಂದಾವಣಿಗೆ ಜು.31 ಕೊನೆಯ ದಿನಾಂಕವಾಗಿದೆ, ಹುರಳಿ ಮತ್ತು ಭತ್ತದ ಬೆಳೆಗಳ ನೋಂದಾವಣಿಗೆ ಆ.16 ಕೊನೆಯ ದಿನಾಂಕವಾಗಿದ್ದು, ತಾಲೂಕಿನ ಎಲ್ಲಾ ರೈತರು ಪ್ರಧಾನ ಮಂತ್ರಿ ಫಸಲ್ ಭೀಮಾ ವಿಮಾ ಯೋಜನೆಗೆ ನೋಂದಾವಣೆ ಮಾಡಿಕೊಳ್ಳುವ ಮೂಲಕ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಜಮೀನು ವಿವಾದ: ವ್ಯಕ್ತಿ ಮೇಲೆ ಹಲ್ಲೆ, ನಾಲ್ವರ ವಿರುದ್ಧ ಪ್ರಕರಣ ದಾಖಲು



ಹುಣಸೂರು, ಜೂ.28– ಜಮೀನು ವಿಚಾರಕ್ಕೆ ಕಿರಿಕ್ ತೆಗೆದ ಕುಟುಂಬವೊಂದು ದಂಪತಿ ಮೇಲೆ ಹಲ್ಲೆ ನಡೆಸಿದ ಘಟನೆ ತಾಲೂಕಿನ ಬಿಳಿಕೆರೆ ವ್ಯಾಪ್ತಿಯ ಬೆಂಕಿಪುರ ಗ್ರಾಮದಲ್ಲಿ ಇಂದು ಸಂಭವಿಸಿದೆ.

ಘಟನೆಯಲ್ಲಿ ಗಾಯಗೊಂಡ ಸ್ವಾಮಿನಾಯಕ ಅವರು ಸಾರ್ವಜನಿಕ ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಘಟನೆ ವಿವರ: ಹುಣಸೂರು ತಾಲೂಕು ಬಿಳಿಕೆರೆ ಹೋಬಳಿ ಅನ್ನರಾಯಪುರ ಗ್ರಾಮದ ಜಮೀನಿನಲ್ಲಿ ಸ್ವಾಮಿ ನಾಯಕ ಜೋಳ ಬಿತ್ತನೆ ಮಾಡಲು ಟ್ರಾಕ್ಟರ್‌ನಲ್ಲಿ ಉಳುಮೆ ಮಾಡುತ್ತಿದ್ದಾಗ ಬಂದ ನಾಲ್ವರು ಕ್ಯಾತೆ ತೆಗೆದಿದ್ದಾರೆ. ಅಲ್ಲದೆ ಸ್ವಾಮಿ ನಾಯಕನ ಮೇಲೆ ಹಲ್ಲೆಗೆ ಮುಂದಾದಾಗ ಪತ್ನಿ ರೋಜಾ ನೆರವಿಗೆ ಬಂದಿದ್ದಾರೆ. ರೋಜಾ ಜೊತೆ ವ್ಯಕ್ತಿಯೊಬ್ಬ ಅಸಭ್ಯವಾಗಿ ನಡೆದು ಕೊಂಡಿದ್ದಾನೆ. ಇದೇ ವೇಳೆ ಸ್ವಾಮಿ ನಾಯಕನ ತಲೆಗೆ ಕಲ್ಲಿನಿಂದ ಹೊಡೆದು ಗಾಯಗೊಳಿಸಿದ್ದಲ್ಲದೆ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಸ್ವಾಮಿನಾಯಕ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಹಲ್ಲೆ ನಡೆಸಿದ ಗೋಪಾಲನಾಯಕ, ಈತನ ಪತ್ನಿ ಮೀನಾಕ್ಷಿ ಹಾಗೂ ಸಂಬಂಧಿಕರಾದ ಚೇತನ್ ಮತ್ತು ಮಂಜು ಎಂಬುವರ ವಿರುದ್ಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹುಟ್ಟುಹಬ್ಬದ ಅಂಗವಾಗಿ

ಆಷಾಢ ಶುಕ್ರವಾರಗಳಂದು ಚಾಮುಂಡಿ ಬೆಟ್ಟದಲ್ಲಿ ಅನ್ನದಾಸೋಹ

ಹೆಚ್.ಡಿ.ಕೋಟೆ, ಜೂ.28– ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯನವರ ಜನ್ಮದಿನವನ್ನು, ಕರ್ನಾಟಕ ರಾಜ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜನಸೇವಾ ವೇದಿಕೆ ವತಿಯಿಂದ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಆಚರಿಸಲಾಯಿತಲ್ಲದೆ ಆಷಾಢ ಶುಕ್ರವಾರಗಳಂದು ಚಾಮುಂಡಿ ಬೆಟ್ಟದಲ್ಲಿ ಅನ್ನದಾಸೋಹ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಯಿತು.

ಕರ್ನಾಟಕ ರಾಜ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಜನಸೇವಾ ವೇದಿಕೆಯ ರಾಜ್ಯಾಧ್ಯಕ್ಷ ಬೈಪಾಸ್ ಮಂಜುನಾಥ್, ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಉಪಾಧ್ಯಕ್ಷರುಗಳು, ಪದಾಧಿಕಾರಿಗಳು ಮತ್ತು ಅಭಿಮಾನಿಗಳ ನೇತೃತ್ವದಲ್ಲಿ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಆಯುರಾರೋಗ್ಯ, ಹೆಚ್ಚಿನ ಅಧಿಕಾರ ಲಭಿಸಲಿ ಎಂದು ಪ್ರಾರ್ಥಿಸಿದ ನಂತರ ಕೆ.ಆರ್.ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ಹಾಗೂ ಸಿಹಿ ವಿತರಿಸಲಾಯಿತು.

ಮೈಸೂರಿನ ಚಾಮುಂಡಿಪುರಂನಲ್ಲಿರುವ ಅರುಣೋದಯ ವಿಶೇಷ ಶಾಲೆಯ ಮಕ್ಕಳ ಜೊತೆಗೆ ಕೇಕ್ ಕತ್ತರಿಸಿ ಮಕ್ಕಳಿಗೆ ಸಿಹಿ ಊಟ ನೀಡುವುದರ ಮುಖಾಂತರ ಹುಟ್ಟುಹಬ್ಬ ಆಚರಿಸಲಾಯಿತು. ಜನಸೇವಾ ವೇದಿಕೆಯ ರಾಜ್ಯಾಧ್ಯಕ್ಷರಾದ ಬೈಪಾಸ್ ಮಂಜುನಾಥ್ ಮಾತನಾಡಿ ಡಾ.ಯತಿಂದ್ರ ಸಿದ್ದರಾಮಯ್ಯ, ಸರಳ, ಸಜ್ಜನಿಕೆ ಮತ್ತು ಭರವಸೆಯ ಯುವ ರಾಜಕಾರಣಿಯಾಗಿದ್ದು ನಾನೊಬ್ಬ ರಾಜ್ಯದ ಮುಖ್ಯಮಂತ್ರಿಗಳ ಮಗ ಎಂಬ ಯಾವ ಅಹಂ ಇಲ್ಲದೆ ಎಲ್ಲರೊಂದಿಗೆ ಬೆರೆಯುತ್ತಾರೆ ಎಂದರು.



ಡಾ.ಯತೀಂದ್ರ ಹುಟ್ಟು ಹಬ್ಬದ ಪ್ರಯುಕ್ತ ಕೆಆರ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ಹಾಗೂ ಸಿಹಿ ವಿತರಣೆಮಾಡಲಾಯಿತು.



ಮೈಸೂರಿನ ಚಾಮುಂಡಿಪುರಂ ನಲ್ಲಿರುವ ಅರುಣೋದಯ ವಿಶೇಷ ಶಾಲೆಯ ಮಕ್ಕಳ ಜೊತೆಗೆ ಕೇಕ್ ಕತ್ತರಿಸಿ ಮಕ್ಕಳಿಗೆ ಸಿಹಿ ಹಂಚಿದರು.

ಆಷಾಢ ಶುಕ್ರವಾರದ ನಾಲ್ಕು ವಾರಗಳು ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಚಾಮುಂಡಿ ಬೆಟ್ಟದಲ್ಲಿ ಸಿಹಿ ಊಟದ ವ್ಯವಸ್ಥೆ ಮಾಡಲಾಗುವುದು ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಮಹಿಳಾ ಘಟಕ ಪ್ರಾರಂಭಿಸಿ ನೊಂದವರಿಗೆ ನೆರವಾಗುವ ಮತ್ತು ಡಾ.ಯತೀಂದ್ರ ಸಿದ್ದರಾಮಯ್ಯನವರ ಹೆಸರಿನಲ್ಲಿ ವಿವಿಧ ಸಮಾಜಮುಖಿ ಕೆಲಸಗಳನ್ನು ಮಾಡಿ ಅವರಿಗೆ ಶಕ್ತಿ ತುಂಬುವಂತ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ಅವರು ಇದೇ ವೇಳೆ ಪ್ರಕಟಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮರಿಸ್ವಾಮಿ, ರಾಜ್ಯ ಯುವ ಘಟಕ ರಾಜ್ಯಾಧ್ಯಕ್ಷ ಜೈ ಸ್ವಾಮಿ, ಉಪಾಧ್ಯಕ್ಷರಾದ ವೈ.ಕೆ.ಮಂಜುನಾಥ್, ಬಿರ್ವಾಳು ಚಿಕ್ಕಣ್ಣ, ಜಿನ್ನಹಳ್ಳಿ ರಾಜನಾಯಕ, ಚಿಕ್ಕೇರೆಯೂರು ಕೆಂಡಗಣ್ಣೇಗೌಡ, ಸಂಘದ ರಾಜ್ಯ ಖಜಾಂಜಿ ಡಿ.ಸ್ವಾಮಿಗೌಡ, ಗೌರವಾಧ್ಯಕ್ಷ ಕೀಳನಪುರ ಮಹದೇವಪ್ಪ, ಕ್ಯಾತನಹಳ್ಳಿ ಎಚ್.ಪ್ರಕಾಶ್, ಗಂಧನಹಳ್ಳಿ ವೆಂಕಟೇಶ್, ರಾಜ್ಯ ಕುರುಬ ಸಂಘದ ನಿರ್ದೇಶಕರಾದ ಅಭಿಷೇಕ್, ಮಾದೇಗೌಡ, ಮೈಸೂರು ವಿಶ್ವವಿದ್ಯಾನಿಲಯದ ನೂತನ ಸಿಂಡಿಕೇಟ್ ಸದಸ್ಯರಾದ ಹುಯಿಲಾಳು ಎಂ.ಶಂಕರ್, ಕಾಮನ ಕೊಪ್ಪಲು ಸ್ವಾಮಿ ಗೌಡ, ಮನುಗನಹಳ್ಳಿ ಗುರುಸ್ವಾಮಿ, ರಾಜೇಗೌಡನಹುಂಡಿ ವೀರೇಗೌಡ, ಕಾಮನಕೆರೆಹುಂಡಿ ರಾಘವೇಂದ್ರ, ಕೃಷ್ಣಾಪುರ ಪರಶಿವಮೂರ್ತಿ, ನಿರ್ಮಲ ಎಂ, ವಕೀಲರಾದ ಮಂಡ್ಯ ಕಿರಣ್ ಕುಮಾರ್, ಚಾಮರಾಜನಗರ ಮಹದೇವ್, ಎಸ್.ಪ್ರಸನ್ನ ಕುಮಾರ್, ಕ್ಯಾತನಹಳ್ಳಿ ಕೆ.ಬಿ. ಮಹದೇವಪ್ಪ, ಪುಟ್ಟೇಗೌಡ, ಆಲನಹಳ್ಳಿ ಸಣ್ಣಸ್ವಾಮಿ, ಇಲವಾಲ ನಾಗೇಶ್, ಹೊನ್ನಗಿರಿಗೌಡ, ಸಿದ್ದರಾಜು ಚಾಮರಾಜನಗರ, ಶಿವ ನಾಗಪ್ಪ ಬಳ್ಳಾರಿ, ರಾಜೇಶ್, ಪುನೀತ್, ಬೀರಿಹುಂಡಿ ಕುಮಾರ್, ಶೋಹೆಬ್ ಮಹಮ್ಮದ್, ಗಗನ್, ಕುಣಿಗಲ್ ಸ್ವರೂಪರಾಣಿ, ಚಿತ್ರದುರ್ಗ ಸುಜಾತ, ರೂಪ, ಲಕ್ಷ್ಮಿ, ಪಾರ್ವತಿ, ನಂದಿತಾ, ಅಭಿಮಾನಿಗಳು ಮತ್ತು ಹಿತೈಷಿಗಳು ಈ ವೇಳೆ ಉಪಸ್ಥಿತರಿದ್ದರು.

ಸಿಕ್ಕ ಅವಕಾಶ ಬಳಸಿಕೊಂಡು ಜನರ ಕೆಲಸ ಮಾಡಿ



ತಿ.ನರಸೀಪುರ, ಜೂ.28– ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಜನರ ಕೆಲಸ–ಕಾರ್ಯಗಳನ್ನು ಮಾಡುವ ಮೂಲಕ ಪಕ್ಷಕ್ಕೆ ಮತ್ತು ಸರ್ಕಾರಕ್ಕೆ ಒಳ್ಳೆಯ ಹೆಸರು ತರಬೇಕು ಎಂದು ಚಾಮರಾಜನಗರ ಲೋಕಸಭಾ ಸದಸ್ಯ ಸುನಿಲ್ ಬೋಸ್ ತಿಳಿಸಿದ್ದಾರೆ.

ತಿ.ನರಸೀಪುರ ಪುರಸಭೆಗೆ ನೂತನವಾಗಿ ನಾಮ ನಿರ್ದೇಶನಗೊಂಡಿರುವ ಸಬಿಲ್ ಖಾನ್ ಮತ್ತು ಎಂ.ನಾಗರಾಜು(ಜೋಗಿ) ಅವರುಗಳು ನೀಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಅವರು ನಿಮ್ಮನ್ನು ಪುರಸಭೆಗೆ ನಾಮ ನಿರ್ದೇಶನ ಮಾಡಿರುವುದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಅಲ್ಪಸಂಖ್ಯಾತ ಸಮುದಾಯ ಮತ್ತು ಸವಿತಾ ಸಮಾಜದವರು ಚುನಾವಣೆಗೆ ಸ್ಪರ್ಧಿಸಿ ಗೆಲ್ಲುವುದು ಕಷ್ಟಸಾಧ್ಯವಾದುದರಿಂದ ನಿಮ್ಮನ್ನು ಪುರಸಭೆಗೆ ನಾಮ ನಿರ್ದೇಶನ ಮಾಡಿ ಅಧಿಕಾರ ಮತ್ತು ಅವಕಾಶ ಕೊಟ್ಟಿದ್ದೇವೆ ಎಂದು ಅವರು ಪುರಸಭಾ ವ್ಯಾಪ್ತಿಯಲ್ಲಿ ಆಗಬೇಕಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ತಮಗೆ ತಿಳಿಸಿದರೆ, ನಾನು ಮತ್ತು ನಮ್ಮ ತಂದೆ ನಿಮಗೆ ಎಲ್ಲ ರೀತಿಯ ಸಹಕಾರ ನೀಡುತ್ತೇವೆ ಎಂದರು.

ತಿ.ನರಸೀಪುರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಕ್ಷೇತ್ರವಾಗಿದ್ದು, ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವುದರೊಂದಿಗೆ ಮಾದರಿ ಕ್ಷೇತ್ರವನ್ನಾಗಿ ಮಾಡಲು ನೀವುಗಳು ಸೇರಿದಂತೆ ಎಲ್ಲಾ ಪುರಸಭಾ ಸದಸ್ಯರ ಸಹಕಾರ ಬೇಕು ಎಂದು ಅವರು ಇದೇ ವೇಳೆ ಹೇಳಿದರು.

ನಮ್ಮ ತಂದೆಯವರು ತಿ.ನರಸೀಪುರ ಸೇರಿದಂತೆ ಮೈಸೂರು ಜಿಲ್ಲೆಯ ಅಭಿವೃದ್ಧಿಗೆ ಪಣತೊಟ್ಟು ಹಗಲು–ರಾತ್ರಿ ಶ್ರಮವಹಿಸುತ್ತಿದ್ದಾರೆ ಎಂದ ಸುನಿಲ್ ಬೋಸ್ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪುತ್ತಿದೆಯೇ ಎಂಬುದರ ಬಗ್ಗೆ ನೀವು ಗಮನ ಹರಿಸಿದರೆ ಒಳ್ಳೆಯದು ಎಂದರು.

ಪಾರು ಪತ್ತೇದಾರ್ ಮೂಗೂರು ಎಂಬಿ ಸಾಗರ್, ಮಾಜಿ ಪುರಸಭಾ ಸದಸ್ಯ ರಾಘವೇಂದ್ರ, ಕಾಂಗ್ರೆಸ್ ಮುಖಂಡರಾದ ನದೀಮ್ ಪಾಸಾ, ಜಫುಲ್ಲ, ಸೈಯದ್ ಅಲಿ, ಅಬ್ದುಲ್ ಅತಿಕ್, ಮೊಯ್ಲಿ ಸಿದ್ದರಾಜು ಮತ್ತಿತರರು ಹಾಜರಿದ್ದರು.

ರೈಲಿಗೆ ಸಿಲುಕಿ ಅಪರಿಚಿತ ಸಾವು

ನಂಜನಗೂಡು: ಐವತ್ತು ವರ್ಷದ ಅಪರಿಚಿತ ವ್ಯಕ್ತಿಯೊಬ್ಬರು ಚಲಿಸುತ್ತಿದ್ದ ರೈಲುಗಾಡಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೌಲಂದೆ ರೈಲು ನಿಲ್ದಾಣದ ಬಳಿ ಸಂಭವಿಸಿದೆ. ಸುಮಾರು 5.6 ಎತ್ತರವುಳ್ಳ, ಸಾಧಾರಣ ಮೈಕಟ್ಟು, ಕೋಲು ಮುಖ, ಎಣ್ಣೆಗೆಂಪು ಬಣ್ಣ, ಬಲಗೈ ಮೇಲೆ ಅಮ್ಮ ಎಂದು ಹಸಿರು ಹಚ್ಚೆಯ ಗುರುತು ಇದೆ, ಶವವನ್ನು ಕೆ.ಆರ್.ಆಸ್ಪತ್ರೆಯ ಶವಗಾರದಲ್ಲಿ ಇರಿಸಲಾಗಿದ್ದು, ವಾರಸುದಾರರು ನಂಜನಗೂಡು ರೈಲ್ವೆ ಪೊಲೀಸರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮಾದಕ ವಸ್ತುಗಳ ಬಗ್ಗೆ ಜಾಗೃತಿ

ಹುಣಸೂರು, ಜೂ.28– ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಎನ್.ಮುನಿಯಪ್ಪ ಅವರ ನೇತೃತ್ವದಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆ ನಿಷೇಧದ ಕುರಿತ ಕಾನೂನು ಅರಿವು ಕಾರ್ಯಕ್ರಮವನ್ನು ಹನಗೋಡು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಎಳೆಯ ವಯಸ್ಸಿನವರು ಕುತೂಹಲದಿಂದ ಮಾದಕ ವಸ್ತುಗಳನ್ನು ಸೇವಿಸಿ, ವ್ಯಸನಿಗಳಾಗುತ್ತಿದ್ದಾರೆ ಎಂದರು. ಅಫೀಮು, ಗಾಂಜಾ, ಚರಸ್, ತಂಬಾಕು ಪದಾರ್ಥಗಳ ಸೇವನೆ ಬಗ್ಗೆ ಅರಿವು ಮೂಡಿಸುವುದು ಅಗತ್ಯವಾಗಿದೆ. ದುಷ್ಟ ಚಟಗಳಿಂದ ಯುವಜನತೆ ದೂರ ಉಳಿಯುವಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಮಾದಕ ವ್ಯಸನಿಗಳು ಸಮಾಜಕ್ಕೆ ಹೊರೆಯಾಗಿದ್ದು, ಸಾಮಾಜಿಕ ಸ್ವಾಸ್ಥ್ಯ ಕಲುಷಿತಗೊಳಿಸುತ್ತಿದ್ದಾರೆ ಎಂದರು. ಸೈಬರ್ ಅಪರಾಧಗಳಾದ ಓಟಿಪಿ ಫ್ರಾಡ್ ಓ ಎಲ್ ಎಕ್ಸ ಇನ್ವೆಸ್ಟ್‌ಮೆಂಟ್ ಕಾರ್ಡ್ ಜಾಬ್ ಕಾರ್ಡ್ ಕ್ರಿಪ್ಟೋ ಕರೆನ್ಸಿ, ಕ್ರೆಡಿಟ್ ಕಾರ್ಡ್ ಅಂಡ್ ಡೆಬಿಟ್ ಕಾರ್ಡ್ ಫ್ರಾಡ್, ಇತ್ಯಾದಿಗಳ ಬಗ್ಗೆ ಸವಿವರವಾಗಿ ತಿಳಿಸಿಕೊಡಲಾಯಿತು ಹಾಗೂ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಹಣವನ್ನು ಇಟ್ಟಿರುವವರು ಯಾವುದೇ ಲಿಂಕ್‌ಗಳನ್ನು ಕ್ಲಿಕ್ ಮಾಡಿ ನಿಮ್ಮ ಬ್ಯಾಂಕಿಗೆ ಸಂಬಂಧಿಸಿದ ವೈಯಕ್ತಿಕ ಮಾಹಿತಿಗಳನ್ನು ನಮೂದಿಸಬೇಡಿ ಎಂದರು.

ಶಾಸಕ ಜಿಡಿ ಹರೀಶ್ ಗೌಡರಿಗೆ ಸನ್ಮಾನ



ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಚುನಾವಣೆಯಲ್ಲಿ ನಿರ್ದೇಶಕರಾಗಿ ಗೆಲುವು ಸಾಧಿಸಿದ ಹುಣಸೂರು ಶಾಸಕ ಜಿಡಿ ಹರೀಶ್ ಗೌಡರನ್ನು ಹುಣಸೂರು ತಾಲೂಕು ಕಸಬಾ ಹೋಬಳಿ ಬನ್ನಿಕುಪ್ಪೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಯರಾಮೇಗೌಡ, ನಿರ್ದೇಶಕರಾದ ಗೋವಿಂದೇಗೌಡ, ಚೆಲುವರಾಜ್ ಪಿಪಿ, ಚೌಡನಾಯಕ, ಅಣ್ಣಯ್ಯ ನಾಯ್ಕ, ಪುಟ್ಟ ನಾಯ್ಕ, ನಾಗಯ್ಯ ಹಾಗೂ ಮುಖಂಡರಾದ ಮಹದೇವಸ್ವಾಮಿ ಶಾಲು ಹೊದಿಸಿ ಅಭಿನಂದಿಸಿದರು.

ಅರ್ಜಿ ಆಹ್ವಾನ

ಮೈಸೂರು, ಜೂ.28– ಬನ್ನೂರು ಪುರಸಭೆಯಿಂದ 2025–26ನೇ ಸಾಲಿನ ಎಸ್‌ಎಫ್‌ಸಿ ಮುಕ್ತ ನಿಧಿ ಹಾಗೂ ಪುರಸಭಾ ನಿಧಿ ಅನುದಾನದಡಿ ಶೇ.24.10, ಶೇ.7.25 ಮತ್ತು ಶೇ.5ರ ಯೋಜನೆಯ ಅನುದಾನದಲ್ಲಿ ವಿವಿಧ ಸೌಲಭ್ಯಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಶೇ.24.10ರ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಶೇ.7.25 ಯೋಜನೆಯಡಿ ಇತರೆ ಹಿಂದುಳಿದ ವರ್ಗಗಳ ವೈಯಕ್ತಿಕ ಕಾರ್ಯಕ್ರಮದಡಿಯಲ್ಲಿ ಬಿಇ, ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ಸಹಾಯಧನ ನೀಡುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಪ್ರಕಟಣೆಗೊಂಡ ದಿನಾಂಕದಿಂದ ಜುಲೈ 31ರ ಒಳಗಾಗಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪುರಸಭೆಯ ಬಡತನ ನಿರ್ಮೂಲನಾ ಕೋಶದ ಅಧಿಕಾರಿಗಳನ್ನು ಕಚೇರಿ ವೇಳೆ ಭೇಟಿ ನೀಡಿ ಅಗತ್ಯ ಮಾಹಿತಿ ಪಡೆಯಬಹುದು ಎಂದು ಬನ್ನೂರು ಪುರಸಭಾ ಮುಖ್ಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋರಂ ಅಭಾವ: ತುಂಬಲ ಗ್ರಾಪಂ ಸಾಮಾನ್ಯ ಸಭೆ ರದ್ದು

ಅಧ್ಯಕ್ಷರ ನಡೆ ಖಂಡಿಸಿ ಸಭೆಗೆ ಗೈರಾದ ಸದಸ್ಯರು

ತಿ.ನರಸೀಪುರ, ಜೂ.28– ತಾಲೂಕಿನ ತುಂಬಲ ಗ್ರಾಪಂನಲ್ಲಿ ಗುರುವಾರ ಕರೆದಿದ್ದ ಸಾಮಾನ್ಯ ಸಭೆ ಸದಸ್ಯರ ಕೋರಂ ಅಭಾವದಿಂದ ಎರಡನೇ ಬಾರಿಗೆ ರದ್ದಾಯಿತು. ಒಟ್ಟು 13 ಸದಸ್ಯ ಬಲದ ಗ್ರಾಪಂನಲ್ಲಿ ಸಭೆ ನಡೆಸಲು 7 ಸದಸ್ಯರ ಅವಶ್ಯಕತೆ ಇದ್ದು, ಇಂದಿನ ಸಭೆಗೆ ಓರ್ವ ಸದಸ್ಯನ ಕೊರತೆ ಉಂಟಾದ ಹಿನ್ನೆಲೆಯಲ್ಲಿ ಅಧ್ಯಕ್ಷ ರಾಮನಂಜಯ್ಯ ಸಭೆಯನ್ನು ರದ್ದುಗೊಳಿಸಿದರು.

ಸಭೆಗೆ ಅಧ್ಯಕ್ಷ ರಾಮನಂಜಯ್ಯ, ಸದಸ್ಯರಾದ ಬಸವರಾಜು, ರತ್ನಮ್ಮ, ಸರಸ್ವತಮ್ಮ, ಪದ್ಮ ಹಾಗೂ ಅನಿತಾ ಹಾಜರಾಗಿದ್ದರೆ, ಉಪಾಧ್ಯಕ್ಷೆ ಉಮಾ, ಮಾಜಿ ಉಪಾಧ್ಯಕ್ಷರಾದ ಸತೀಶ್, ಚಂದ್ರಶೇಖರ್ (ಗುಂಡ), ಶೇಖರ್, ಸದಸ್ಯರಾದ ಕಂಬಯ್ಯ, ಸುಲೋಚನ, ಮಣಿಯಮ್ಮ ಗೈರಾಗುವ ಮೂಲಕ ಅಧ್ಯಕ್ಷರ ಮೇಲೆ ತಮಗೆ ವಿಶ್ವಾಸವಿಲ್ಲ ಎಂಬ ಸಂದೇಶ ರವಾನಿಸಿದರು. ಈ ಹಿನ್ನೆಲೆಯಲ್ಲಿ ಕೋರಂ ಅಭಾವದಿಂದ ಸಭೆ ರದ್ದುಗೊಳಿಸಲಾಯಿತು. ಈ ಹಿಂದೆ ಮೇ 12ರಂದು ಅಧ್ಯಕ್ಷ ರಾಮನಂಜಯ್ಯ ಸಾಮಾನ್ಯ ಸಭೆ ಕರೆದು ಕೋರಂ ಕೊರತೆ ಉಂಟಾಗಲಿದೆ ಎಂಬುದನ್ನರಿತು ಕ್ಷುಲ್ಲಕ ಕಾರಣವೊಡ್ಡಿ ಸಭೆ ಮುಂದೂಡಿದರು ಎನ್ನಲಾಗಿದೆ.



ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಚಂದ್ರಶೇಖರ್ ಮಾತನಾಡಿದರು.

ಆಂತರಿಕ ಒಪ್ಪಂದ ಬ್ರೇಕ್ ಮಾಡಿದ ರಾಮನಂಜಯ್ಯ: ಅಧ್ಯಕ್ಷ ರಾಮನಂಜಯ್ಯ ಕರೆದಿದ್ದ ಸಾಮಾನ್ಯ ಸಭೆಗೆ ಗೈರಾದ ಸದಸ್ಯರು ಸುದ್ದಿಗೋಷ್ಠಿ ನಡೆಸಿ ಅಧ್ಯಕ್ಷರ ನಡೆ ಖಂಡಿಸಿದರು.

ಗ್ರಾಪಂ ಮಾಜಿ ಉಪಾಧ್ಯಕ್ಷ ಶೇಖರ್ ಮಾತನಾಡಿ, ಅಧ್ಯಕ್ಷ ರಾಮನಂಜಯ್ಯರಿಗೆ ಅಧಿಕಾರದ ದುರಾಸೆ ಹೆಚ್ಚಾಗಿದೆ. ಹಾಗಾಗಿ ಚುನಾವಣಾ ಪೂರ್ವದಲ್ಲಿ ನಡೆದ ಆಂತರಿಕ ಒಪ್ಪಂದವನ್ನು ಮುರಿದು ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ರಾಮನಂಜಯ್ಯರನ್ನು 14 ತಿಂಗಳ ಅವಧಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು ಅವಧಿ ಮುಗಿದ ನಂತರ ರಾಜೀನಾಮೆ ನೀಡಿ ಬೇರೊಬ್ಬರಿಗೆ ಅವಕಾಶ ಕಲ್ಪಿಸುವಂತೆ ಮಾತುಕತೆ ನಡೆದಿತ್ತು. ಆದರೆ ಅಧಿಕಾರದ ದುರಾಸೆಯಿಂದ ರಾಮನಂಜಯ್ಯ ತಮ್ಮ ಅಧಿಕಾರಾವಧಿ ಮುಗಿದಿದ್ದರೂ ರಾಜೀನಾಮೆ ನೀಡಿಲ್ಲ. ಚುನಾವಣಾ ಪೂರ್ವ ನಡೆದ ಒಪ್ಪಂದ ಮುರಿದು ಅಧಿಕಾರದಲ್ಲಿ ಮುಂದುವರೆದಿದ್ದಾರೆ ಎಂದು ಆರೋಪಿಸಿದ ಅವರು ರಾಜೀನಾಮೆ ನೀಡುವ ಸಂಬಂಧ ಕಸಬಾ ಹೋಬಳಿ ಮುಖಂಡರು ಕರೆದ ಮಾತುಕತೆ ಸಭೆಗೂ ಬರದೇ ನಿಯಮ ಉಲ್ಲಂಘಿಸಿದ್ದಾರೆ. ಗ್ರಾಪಂನಲ್ಲಿ ಅಧ್ಯಕ್ಷರು ಗೋಲ್‌ಮಾಲ್ ವ್ಯವಹಾರ ಮಾಡುತ್ತಿದ್ದು, ಬಿಲ್‌ಗಳನ್ನು ಅಕ್ರಮವಾಗಿ ಮಾಡಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ಮತ್ತೊಬ್ಬ ಮಾಜಿ ಉಪಾಧ್ಯಕ್ಷ ಚಂದ್ರಶೇಖರ್(ಗುಂಡ) ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದಲ್ಲಿ ಕಟ್ಟಕಡೆ ವ್ಯಕ್ತಿಗೂ ನ್ಯಾಯ ದೊರಕಿಸಿಕೊಡಬೇಕೆಂಬ ಉದ್ದೇಶದಿಂದ ಆಡಳಿತ ನಡೆಸುತ್ತಿದ್ದಾರೆ. ತುಂಬಲ ಗ್ರಾಪಂನಲ್ಲಿ ಅಧಿಕಾರ ಹಂಚಿಕೆಗೆ ಮಾತುಕತೆ ನಡೆದು ಎರಡನೇ ಅವಧಿಗೆ ರಾಮನಂಜಯ್ಯರಿಗೆ ಅಧಿಕಾರ ನೀಡಿದ್ದೆವು. 14 ತಿಂಗಳ ನಂತರ ರಾಜೀನಾಮೆ ಕೊಡಬೇಕಾದ ಅವರು ಮಾತು ತಪ್ಪಿದರು. ಅಧಿಕಾರ ಯಾರಿಗೂ ಶಾಶ್ವತವಲ್ಲ. ಹಣ ಬಲ ಇರುವವರೇ ಅಧಿಕಾರ ಪಡೆಯುವಂತದ್ದಲ್ಲ. ನಮ್ಮಲ್ಯಾರೂ ಹಣವಂತರಿಲ್ಲ. ಕೊಟ್ಟ ಮಾತಿಗೆ ಯಾರೂ ತಪ್ಪಬಾರದು. ಬಡವನಿಗೂ ಅಧಿಕಾರ ಸಿಗಬೇಕೆಂಬುದು ಸಂವಿಧಾನದ ಆಶಯ ಆಗಿದೆ. ಅಧ್ಯಕ್ಷರು ಹಿರಿಯರಿದ್ದಾರೆ. ಯಾವುದೇ ಇರುಸು ಮುರಿಸು ಮಾಡಿಕೊಳ್ಳದೇ ಆಂತರಿಕ ಒಪ್ಪಂದದಂತೆ ಅಧಿಕಾರ ಹಸ್ತಾಂತರ ಮಾಡುವ ಮೂಲಕ ಒಪ್ಪಂದದ ಪ್ರಕಾರ ನಡೆದುಕೊಳ್ಳಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಉಪಾಧ್ಯಕ್ಷ ಸತೀಶ್, ಸದಸ್ಯ ಕಂಬಯ್ಯ, ಹೊಸಕೋಟೆ ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು ಹಾಜರಿದ್ದರು.

ಬಹಳಷ್ಟು ಜನರಲ್ಲಿ ಹಣ, ಆಸ್ತಿ ಇರುತ್ತೆ; ಆದರೆ ಮಮತೆ, ಮಾನವೀಯತೆನೇ ಇರೋಲ್ಲ!

ಬೆಂಗಳೂರಿನ ವಿಶ್ವ ಒಕ್ಕಲಿಗ ಸಂಸ್ಥಾನದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಬೇಸರ

ಮೈಸೂರು, ಜೂ.28(ಬಿಎಲ್‌ಯು)– ಇಂದು ಬಹಳಷ್ಟು ಜನರಲ್ಲಿ ಜೇಬು ತುಂಬ ಹಣವಿದೆ, ಸಾಕಷ್ಟು ಆಸ್ತಿ–ಪಾಸ್ತಿ ಕೂಡ ಜೋರಾಗಿದೆ. ಆದರೆ ಮಮತೆ ಹಾಗೂ ಮಾನವೀಯತೆ ಇಲ್ಲದ ಕಲ್ಲು ಹೃದಯಿಗಳಾಗಿದ್ದಾರೆ ಎಂದು ಬೆಂಗಳೂರಿನ ಕೆಂಗೇರಿಯ ವಿಶ್ವ ಒಕ್ಕಲಿಗ ಸಂಸ್ಥಾನದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದ್ದಾರೆ.



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಶನಿವಾರ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಅಂತಾರಾಷ್ಟ್ರೀಯ ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ತಿಮಕಾಪುರ ಅವರಿಗೆ ಮನ್‌ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಇಂದು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಆಯೋಜಿಸಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಾರಿ ಮಾಡಿದ ಮೀಸಲಾತಿಯ 106ರ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ಸ್ವಾತಂತ್ರ್ಯ ಪಡೆದ ಸಮಯದಲ್ಲಿ ತಲಾದಾಯ 234 ರೂಪಾಯಿ ಇತ್ತು ಆದರೆ ಈಗ ಎರಡು ಲಕ್ಷ ವಿದೆ. ಈಗಿನ ಜನರಲ್ಲಿ ಹಣ ಇರಬಹುದು, ಆಸ್ತಿ–ಪಾಸ್ತಿಯೂ ಇರಬಹುದು. ಆದರೆ ಸ್ವಾಸ್ಥ್ಯ ಸಮಾಜಕ್ಕೆ ಅವಶ್ಯವಾದ ಮಮತೆ, ಕರುಣೆ, ಭಾವನಾತ್ಮಕತೆ ಹಾಗೂ ಮಾನವೀಯತೆ ಇಲ್ಲದಂತಾಗಿದೆ ಎಂದು ನೊಂದು ನುಡಿದರು.

ಊಟಕ್ಕೂ ಕಷ್ಟವಿತ್ತು ನಾವು ವಿದ್ಯಾಭ್ಯಾಸ ಮಾಡುವ ಸಂದರ್ಭದಲ್ಲಿ ಒಂದೊತ್ತಿನ ಊಟಕ್ಕೂ ಬಹಳ ಕಷ್ಟವಿತ್ತು. ಊಟಕ್ಕಾಗಿ ನಾವು ತುಮಕೂರಿನ ಸಿದ್ದಗಂಗಾ ಮಠ ಹಾಗೂ ಆದಿಚುಂಚನಗಿರಿ ಮಠಕ್ಕೆ ದಾಖಲಾಗಿದ್ದೆವು. ನಾವು ಊಟ ಬೇಕೆಂದು ಮಠ ಸೇರಿದ್ದೇವೆಯೇ ಹೊರತು ವಿದ್ಯಾಭ್ಯಾಸಕ್ಕಾಗಿ ಅಲ್ಲ. ಆದರೆ ಹೊಟ್ಟೆ ತುಂಬಿಸಿಕೊಳ್ಳುವ ಜೊತೆಗೆ ಕಲಿತ ವಿದ್ಯಾಭ್ಯಾಸದಿಂದ ನಾನು ಕೆಎಎಸ್‌ಗೆ ಆಯ್ಕೆಯಾದೆ ಎಂದರು.

ನಾನು ಕೆಎಎಸ್ ಅಧಿಕಾರಿಯಾಗಿ 23 ವರ್ಷಗಳ ಕಾಲ ವಿವಿಧ ಜಿಲ್ಲೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದೆ. ನನ್ನ ಕರ್ತವ್ಯದ ಸಮಯ ಮುಗಿದ ನಂತರ ಐಎಎಸ್ ಹಾಗೂ ಕೆಎಎಸ್ ಪರೀಕ್ಷೆ ಬರೆಯುವವರಿಗೆ ತರಬೇತಿ ನೀಡಿದೆ ಎಂದು ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ತಮ್ಮ ಪೂರ್ವಾಶ್ರಮದ ದಿನಗಳನ್ನು ಮೆಲುಕು ಹಾಕಿದರು.

ಕೃಷ್ಣರಾಜ ಒಡೆಯರ್ ಅವರು ನೂರು ವರ್ಷಗಳ ಹಿಂದೆಯೇ ಸಂವಿಧಾನಾತ್ಮಕವಾಗಿ ಮೀಸಲಾತಿ ನೀಡಿದರು. ಇದರಿಂದ ದಲಿತ ಸಮುದಾಯ ಮಾತ್ರವಲ್ಲದೆ ಹಿಂದುಳಿದ ವರ್ಗಕ್ಕೂ ಅನುಕೂಲವಾಯಿತು ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತರಾದ ಡಾ. ವಸಂತಕುಮಾರ್ ತಿಮಕಾಪುರ ಅವರು ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಆವಿಷ್ಕಾರ ಮಾಡಿದ್ದಾರೆ. ಬೆಳೆಗಳಿಗೆ ವೈರಸ್ ತಡೆಗಟ್ಟುವ ಔಷಧಿ ಕಂಡುಹಿಡಿದಿದ್ದಾರೆ. ಈ ಮೂಲಕ ಇವರು ಕಂಡುಹಿಡಿದ ಔಷಧಿ ರೈತರಿಗೆ ಬಹು ಉಪಯೋಗಿಯಾಗಿದೆ ಎಂದು ಹೇಳಿದರು.

ಈ ಮೊದಲು ರಾಗಿ, ಭತ್ತ ಸೇರಿದಂತೆ ಹಲವು ಬೆಳೆ ಬೆಳೆಯಲಾಗುತ್ತಿತ್ತು. ಆದರೆ ವೈರಸ್ ಸೇರಿದಂತೆ ಹಲವು ರೀತಿ ಕೀಟ ಬಾಧೆಯಿಂದ ಇಳುವರಿ ಬರುತ್ತಿರಲಿಲ್ಲ ಆದರೆ ಈಗ ಬೆಳೆ ಸಂರಕ್ಷಣೆಗೆ ಕೃಷಿ ವಿಜ್ಞಾನದಲ್ಲಿ ಬಹಳಷ್ಟು ಆವಿಷ್ಕಾರಗಳಾಗಿದ್ದು, ರೈತರಿಗೆ ಅನುಕೂಲವಾಗುತ್ತಿದೆ ಎಂದು ಹೇಳಿದರು.

ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ನಾವು ಬೆಳೆಯುವುದರ ಜೊತೆಗೆ ಸಮಾಜದ ಬೆಳವಣಿಗೆಗೆ ಕಾರಣರಾಗಬೇಕು. ದೀಪದ ಬೆಳಕನ್ನು ಮತ್ತಷ್ಟು ಹೆಚ್ಚು ಮಾಡಬೇಕು. ಇದಕ್ಕೂ ಮೊದಲು ನಾವು ಇತಿಹಾಸವನ್ನು ತಿಳಿಯಬೇಕು. ಇತಿಹಾಸ ತಿಳಿಯದವರಿಗೆ ಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇತಿಹಾಸ ತಿಳಿದು ಬಹಳಷ್ಟು ಮಹನೀಯರ ಸಾಧನೆಯಿಂದ ಉತ್ತೇಜನ ಪಡೆದು ಸಾಧನೆ ಮಾಡಬೇಕು ಎಂದು ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಈ ವೇಳೆ ಅಂತರರಾಷ್ಟ್ರೀಯ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ವಿಮಕಾಪುರ ಅವರಿಗೆ ಮನ್ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಅಲ್ಲದೆ ಹಲವು ಸಾಧಕರಿಗೆ ಪದ್ಮಭೂಷಣ ಯಶೋಧರಮ್ಮ ದಾಸಪ್ಪ ಪ್ರಶಸ್ತಿ, ವಿಶೇಷ ಸೇವಾ ಭೂಷಣ ಪ್ರಶಸ್ತಿ, ಮಾದರಿ ರೈತ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು.

ತುಮಕೂರಿನ ಅರೆಶಂಕರ ಮಠದ ಶ್ರೀ ಸಿದ್ದರಾಮ ಚೈತನ್ಯ ಸ್ವಾಮೀಜಿ, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕೃಷಿ ವಿಜ್ಞಾನಿ ಹೆಚ್.ಎಲ್.ವಸಂತಕುಮಾರ್, ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ರಾಜ್ಯಾಧ್ಯಕ್ಷೆ ಹೆಚ್.ಎಲ್. ಯಮುನಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕಣ್ಣಪ್ಪ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ರಾಜರತ್ನಾಕರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ–1), ಎಕ್ಸ್ ಅಂಡ್ ವೈ (ಕ–3)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ):

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಹದೇಶ್ವರ ಬೆಟ್ಟದ ಅರಣ್ಯದಲ್ಲಿ ಹುಲಿ ಸಾವಿನ ಪ್ರಕರಣ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಮಲೆ ಮಹದೇಶ್ವರ ಅರಣ್ಯ ಪ್ರದೇಶದಲ್ಲಿ ಐದು ಹುಲಿಗಳು ಅನುಮಾನಾಸ್ಪದ ಸಾವಿನ ಪ್ರಕರಣವನ್ನು ಖಂಡಿಸಿ, ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಮೈಸೂರು ದೇವರಾಜ ಅರಸು ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.28(ಜಿಎ)–ಮಲೆ ಮಹದೇಶ್ವರ ಅರಣ್ಯ ಪ್ರದೇಶದಲ್ಲಿ ಐದು ಹುಲಿಗಳು ಅನುಮಾನಾಸ್ಪದ ಸಾವಿನ ಈ ಪ್ರಕರಣವನ್ನು ಖಂಡಿಸಿ, ಕರ್ನಾಟಕ ಹಿತರಕ್ಷಣಾ ವೇದಿಕೆ ವತಿಯಿಂದ ಮೈಸೂರು ದೇವರಾಜ ಅರಸು ರಸ್ತೆಯಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಹಾಗೂ ಕರ್ತವ್ಯಲೋಪ ಎಸಗಿರುವ ಹಿರಿಯ ಅಧಿಕಾರಿಗಳ ವಿರುದ್ಧವು ಶಿಸ್ತು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಹುಲಿಗಳ ಬಗ್ಗೆ ಸಮಾಜ ಮತ್ತು ಸರ್ಕಾರ ಎರಡೂ ಬಹಳ ಪ್ರಾಮುಖ್ಯತೆ ನೀಡಿದೆ. ತಾಯಿ ಹುಲಿ ಹಾಗೂ 4 ಮರಿಗಳು ಸಾವಿಗೀಡಾಗಿರುವುದು ಆಘಾತಕಾರಿಯಾಗಿರುವ ವಿಷಯ. ಹುಲಿಗಳ ಸಾವಿಗೆ ಅರಣ್ಯ ಇಲಾಖೆ ನಿರ್ಲಕ್ಷ್ಯವೇ ಕಾರಣವಾಗಿದ್ದು, ಈ ಬಗ್ಗೆ ಸಂಪೂರ್ಣ ತನಿಖೆಯಾಗಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು. ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಬಹಳಷ್ಟು ಜನದಟ್ಟಣೆಗೆ ಅವಕಾಶ ಮಾಡಿಕೊಟ್ಟಿರುವುದು ಇಂತಹ ಅನಾಹುತಗಳಿಗೆ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ದೂರಿದರು.

ಅರಣ್ಯ ಪ್ರದೇಶಗಳಲ್ಲಿ ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳು ದಿನೇ ದಿನೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ಅವಘಡಗಳು ಹೆಚ್ಚಾಗುತ್ತಿದೆ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ವನ್ಯಜೀವಿ ಛಾಯಾಗ್ರಹಕ ಉಮೇಶ್, ಜಿ.ರಾಘವೇಂದ್ರ ಎಸ್.ಎನ್. ರಾಜೇಶ್, ನಂಜುಂಡಿ, ರವಿಚಂದ್ರ, ನೀತು, ಮಂಜುನಾಥ್, ರವಿ, ಯತೀಶ್ ಬಾಬು, ಈಶ್ವರ್ ಇನ್ನಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜು.13ಕ್ಕೆ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ಚುನಾವಣೆ

ಮೈಸೂರು, ಜೂ.28(ಎಸ್‌ಪಿಎನ್)– ಮೈಸೂರಿನ ಜಲಪುರಿಯಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘಕ್ಕೆ 2025–2030ನೇ ಸಾಲಿಗೆ ಜು.13ರಂದು ಚುನಾವಣೆ ನಡೆಯುವುದರಿಂದ ಆಕಾಂಕ್ಷಿಗಳು ಜು.1ರಿಂದ 4ರವರೆಗೆ ಕಚೇರಿ ಸಮಯದಲ್ಲಿ ಭೇಟಿ ನೀಡಿ ಅರ್ಜಿಗಳನ್ನು ಪಡೆಯಬಹುದು ಎಂದು ಸಂಘದ ಪತ್ರಿಕಾ ಕಾರ್ಯದರ್ಶಿ ಜೆ.ಚಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಮೊದಲ ಆಷಾಢ ಶುಕ್ರವಾರದ ವಿಶೇಷ ಪೂಜಾ ಉತ್ಸವ

ಮುನ್ನೆಚ್ಚರಿಕಾ ಕ್ರಮವಾಗಿ ಪ್ರತ್ಯೇಕ ಸರದಿ ಸಾಲು; ಭಕ್ತರಿಗೆ ಭಾರೀ ಕಿರಿಕಿರಿ

ಮೈಸೂರು, ಜೂ.28(ಎಂಟಿವೈ)– ಆಷಾಢ ಮೊದಲ ಶುಕ್ರವಾರ ಚಾಮುಂಡಿ ಬೆಟ್ಟದಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ದರ್ಶನ ಪಡೆಯಲು ಮೆಟ್ಟಿಲು ಮೂಲಕ ಬಂದ ಭಕ್ತರು ಪರದಾಡಿದ್ದು, ಮುಂದಿನ ವಾರದಿಂದ ಮೆಟ್ಟಿಲುಗಳ ಮೂಲಕ ಬಂದ ಭಕ್ತರಿಗಾಗಿ ಮಾಡಿದ್ದ ಪ್ರತ್ಯೇಕ ಸಾಲನ್ನು ರದ್ದು ಮಾಡುವಂತೆ ವ್ಯಾಪಕ ಆಗ್ರಹ ಕೇಳಿ ಬಂದಿದೆ.



ಗೋಪುರಕ್ಕೆ ಕೈ ಮುಗಿದು ಹೋಗಲು ಅವಕಾಶ ಕೊಡಿ

ಪ್ರತಿ ಆಷಾಢ ಶುಕ್ರವಾರದಂದು ಮೆಟ್ಟಿಲು ಹತ್ತಿ ಬರುವ ಭಕ್ತರಲ್ಲಿ ಶೇ.60ರಷ್ಟು ಭಕ್ತರು ದೇವಾಲಯದ ಮುಂಭಾಗಕ್ಕೆ ಬಂದು ಗೋಪುರಕ್ಕೆ ಕೈ ಮುಗಿದು ವಾಪಸ್ಸಾಗುತ್ತಿದ್ದರು. ಉಚಿತ ಬಸ್‌ನಲ್ಲಿ ಬರುವ ಭಕ್ತರಲ್ಲಿ ಅನೇಕರು ಹೊರಗಿನಿಂದಲೇ ದೇವಾಲಯಕ್ಕೆ ಕೈ ಮುಗಿದು ಕರ್ಪೂರ ಹಚ್ಚಿ ವಾಪಸ್ಸಾಗುತ್ತಿದ್ದರು. ಆದ್ರೆ, ಈ ಬಾರಿ ಬಸ್‌ನಲ್ಲಿ ಬಂದವರು, ಮೆಟ್ಟಿಲು ಮೂಲಕ ಬಂದ ಎಲ್ಲರನ್ನೂ ಬ್ಯಾರಿಕೇಡ್‌ನಲ್ಲಿ ಸರದಿ ಸಾಲಿನಲ್ಲಿಯೇ ದೇವಾಲಯಕ್ಕೆ ತೆರಳುವಂತೆ ಮಾಡಿದ್ದರಿಂದ ಜಂಗುಳಿ ಹೆಚ್ಚಾಗಿ ಸಮಸ್ಯೆ ಉಲ್ಬಣಿಸಿದೆ. ಆ ಕಾರಣದಿಂದ ಮುಂದಿನ ವಾರದಿಂದಲಾದರೂ ದೇವಾಲಯದ ಹೊರಗೆ ಕೈ ಮುಗಿದು ಹೋಗುವವರಿಗೆ ಅನುವು ಮಾಡಿಕೊಡಬೇಕು. ಮಹಾಬಲೇಶ್ವರ ದೇವಾಲಯದ ಪಕ್ಕದ ರಸ್ತೆಯಲ್ಲಿ ಬಂದು, ಅದೇ ರಸ್ತೆಯಲ್ಲಿ ವಾಪಸ್ಸಾಗಲು ಅವಕಾಶ ಮಾಡಿಕೊಟ್ಟರೆ ಬೆಟ್ಟದಲ್ಲಿ ಜಂಗುಳಿ ನಿಯಂತ್ರಿಸಬಹುದಾಗಿದೆ.

ಪ್ರಸಾದ ವಿತರಣಾ ಸ್ಥಳ ಪಾರ್ಕಿಂಗ್ ಕಟ್ಟಡಕ್ಕೆ ಸ್ಥಳಾಂತರಿಸಲು ಮನವಿ

ಕಾಲ್ತುಳಿತ ಭಯ ಅಧಿಕಾರಿಗಳಲ್ಲಿ ಕಾಡುತ್ತಿರುವುದರಿಂದ ಬೆಟ್ಟದಲ್ಲಿ ಅತಿಯಾದ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದೇ ಅವ್ಯವಸ್ಥೆಯ ಸಂದೇಶ ರವಾನೆಯಾಗಲು ಕಾರಣ. ಇದರಿಂದಲೇ ಪ್ರಸಾದ ವಿತರಿಸುವ ವ್ಯವಸ್ಥೆಯನ್ನು ಅರಣ್ಯ ಇಲಾಖೆಯ ಮಾಹಿತಿ ಕೇಂದ್ರದ ಪಕ್ಕದ ಮೈದಾನದಲ್ಲಿ ಮಾಡಲಾಗಿದೆ. ಆ ಸ್ಥಳ ಪ್ರಸಾದ ವಿತರಣೆಗೆ ಯೋಗ್ಯವಲ್ಲ ಎಂಬ ಅಭಿಪ್ರಾಯ ಕೇಳಿ ಬಂದಿದ್ದು, ಕಳೆದ ವರ್ಷದಂತೆ ಮಲ್ಟಿಲೆವೆಲ್ ಪಾರ್ಕಿಂಗ್ ಕಟ್ಟಡದಲ್ಲಿ ಪ್ರಸಾದ ವಿತರಿಸುವ ವ್ಯವಸ್ಥೆ ಸ್ಥಳಾಂತರಿಸುವಂತೆ ಭಕ್ತರು ಆಗ್ರಹಿಸಿದ್ದಾರೆ.

ಮೆಟ್ಟಿಲು ಮೂಲಕ ಬರುವ ಭಕ್ತರಿಗೆ ನೇರ ದರ್ಶನ ಪಡೆಯಲು ಬೆಟ್ಟದ ಮೇಲಿನ ಮೆಟ್ಟಿಲು ಮಾರ್ಗದಿಂದ ದೇವಾಲಯದವರೆಗೆ ಬ್ಯಾರಿಕೇಡ್ ಅಳವಡಿಸಿ ಪ್ರತ್ಯೇಕ ಲೈನ್ ಮಾಡಲಾಗಿತ್ತು. ನೇರ ದರ್ಶನ ಮಾಡಬಹುದೆಂಬ ನಿರೀಕ್ಷೆಯಿಂದ ಅಪಾರ ಸಂಖ್ಯೆಯ ಭಕ್ತರು ಮೆಟ್ಟಿಲು ಮಾರ್ಗದಲ್ಲಿ ಬೆಟ್ಟಕ್ಕೆ ಆಗಮಿಸಿದ್ದರಿಂದ ದರ್ಶನ ಪಡೆಯಲು ಸರದಿ ಸಾಲಿನಲ್ಲಿ ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು ಇದರಿಂದ ರೋಸಿ ಹೋದ ಭಕ್ತರು ಅವ್ಯವಸ್ಥೆ ಎಂದು ಆರೋಪಿಸಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಅಪ್ಲೋಡ್ ಮಾಡಿದ್ದು, ನೆಟ್ಟಿಗರು ವ್ಯಾಪಕ ಟೀಕೆ ಮಾಡಿದ್ದರು.

ಹತ್ತಾರು ವರ್ಷಗಳಿಂದ ಆಷಾಢ ಶುಕ್ರವಾರದಂತೆ ಮೆಟ್ಟಿಲು ಮೂಲಕ ಬೆಟ್ಟ ಹತ್ತುವ ನಾವು ಪ್ರತ್ಯೇಕ ಲೈನ್ ನಿರೀಕ್ಷಿಸಿರಲಿಲ್ಲ ನೇರ ದರ್ಶನ ಮಾಡಬಹುದು ಎಂದು ಅಧಿಕಾರಿಗಳೇ ಹೇಳಿದ್ದರಿಂದ ಮೆಟ್ಟಿಲು ಮೂಲಕ ಹೆಚ್ಚಿನ ಸಂಖ್ಯೆಯ ಭಕ್ತರು ಬಂದಿದ್ದಾರೆ. ಆದರೆ ದರ್ಶನ ಪಡೆಯಲು 3–4 ಗಂಟೆ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿತ್ತು ಹಿರಿಯ ನಾಗರಿಕರು, ಅನಾರೋಗ್ಯ ಪೀಡಿತರು ಮೂತ್ರ ವಿಸರ್ಜನೆ ಮಾಡಲು ಸಾಧ್ಯವಾಗದೆ ಪರದಾಡಿದ್ದಾರೆ. ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಮಾಡದೇ ಇದ್ದ ಕಾರಣ ಅನೇಕರು ನಿತ್ರಾಣಗೊಂಡಿದ್ದಾರೆ. ಸರದಿ ಸಾಲಿನಲ್ಲಿ ನಿಂತು ಸಾಕಾದರೂ ವಾಪಸ್ಸು ಬರಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು ಈ ಹಿನ್ನೆಲೆಯಲ್ಲಿ ಮೆಟ್ಟಿಲು ಮಾರ್ಗದಲ್ಲಿ ಬಂದವರಿಗೆ ಪ್ರತ್ಯೇಕ ಲೈನ್ ತೆಗೆದು ಹಾಕುವಂತೆ ಭಕ್ತರು ಆಗ್ರಹಿಸಿದ್ದಾರೆ

ಮೃತರ ಕುಟುಂಬಸ್ಥರಿಗೆ ಸಾಂತ್ವನ



ಹನೂರಿನ ಸತ್ತೇಗಾಲದ ಗ್ರಾಮದ ಬಳಿ ನಡೆದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಸತ್ತೇಗಾಲ ಗ್ರಾಮದ ಯಜಮಾನರಾದ ನಟರಾಜು ಹಾಗೂ ಮಾಯಪ್ಪನವರ ಮನೆಗಳಿಗೆ ಬಿಜೆಪಿ ಮುಖಂಡ ಡಾ. ಎಸ್. ದತ್ತೇಶ್ ಕುಮಾರ್ ಭೇಟಿ ನೀಡಿ, ವೈಯಕ್ತಿಕ ಪರಿಹಾರ ನೀಡುವ ಮೂಲಕ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಪಕ್ಷದ ಮುಖಂಡರುಗಳು ಉಪಸ್ಥಿತರಿದ್ದರು.

ದಲಿತ ಚಳವಳಿಯ ಮುಂದಿನ ಹಾದಿ ಕುರಿತು ಅವಲೋಕನ ಕಾರ್ಯಕ್ರಮ

ದಲಿತ ಚಳವಳಿಯಲ್ಲಿ ಯೂನಿಫಾರ್ಮಿಟಿ ಇಲ್ಲವೆಂದ ಮಾತ್ರಕ್ಕೆ ಯೂನಿಟಿ ಇಲ್ಲವೆಂದಲ್ಲ

● ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ● ಡಾ.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ಅವರಿಗೆ ಸನ್ಮಾನ

ಮೈಸೂರು,ಜೂ.28(ಪಿಎಂ)– ದಲಿತ ಚಳವಳಿಯಲ್ಲಿ ಯೂನಿಫಾರ್ಮಿಟಿ ಇಲ್ಲವೆಂದ ಮಾತ್ರಕ್ಕೆ ಯೂನಿಟಿ ಇಲ್ಲವೆಂದಲ್ಲ. ನಮ್ಮೆಲ್ಲರ ಹೋರಾಟದ ಉದ್ದೇಶ ಮಾತ್ರ ಒಂದೇ. ಅದು ಸಮಾನತೆ ಹಾಗೂ ನ್ಯಾಯಕ್ಕಾಗಿ ಆಗಿದೆ ಎಂದು ಮೈಸೂರು ವಿವಿ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಹೇಳಿದರು.

ಮೈಸೂರಿನ ಹುಣಸೂರು ರಸ್ತೆಯ ಹೋಟೆಲ್ ಲೀ ರುಚಿಯ ಕಾವೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ದಲಿತ ಚಳವಳಿಯ ಮುಂದಿನ ಹಾದಿ ಕುರಿತು ಒಂದು ಅವಲೋಕನ ಮತ್ತು ರಾಜ್ಯ ಸರ್ಕಾರದ ಡಾ.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ಅವರ ಸನ್ಮಾನ ಕಾರ್ಯಕ್ರಮದಲ್ಲಿ ದಲಿತ ಚಳವಳಿ ಕುರಿತು ಮಾತನಾಡಿದರು.

ಯಾವುದೇ ಸಂಘಟನೆಗಳು ಉಳಿದುಕೊಳ್ಳಬೇಕೆಂದರೆ ಸಿದ್ಧಾಂತ ಮುಖ್ಯ. ನಮ್ಮಲ್ಲಿ ಸಿದ್ಧಾಂತ ಬದಲಾಗಿಲ್ಲ. ಆಗ ಬಾರದು ಕೂಡ. ನಮ್ಮ ಸಿದ್ಧಾಂತವು ಅಂಬೇಡ್ಕರ್ ಅವರ ಆಲೋಚನೆಯ ತತ್ವಗಳಾದ ಸಮಾನತೆ ಹಾಗೂ ಮಾನ ವೀಯತೆಯನ್ನು ಒಳಗೊಂಡಿದೆ. ಸಂಘಟನೆ ಮತ್ತು ನಾಯಕತ್ವ ಕೂಡ ಎಲ್ಲಾ ಕಾಲದಲ್ಲೂ ಏಕರೂಪದಲ್ಲಿ ಇರಲಿಕ್ಕೆ ಸಾಧ್ಯವಿಲ್ಲ ಎಂದರು.

ಸಮಾಜ 50 ವರ್ಷಗಳ ಹಿಂದೆ ಇರುವಂತೆಯೇ ಇಂದಿಲ್ಲ. ಇಂದು ಮಾತನಾಡಿದ ಹೋರಾಟಗಾರರ ಅಭಿಪ್ರಾಯವೆಂದರೆ ಚಳವಳಿಯ ಮುಂದಿನ ಹಾದಿ ಹೇಗೆ ಎಂಬುದಾಗಿತ್ತು. ಅಂದರೆ ನಮ್ಮ ಹೋರಾಟದ ಮಾರ್ಗವನ್ನು ತಿದ್ದುಕೊಳ್ಳುವ ಹಾಗೂ ನಮ್ಮ ಸಿದ್ಧಾಂತವನ್ನು ಇನ್ನಷ್ಟು ಗಟ್ಟಿ ಮಾಡಿಕೊಳ್ಳುವ ಅಗತ್ಯವಿದೆ. ನಮ್ಮಲ್ಲಿ ಇರುವ ನ್ಯೂನತೆ ಸರಿಪಡಿಸಿಕೊಳ್ಳಬೇಕಿದೆ. ಹೋರಾಟದ ದಿಕ್ಕು ದೆಸೆಗಳನ್ನು ನಿರ್ಧಾರ ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಚರ್ಚೆ ಅಗತ್ಯವಿದೆ. ಏಕೆಂದರೆ ಅಂದಿನ ದಿನಗಳಲ್ಲಿ ಶೋಷಣೆ ನೇರವಾಗಿತ್ತು. ಆದರೆ ಇಂದು ಆ ರೀತಿಯಲ್ಲಿ ಇಲ್ಲ ಎಂದು ತಿಳಿಸಿದರು.

ಎಲ್ಲಿವರೆಗೆ ಬದುಕು, ಸಂಕಟಗಳು ಇರುತ್ತವೋ ಅಲ್ಲಿ ವರೆಗೆ ಚಳವಳಿ ಅಗತ್ಯ. ಕೆಲ ವರ್ಷಗಳ ಹಿಂದೆ ಟೌನ್‌ಹಾಲ್ ಮೈದಾನದಲ್ಲಿ ವಿಘಟನೆಗೊಂಡಿರುವ ಎಲ್ಲಾ ದಲಿತ ಸಂಘಟನೆಗಳನ್ನು ಒಟ್ಟುಗೂಡಿಸಲು ಸುದೀರ್ಘ ಚರ್ಚೆ ನಡೆಯಿತು. ಆದರೆ ಸಮಸ್ಯೆಗಳು ಸಾವಿರಾರು ಇದ್ದು, ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಸಮಸ್ಯೆಗಳಿವೆ. ಹಾಗಾಗಿ ಸಂಘಟನೆಗಳು ವಿಘಟನೆಯಾಗಿವೆ ಎಂದು ಕೊಳ್ಳುವುದು ಬೇಡ. ನಾವೆಲ್ಲಾ ನಮ್ಮ ನಮ್ಮ ಸ್ತರದಲ್ಲೇ ಹೋರಾಟ ಮಾಡುತ್ತಿದ್ದೇವೆ ಎಂಬುದಂತಹ ಸಮಾಧಾನದ ಉತ್ತರ ಕಂಡುಕೊಂಡು ಅಂದಿನ ಸಭೆ ಮುಗಿಸಲಾಯಿತು ಎಂದರು.

ಹರಿಹರ ಆನಂದಸ್ವಾಮಿ ಅವರನ್ನು ಔಪಚಾರಿಕವಾಗಿ ಅಭಿನಂದಿಸಿದ ಮಾತ್ರಕ್ಕೆ ನಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಕಳೆದ 35 ವರ್ಷಗಳಿಂದ ಅವರ ಹೋರಾಟಗಳನ್ನು ನೋಡಿದ್ದೇನೆ. ದಲಿತ ಚಳವಳಿ ಎಂದಾಕ್ಷಣ ಅವರು ಹಾಗೂ ಬೆಟ್ಟಯ್ಯ ಕೋಟೆ



ಡಾ.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸನ್ಮಾನಿಸಿದರು.

> ನಮ್ಮ ಸಂಘಟನೆಗಳಿಗೆ ದಾರ್ಷ್ಟ್ಯ ಬರುತ್ತಿಲ್ಲವೆಂದರೆ ಅದಕ್ಕೆ ಕಾರಣ ನಾವು ಹಳೆಯ ಆಲೋಚನ ಕ್ರಮದಲ್ಲೇ ಇದ್ದೇವೆ. ಹಾಗಾಗಿ ಹೊಸ ಆಲೋಚನೆಗಳನ್ನು ನಾವು ರೂಪಿಸಿಕೊಳ್ಳಬೇಕಿದೆ. ನಾವು ಓಟಿನ ಮೂಲಕ ಸರ್ಕಾರ ರಚನೆಯಲ್ಲಿ ಪರಿಣಾಮಕಾರಿ ಪಾತ್ರ ವಹಿಸಿದ್ದೇವೆ. ಆದರೆ ಸರ್ಕಾರ ರಚನೆ ಬಳಿಕ ಪರಿಣಾಮಕಾರಿ ಸ್ಥಾನಗಳನ್ನು ಪಡೆಯುವ ಶಕ್ತಿ ನಮಗೆ ಇನ್ನೂ ಸಾಲುತ್ತಿಲ್ಲ. ಆ ಶಕ್ತಿ ರೂಪಿಸಿಕೊಳ್ಳಲು ತಲಮಟ್ಟದಲ್ಲಿ ದಲಿತ ಸಂಘಟನೆ ವಿಸ್ತಾರವಾಗಬೇಕು.
>
> -ಪ್ರೊ.ಡಿ.ಆನಂದ್

ನೆನಪಾಗುತ್ತಾರೆ. ಹರಿಹರ ಆನಂದಸ್ವಾಮಿ ಹಾಗೂ ಬೆಟ್ಟಯ್ಯಕೋಟೆ ನಾಯಕತ್ವ ವಹಿಸಲಿ. ಆದರೆ ಅವರಿಗೆ ಶಕ್ತಿ ತುಂಬುವ ಯುವ ಪಡೆ ನಿರ್ಮಾಣವಾಗಬೇಕು. ಆ ಯುವ ಪಡೆಗೆ ಸೂಕ್ತ ಮಾರ್ಗದರ್ಶನ ದೊರೆಯಬೇಕು ಎಂದರು.

ಡಿಎಸ್‌ಎಸ್ ಮುಖಂಡ ಬೆಟ್ಟಯ್ಯ ಕೋಟೆ ಮಾತನಾಡಿ, ಚಳವಳಿಯ ಸಿದ್ಧಾಂತಕ್ಕೆ ಹರಿಹರ ಆನಂದಸ್ವಾಮಿ ಕಟಿಬದ್ಧರಾಗಿದ್ದಾರೆ. ಚಳವಳಿಗಾರರಿಗೆ ಬದ್ಧತೆ ಮುಖ್ಯ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು. ಮತ್ತೊಬ್ಬ ಮುಖಂಡ ದೇವಗಳ್ಳಿ ಸೋಮಶೇಖರ್ ಮಾತನಾಡಿ, ಇಂದು ರಾಜ್ಯದಲ್ಲಿ ಜಾತ್ಯಾತೀತ ಸರ್ಕಾರ ಸ್ಥಾಪನೆಯಾಗಿದೆ ಎಂದರೆ ಅದಕ್ಕೆ ದಲಿತ ಚಳವಳಿಯ ಕೊಡುಗೆ ಇದೆ. ಅದನ್ನು ಸರ್ಕಾರ ಮರೆಯಬಾರದು. ಸಂಘಟನೆಯ ಕಾರ್ಯಕರ್ತರ ಜೀವನ ಸಂಕಷ್ಟದಲ್ಲಿದ್ದು, ಅವರು ಬದುಕು ಕಟ್ಟಿಕೊಳ್ಳುವ ರೀತಿಯಲ್ಲಿ ಸರ್ಕಾರ ಆಲೋಚನೆ ಮಾಡಬೇಕು. ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹರಿಹರ ಆನಂದಸ್ವಾಮಿ ಅವರಿಗೆ ಅವರದೇ ಆದ ಆಕಾಂಕ್ಷೆ ಇದೆ. ಈ ಸಂಬಂಧ ಸರ್ಕಾರ ಆಲೋಚನೆ ಮಾಡಬೇಕು ಎಂದು ಒತ್ತಾಯಿಸಿದರು.

ಡಿಎಸ್‌ಎಸ್‌ನ ನಿಂಗರಾಜು ಮಲ್ಲಾಡಿ ಮಾತನಾಡಿ, ಹರಿಹರ ಆನಂದಸ್ವಾಮಿ ಆದರ್ಶ ಹೋರಾಟಗಾರರು. ಇವರ ನಾಯಕತ್ವದಲ್ಲೇ ಚಳವಳಿ ಮುನ್ನಡೆಯಬೇಕಿದೆ ಎಂದರು. ಮಲ್ಲೇಶ್ ಚುಂಚನಹಳ್ಳಿ, ವೆಂಕಟರಮಣ ಸ್ವಾಮಿ ಪಾಪು ಸೇರಿದಂತೆ ಹಲವು ಡಿಎಸ್‌ಎಸ್ ಮುಖಂಡರು ಅಭಿಪ್ರಾಯ ಹಂಚಿಕೊಂಡರು.

ಇದಕ್ಕೂ ಮುನ್ನ ಹಿರಿಯ ದಲಿತ ಚಳವಳಿ ಮುಖಂಡ ಹಾಗೂ ಡಾ.ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹರಿಹರ ಆನಂದಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ವಿಷಯ ಮಂಡಿಸಿದರು.

ಸೆಸ್ಕ್‌ನಿಂದ ಸ್ಮಾರ್ಟ್ ಮೀಟರ್ ಅಳವಡಿಕೆ 15 ದಿನ ಮುಂದೂಡಿಕೆ

ಮೈಸೂರು, ಜೂ.28– ಗ್ರಾಹಕರು ಹಾಗೂ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಸಲ್ಲಿಸಿದ ಮನವಿಯನ್ನು ಪರಿಶೀಲಿಸಿ, ಸೆಸ್ಕ್ ವತಿಯಿಂದ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು 15 ದಿನಗಳ ಕಾಲ ಮುಂದೂಡಲು ಕ್ರಮಕೈಗೊಳ್ಳಲಾಗಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯಾಪ್ತಿಯಲ್ಲಿ ಹೊಸ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರಿಗೆ ಜುಲೈ 1ರಿಂದ ಸ್ಮಾರ್ಟ್ ಮೀಟರ್ ಅಳವಡಿಸುವ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಸ್ಮಾರ್ಟ್ ಮೀಟರ್ ಕುರಿತು ಅರಿವು ಮೂಡಿಸಲು ಸಭೆ ನಡೆಸಲಾಯಿತು.

ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ನಿಗಮ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಸೆಸ್ಕ್ ಐಟಿ ಅಂಡ್ ಎಂಐಎಸ್ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ರಾಮಸ್ವಾಮಿ ಅವರು, ಕೇಂದ್ರ ವಿದ್ಯುತ್ ಪ್ರಾಧಿಕಾರ(ಸಿಇಎ) ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ)ದ ಸೂಚನೆಯಂತೆ ಜುಲೈ 1ರಿಂದ ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಸ್ಮಾರ್ಟ್ ಮೀಟರ್ ಅಳವಡಿಕೆಯಿಂದ ಗ್ರಾಹಕರಿಗೆ ಸಾಕಷ್ಟು ಅನುಕೂಲವಿದ್ದು, ನಿಖರವಾದ ಬಿಲ್ಲಿಂಗ್, ಅನಗತ್ಯ ವಿದ್ಯುತ್ ಬಳಕೆ ತಡೆಯುವುದು, ಸುಲಭವಾಗಿ ರೀಚಾರ್ಜ್ ಮಾಡಿಕೊಳ್ಳುವುದು, ತ್ವರಿತವಾಗಿ ದೋಷಗಳನ್ನು ಪತ್ತೆಹಚ್ಚುವುದು, ವಿದ್ಯುತ್ ಬಳಕೆಯನ್ನು ಟ್ರ್ಯಾಕ್ ಮಾಡಲು ಮತ್ತು ನಿರ್ವಹಿಸುವುದರೊಂದಿಗೆ ವಿದ್ಯುತ್ ಬಳಕೆಯ ಪಾರದರ್ಶಕತೆಯನ್ನು ಒದಗಿಸುತ್ತದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಸೆಸ್ಕ್ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಶರಣಮ್ಮ ಎಸ್. ಜಂಗಿನ, ಮುಖ್ಯ ಇಂಜಿನಿಯರ್ ಮೃತ್ಯುಂಜಯ, ಐಟಿ ಅಂಡ್ ಎಂಐಎಸ್ ವಿಭಾಗದ ಡಿಜಿಎಂ ರಮೇಶ್, ಎಜಿಎಂ ಭರತ್ ಸೇರಿದಂತೆ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.